# ಅನಂತಪಥ

ANANTHKUMAR PRATISHTHANA




ಕನಸುಗಳಿಗೆ
ನಿಜ ರೂಪ ಕೊಟ್ಟ ಧೀಮಂತ


ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-2


ಬಿ.ಎಲ್. ಸಂತೋಷ್


ಸಂಪುಟ-1 | ಅಕ್ಟೋಬರ್ - 2020 | ಸಂಚಿಕೆ - 4


## ಅನಂತಕುಮಾರ್ ಬದುಕಿನ ಶೈಲಿ, ಮೌಲ್ಯಗಳು ಸರ್ವರಿಗೆ ಪ್ರೇರಣೆ ನೀಡಲಿ

**ಶ್ರೀ ಬಿ.ಎಸ್.ಯಡಿಯೂರಪ್ಪ**
ಸನ್ಮಾನ್ಯ ಮುಖ್ಯಮಂತ್ರಿಯವರು

ಮಾಜಿ ಕೇಂದ್ರಸಚಿವರಾದಂತಹ ದಿವಂಗತ ಅನಂತಕುಮಾರ್ ರವರ ೬೧ನೇ ಜನ್ಮದಿನಾಚರಣೆ ಅಂಗವಾಗಿ 'ಅನಂತಪಥ' ಮಾಸಪತ್ರಿಕೆಯನ್ನು ಬಿಡುಗಡೆ ಮಾಡುವುದಕ್ಕೆ ನನಗೆ ಸಂತೋಷವಾಗಿದೆ. ನನ್ನ ಆತ್ಮೀಯ ಸ್ನೇಹಿತ ಅನಂತಕುಮಾರ್ ರವರನ್ನು ಕಳೆದುಕೊಂಡು ಈಗಾಗಲೇ ಎರಡುವರ್ಷ ಕಳೆದುಹೋಗಿದೆ. ಬಹುಶಃ ಒಂದಲ್ಲ ಒಂದು ಕಾರಣಕ್ಕಾಗಿ ಪ್ರತಿನಿತ್ಯ ಅನಂತಕುಮಾರ್ ಅವರನ್ನು ನೆನಪು ಮಾಡಿಕೊಳ್ಳದಿರುವಂತಹ ದಿವಸಗಳೇ ಇಲ್ಲವೆಂದು ನಾನು ಭಾವಿಸಿದ್ದೇನೆ. ನಮ್ಮ ಸ್ನೇಹ ೩೦ವರ್ಷಗಳಿಗಿಂತ ಹಿಂದಿನದು. ಆಗ ವಿದ್ಯಾರ್ಥಿ ಪರಿಷತ್‌ನ ಸಕ್ರಿಯ ಕಾರ್ಯಕರ್ತರಾಗಿದ್ದಂತಹ ಅನಂತಕುಮಾರ್‌ರವರಲ್ಲಿ ನಾಯಕತ್ವದ ಆದರ್ಶದ ಗುಣಗಳನ್ನು ಎಲ್ಲರೂ ಗುರುತಿಸಿದ್ದರು. ಮುಂದೆ ಅವರು ಗಳಿಸಿದ ಯಶಸ್ಸು ಯಾವ ಮಟ್ಟದ್ದು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅನಂತಕುಮಾರ್ ದಂಪತಿಯವರೂ, ನಾವೂ ಒಂದೇ ಮನೆಯಲ್ಲಿ ಅನೇಕ ವರ್ಷಗಳು ಒಟ್ಟಿಗೆ ಇದ್ದೆವು.

ಆ ಅವಧಿಯಲ್ಲಿ ಮುಂಜಾನೆ ೬ ರಿಂದ ೭ ಗಂಟೆಗೆ ವಾಕಿಂಗ್ ಹೋಗುವಾಗ ಮುಂದಿನ ಹೋರಾಟದ ರೂಪುರೇಷೆಗಳು ಏನಿರಬೇಕೆಂದು ನಿರ್ಧರಿಸಿ ದಿಢೀರ್ ರಾಜ್ಯ ಪ್ರವಾಸ ಮಾಡುತ್ತಿದ್ದೆವು. ನಾವಿಬ್ಬರೂ ರಾಜ್ಯದ ಉದ್ದಗಲಕ್ಕೆ ನಿರಂತರವಾಗಿ ಪ್ರವಾಸ ಮಾಡುತ್ತಾ ಇದ್ದೆವು. ಲಾಲ್‌ಕೃಷ್ಣ ಅದ್ವಾನಿಜಿಯವರು ಮೊದಲಾದ ರಾಷ್ಟ್ರೀಯ ನಾಯಕರು, ಮುಖಂಡರು ಬಂದಾಗಲೂ ರಾಜ್ಯದೆಲ್ಲೆಡೆ ಪ್ರವಾಸ ಮಾಡುವಂತಹ ಕೆಲಸವನ್ನು ಮಾಡಿದೆವು. ನಾವು ರಾಜ್ಯದಲ್ಲಿ ಪ್ರಯಾಣಿಸದ ಊರೇ ಇಲ್ಲ. ಪ್ರತಿಯೊಂದು ಹಳ್ಳಿ, ಊರುಊರುಗಳನ್ನು ಸುತ್ತಿ ಭಾರತೀಯ ಜನತಾಪಾರ್ಟಿಯನ್ನು ಕರ್ನಾಟಕದಲ್ಲಿ ಕಟ್ಟುವುದಕ್ಕೆ ಅನಂತಕುಮಾರ್ ಅವರ ಕೊಡುಗೆ ಎಷ್ಟೆಂದು ಹೇಳಲಾಗದು. ಇವತ್ತೇನಾದರೂ ಭಾರತೀಯ ಜನತಾಪಾರ್ಟಿ ಇಂತಹ ಬೆಳವಣಿಗೆ ಕಂಡಿದ್ದರೆ ಅದಕ್ಕೆ



ಸೆಪ್ಟೆಂಬರ್ ೨೨, ೨೦೨೦ ರಂದು ಅನಂತಕುಮಾರರ ಜನ್ಮದಿನ. ವಿಧಾನಸೌಧದಲ್ಲಿ ಅನಂತಪಥದ ಸಂಚಿಕೆಯನ್ನು ಬಿಡುಗಡೆಮಾಡುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು. ಚಿತ್ರದಲ್ಲಿ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಸಿ.ಟಿ. ರವಿ ಮತ್ತು ಶಾಸಕ ಶ್ರೀ ರವಿಸುಬ್ರಮಣ್ಯ ಅವರೂ ಇದ್ದಾರೆ.

ಅನಂತಕುಮಾರ್‌ರವರ ನಿಸ್ವಾರ್ಥ ಸೇವೆಯೇ ಕಾರಣ, ನಾನು ರಾಜ್ಯದ ಮುಖ್ಯಮಂತ್ರಿಯಾಗಿ ಈ ಸ್ಥಳದಲ್ಲಿ ಕುಳಿತಿದ್ದರೆ ಅದಕ್ಕೆ ಅನಂತಕುಮಾರ್‌ರವರ ಕೊಡುಗೆ ಅಪಾರವಾದದ್ದು ಎಂದು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಲು ಇಚ್ಛಿಸುತ್ತೇನೆ. ಆ ದಿನಗಳನ್ನು ನೆನೆದರೆ ಕಣ್ಣಲ್ಲಿ ನೀರು ಬರುತ್ತದೆ. ಬಹುಶಃ ಅನಂತಕುಮಾರ್ ಅವರ ಅಗಲಿಕೆ ನೆನೆದು ಕಣ್ಣು ತೇವವಾಗುತ್ತದೆ. ಒಬ್ಬ ಯಶಸ್ವಿ ನಾಯಕರಾಗಿ ಅನಂತಕುಮಾರ್‌ರವರು ಸಾವಿರಾರು ಅನುಯಾಯಿಗಳನ್ನು ಹೊಂದಿದ್ದರು. ಜನರ ಮಧ್ಯೆ ಬೆರೆತು ಅವರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದ ರೀತಿ ಅನನ್ಯವಾದದ್ದು ಅನಂತಕುಮಾರ್ ರವರ ಪರಿಶ್ರಮದಿಂದಲೇ ಇವತ್ತು ನನಗೆ ನಾಲ್ಕನೆಯ ಬಾರಿಗೆ ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ ಕೆಲಸ ಮಾಡುವಂತಹ ಸೌಭಾಗ್ಯ ಸಿಕ್ಕಿದೆ.


ಪುಟ 4 ರಲ್ಲಿ ಮುಂದುವರಿದಿದೆ


## ಕೇಂದ್ರ-ರಾಜ್ಯದ ನಡುವೆ ಸಂಪರ್ಕದ ಕೊಂಡಿಯಾಗಿದ್ದ ಅನಂತ ಕುಮಾರ್

**ಜಗದೀಶ್ ಶೆಟ್ಟರ್**, ಮಾಜಿ ಮುಖ್ಯಮಂತ್ರಿಗಳು



ಸರ್ವರ ಮೆಚ್ಚುಗೆಗೆ ಪಾತ್ರರಾದ ಯುವನಾಯಕ, ಅತ್ಯಂತ ಸ್ನೇಹಜೀವಿ ಅನಂತ ಕುಮಾರ್ ಇವತ್ತು ನಮ್ಮ ಜೊತೆಯಲ್ಲಿಲ್ಲ. ಆದರೆ ಅವರ ನೆನಪುಗಳು ಮನದಲ್ಲಿವೆ. ಅವರ ನಾಯಕತ್ವದ ಸಾಮರ್ಥ್ಯ, ಸಂಘಟನಾ ಚಾತುರ್ಯ ಎಲ್ಲವೂ ಇವತ್ತಿಗೂ ನಮ್ಮ ನೆನಪಿನ ಅಂಗಳದಲ್ಲಿದೆ. ರಾಷ್ಟ್ರೀಯ ಸ್ವಯಂಸೇವಾ ಸಂಘಟನೆ, ಅಖಿಲಭಾರತ ವಿದ್ಯಾರ್ಥಿ ಪರಿಷತ್ತುಗಳಲ್ಲಿ ಸಕ್ರಿಯರಾಗಿದ್ದಾಗ ಅನಂತ ಕುಮಾರ್ ರಾಜ್ಯದಲ್ಲಿ ಮತ್ತು ರಾಷ್ಟ್ರೀಯಮಟ್ಟದಲ್ಲಿ ಜವಾಬ್ದಾರಿಯನ್ನು ನಿಭಾಯಿಸಿ ನಂತರ ರಾಜಕೀಯಕ್ಕೆ ಸೇರಿದರು. ನಾನೂ ವೈಯಕ್ತಿಕವಾಗಿ ಅಖಿಲ ಭಾರತವಿದ್ಯಾರ್ಥಿ ಪರಿಷತ್ತಿನಿಂದ ರಾಜಕಾರಣಕ್ಕೆ ಬಂದದ್ದು, ಆ ಹಿನ್ನೆಲೆಯಲ್ಲಿ ನಮ್ಮ ಮತ್ತು ಅವರ ನಡುವೆ ಆಪ್ತ ಸಂಬಂಧ ಇನ್ನೂ ಹೆಚ್ಚಾಯಿತು.

ಅವರು ಕರ್ನಾಟಕದಲ್ಲಿ ಎಬಿವಿಪಿ ನಂತರ ನೇರವಾಗಿ ಭಾಜಪದ ಕಾರ್ಯದರ್ಶಿಯಾಗಿ ಜವಾಬ್ದಾರಿ ಹೊಂದಿದ ಮೇಲೆ ಅವರು ಪ್ರದರ್ಶಿಸುತ್ತಿದ್ದ ಹೋರಾಟದ ಮನೋಭಾವ, ಹೋರಾಟದ ನೇತೃತ್ವ, ಅತಿಹೆಚ್ಚಿನ ವೇಗದ ಕಾರ್ಯವೈಖರಿ ಮೊದಲಾದವುಗಳ ಪರಿಣಾಮವಾಗಿ ರಾಜ್ಯದಲ್ಲಿ ಇಂದು ಭಾರತೀಯ ಜನತಾ ಪಕ್ಷ ಹೆಮ್ಮರವಾಗಿ ನಿಂತಿದೆ, ಅಧಿಕಾರಕ್ಕೆ ಬಂದಿದೆ. ಅದಕ್ಕೆ ಯಡಿಯೂರಪ್ಪನವರು ಮತ್ತು ಅನಂತ ಕುಮಾರರ ಜೋಡಿಯೇ ಕಾರಣ. ನಾನು ರಾಜ್ಯಾಧ್ಯಕ್ಷನಾಗಿ ಕೆಲಸ ಮಾಡುವಾಗ, ಎಲ್ಲಾ ಸಂದರ್ಭದಲ್ಲೂ ನನಗೆ ಮಾನ್ಯ ಅನಂತ ಕುಮಾರ್ ಅವರು ಮಾರ್ಗದರ್ಶನ ಮಾಡಿದ್ದಾರೆ, ಅವರ ಮತ್ತೊಂದು ವಿಶೇಷ ಗುಣ ಎಂದರೆ ಕಾರ್ಯಕರ್ತರನ್ನು, ಕಾರ್ಯಕರ್ತರ ಪರಿಯಲ್ಲಿ ನೋಡುವುದು ಮತ್ತು ನಾಯಕರನ್ನು ನಾಯಕತ್ವದ ಗುಣವನ್ನು ಗುರುತಿಸಿ, ಬೆಳೆಸುವುದು. ಅನಂತ ಕುಮಾರ್ ಅವರು ನನಗೆ ಒತ್ತಾಯ ಮಾಡದೇ ಇದ್ದಿದ್ದರೆ ಬಹುಶಃ ನನಗೆ ರಾಜ್ಯಮಟ್ಟದ ನಾಯಕರಾಗಿ ಹೆಚ್ಚಿನ ಜವಾಬ್ದಾರಿ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ.


ಪುಟ 3 ರಲ್ಲಿ ಮುಂದುವರಿದಿದೆ


## ನಿಷ್ಠೆಯೇ ಜೀವನದ ಜೀವಾಳ



**ಸಿ.ಟಿ.ರವಿ,** ಭಾಜಪಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ನನ್ನಂತಹ ಒಬ್ಬ ಕಾರ್ಯಕರ್ತನನ್ನು ತಿದ್ದಿತೀಡಿ ನಾಯಕನ್ನಾಗಿ ಬೆಳೆಸುವ ವಿಶೇಷಗುಣ ಅನಂತ್‌ಕುಮಾರ್ ಅವರಿಗಿತ್ತು. ಸಾಮಾನ್ಯ ಕಾರ್ಯಕರ್ತನಾಗಿದ್ದ ನನ್ನನ್ನು ಕಾರ್ಕಳ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಮಾಡಿ ಹುರುಪು ತುಂಬುವಂಥ ಕೆಲಸವನ್ನು ಅವರು ಮಾಡಿದರು. ಇವತ್ತು ನಮ್ಮಲ್ಲಿ ನಾಯಕರ ಸಾಲಿನಲ್ಲಿ ನಿಂತಿರುವ ಜಗದೀಶ್ ಶೆಟ್ಟರ್‌ರವರು, ಅರವಿಂದ್ ಲಿಂಬಾವಳಿ, ಪ್ರಹ್ಲಾದ ಜೋಷಿ, ಅಶೋಕ್ ಮೊದಲಾದ ಅನೇಕರನ್ನು ಹೀಗೆ ಬೆಳೆಸಿದವರಲ್ಲಿ ಅನಂತ್‌ಕುಮಾರ್ ಅವರದ್ದು ದೊಡ್ಡ ಪಾತ್ರ. ಅವರು ಮತ್ತು ಯಡಿಯೂರಪ್ಪನವರದ್ದು ವಿಶೇಷವಾದ ಜೋಡಿ.. ಕರ್ನಾಟಕದಲ್ಲಿ ಕೇವಲ ಒಂದು ಸ್ಥಾನ ಪಡೆದಿದ್ದ ಪಕ್ಷವನ್ನು ಅಧಿಕಾರಕ್ಕೆ ತರುವವರೆಗೂ, ದಕ್ಷಿಣಭಾರತದಲ್ಲಿ ಭಾರತೀಯ ಜನತಾಪಾರ್ಟಿ ಪ್ರಬಲವಾಗಿ ಬೆಳೆಯುವುದರಲ್ಲೂ ಅನಂತಕುಮಾರರ ಯೋಜನೆ-ಯೋಚನೆ, ಯಡಿಯೂರಪ್ಪನವರ ನಾಯಕತ್ವ ಮುಖ್ಯಪಾತ್ರ ವಹಿಸಿತೆನ್ನುವುದು ಹೊಗಳಿಕೆಯ ಮಾತಲ್ಲ.

ಸಾಮಾಜಿಕ ನ್ಯಾಯದ ಹಿನ್ನೆಲೆಯನ್ನಿಟ್ಟುಕೊಂಡು ಎಲ್ಲಾ ವರ್ಗವನ್ನು ಜೋಡಿಸುವಂತಹ ಕೆಲಸವನ್ನು ಅನಂತಕುಮಾರ್ ಮಾಡಿದರು. ಇಷ್ಟು ಮಾತ್ರವಲ್ಲ, ಅವರು ಕೇಂದ್ರ ಮತ್ತು ರಾಜ್ಯದ ನಡುವೆ ಕೊಂಡಿಯಾಗಿದ್ದರು. ಯಾವುದೇ ಪಕ್ಷ ರಾಜ್ಯದಲ್ಲಿ ಅಧಿಕಾರದಲ್ಲಿರಲಿ ಅವರು ನಮ್ಮ ರಾಜ್ಯದ ವಿಷಯ ಬಂದಾಗ ಕನ್ನಡದ ನೆಲ-ಜಲದ ವಿಷಯ ಬಂದಾಗ ಅನಂತ್‌ಕುಮಾರ್ ಅವರು ಬಿಟ್ಟುಕೊಡುತ್ತಿರಲಿಲ್ಲ. ಅಂತಹ ಒಬ್ಬ ಅನಂತ್‌ರವರನ್ನು ಈ ನಾಡು ಮತ್ತೆ ಮತ್ತೆ ಪಡೆಯಬೇಕು ಎಂದೆನ್ನಿಸುತ್ತದೆ. ಅಂಥ ದೂರದೃಷ್ಟಿ ಉಳ್ಳಂತಹ ನಾಯಕ ಅವರಾಗಿದ್ದರು. ಅಟಲ್‌ಜಿ ಅವರ ಸುವರ್ಣಪಥದ ಯೋಜನೆ ರೂಪಗೊಂಡಾಗ ಅದಕ್ಕೆ ಸುವರ್ಣಚತುಷ್ಪಥ ಹೆದ್ದಾರಿ ಎನ್ನುವಂತಹ ಹೆಸರನ್ನು ನೀಡಿದ್ದು ಅನಂತ್ ಕುಮಾರ್. ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವಿಷಯವಿರಲಿ, ಸಬ್‌ಅರ್ಬನ್ ರೈಲ್ವೆ ಕಲ್ಪನೆ,ಯಾವುದೇ ವಿಷಯವಿರಲಿ ಪ್ರಾಸಬದ್ಧವಾಗಿ ಹೇಳುತ್ತಿದ್ದಂತಹ ಪರಿ ಮರೆಯಲಿಕ್ಕೆ ಸಾಧ್ಯವಿಲ್ಲ.


ಪುಟ 8 ರಲ್ಲಿ ಮುಂದುವರಿದಿದೆ





ಅನಂತ ನೆನಪುಗಳು
ಸುಮಿತ್ರಾ ಮಹಾಜನ್
ಪುಟ - 11

'ದೇಶ ಮೊದಲು' ವೆಬಿನಾರ್ ಸರಣಿಯಲ್ಲಿ
ಪ್ರವೀಣ್ ಭಾರ್ಗವ್ ಭಾಷಣ
ಪುಟ - 5



ಸಾಧಕರೊಡನೆ ಸಂದರ್ಶನ
ಹೆಚ್. ಎಸ್. ವೆಂಕಟೇಶಮೂರ್ತಿ
ಪುಟ - 6





ಪುಟ - 7
ಕನ್ನಡದ ಅನಂತಪ್ರೇಮ

# ಕನಸುಗಳಿಗೆ ನಿಜ ರೂಪ ಕೊಟ್ಟ ಧೀಮಂತ

**ಬಿ.ಎಲ್.ಸಂತೋಷ್**, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಭಾರತೀಯ ಜನತಾ ಪಕ್ಷ

ನಾನು ಕಂಡಂತೆ



ಅನಂತಕುಮಾರ್

ಅನಂತಕುಮಾರ್ ಅವರ ನೆನಪು ಅನ್ನುವುದು ಅದು ಹೀಗೆ ಸುಳಿದು ಹೋಗಿಬಿಡುತ್ತೆ ಅನ್ನುವಂಥ ಒಂದು ಸಣ್ಣ ಗಾಳಿ ಅಲ್ಲ; ಅದು ಸದಾ ನಮ್ಮನ್ನ ಆವರಿಸಿಕೊಂಡಿರುವ, ಎಡೆಬಿಡದೇ ನಮ್ಮ ಜೊತೆಗೆ ಸುಳಿದಾಡತಕ್ಕಂತಹ ನಿರಂತರ ನೆನಪುಗಳ ಮಾಲೆ. ನಾವೆಲ್ಲರೂ ಅವರ ಜೊತೆಗೆ ಬೆಳೆದವರು. ಅವರನ್ನು ಬೆಳೆಸಿದವರೂ ಕೆಲವರು ಇಲ್ಲಿ ಇದ್ದಾರೆ.ಇನ್ನು ಕೆಲವರು ಅನಂತಕುಮಾರರನ್ನು ನೋಡುತ್ತ ನೋಡುತ್ತ ಅವರ ತರಹ ನಾನೂ ಆಗಬೇಕು ಮಾತಾಡಬೇಕು, ಆ ತರಹ ನಾನು ರಾಜಕೀಯ ಚಟುವಟಿಕೆಗಳನ್ನು ಮಾಡಬೇಕು. ಸಂಘಟನೆ ಮಾಡಬೇಕು, ಆರೀತಿಯಲ್ಲಿ ನಾನು ಅಭಿವೃದ್ಧಿಯ ಚಟುವಟಿಕೆಗಳಿಗೆ ಪೋಷಕ ಆಗಬೇಕು ಅನ್ನುವಂಥ ಕನಸನ್ನು ಹೊತ್ತುಕೊಂಡಿರತಕ್ಕಂತಹ ಸಾವಿರಾರು ಜನ ಇದ್ದಾರೆ.

ಸನ್ಮಾನ್ಯ ಅನಂತಕುಮಾರ್ ಅವರ ನೆನಪು ಅನ್ನುವದು ನಮ್ಮ ನೆನಪಿನ ಅಂಗಳಕ್ಕೆ ಇಳಿದುಬಿಟ್ಟು ಹುಡುಕಿ ನೋಡಬೇಕೆಂದೇನೂ ಇಲ್ಲ. ಅಥವಾ ಯಾವುದೋ ಪುಸ್ತಕದಲ್ಲಿ ನೋಡಬೇಕು ಎಂದೂ ಇಲ್ಲ. ನೀವೇನಾದರೂ ಬೆಂಗಳೂರಿನ ವಿಮಾನ ನಿಲ್ದಾಣದಲ್ಲೋ ಮೆಟ್ರೋದಲ್ಲೋ ಹೋಗುತ್ತ ಇದ್ದಾಗ ಅಕಸ್ಮಾತ್ ನಿಮಗೆ ಅನಂತಕುಮಾರ್ ನೆನಪು ಆಗಲಿಲ್ಲವೆಂದರೆ ನಿಮ್ಮಲ್ಲೇ ಏನೋ ಕೊರತೆ ಇದೆ ಅಂತ ಅರ್ಥ. ದೇಶದ ಉದ್ದಗಲಕ್ಕೆ ಓಡಾಡುತ್ತ ಇರಬೇಕಾದರೆ ಜನೌಷಧಿ ಕೇಂದ್ರದ ಫಲಕ ಕಂಡಾಗ ಒಂದು ಕ್ಷಣ ಅನಂತಕುಮಾರ್ ಅವರ ನೆನಪು ನಮ್ಮ ಮನಸ್ಸಿಗೆ ಬರಲಿಲ್ಲ ಅಂತ ಹೇಳಿದರೆ ನಮ್ಮದೇ ಏನೋ ಸಮಸ್ಯೆ ಇದೆ ಅಂತ ಅರ್ಥ. ಯಾವುದೋ ಒಂದು ಬಡಕುಟುಂಬದಲ್ಲಿ ವೃದ್ಧ ದಂಪತಿಗಳು ತಮ್ಮ ಹೃದಯದ ಖಾಯಿಲೆಯ ಕಾರಣಕ್ಕೆ ಸ್ಟೆಂಟ್ ಹಾಕಿಕೊಂಡು ಇನ್ನಷ್ಟು ವರ್ಷಗಳ ಕಾಲ ಬದುಕಬಹುದು, ಅಥವಾ ಮಂಡಿ ಚಿಪ್ಪಿನ ಆಪರೇಶನ್ ಮಾಡಿಸಿಕೊಳ್ಳಬಹುದು ಎಂದು ಉದ್ಗರಿಸಿದಾಗ ಅಲ್ಲಿ ಎದುರಿಗಿದ್ದವರಿಗೆ ಅನಂತಕುಮಾರ್ ನೆನಪು ಅನಿವಾರ್ಯವಾಗಿ ಆಗಲೇಬೇಕು.

೨೦೦೮ರಲ್ಲಿ ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ ಆರೇ ದಿನದಲ್ಲಿ ಅವರು ಎದುರಿಸಿದಂಥ ಮೊಟ್ಟ ಮೊದಲನೇ ಸವಾಲು ಅಂದರೆ ರೈತರಿಗೆ ಗೊಬ್ಬರದ ಕೊರತೆ. ಆ ಕಾರಣಕ್ಕೆ ಗೋಲಿಬಾರ್ ನಡೆದು ರೈತರು ಸಾವಿಗೀಡಾದ ಪ್ರಸಂಗವೂ ನಡೆದಿತ್ತು . ಸನ್ಮಾನ್ಯ ಅನಂತಕುಮಾರ್ ಅವರು ರಸಗೊಬ್ಬರ ಖಾತೆಯ ಸಚಿವರಾದ ನಂತರ ಕಳೆದ ಆರು ವರ್ಷದಲ್ಲಿ ದೇಶದ ಯಾವ ಜಾಗದಲ್ಲೂ ಇವತ್ತು ಗೊಬ್ಬರದ ಕೊರತೆ ಇಲ್ಲ ,ಬೀಜದ ಕೊರತೆ ಇಲ್ಲ ಮಾತ್ರವಲ್ಲ ಗೊಬ್ಬರದ ಕಲಬೆರಕೆಯ ಸಮಸ್ಯೆಯಾಗಲಿ.ಗೊಬ್ಬರದ ಬೆಲೆ ಏರಿಕೆಯ ಸಮಸ್ಯೆಯಾಗಲಿ ಇಲ್ಲ . ಕೋರೋನಾದಂಥ ವಿಷಮ ಸನ್ನಿವೇಶದ ಸಂದರ್ಭದಲ್ಲೂ ರೈತರು ಏದುಸಿರು ಬಿಡದೇ ಕೃಷಿ ಚಟುವಟಿಕೆಗಳನ್ನು ನಡೆಸುವುದನ್ನು ನೋಡಿದಾಗ ಇಂಥ ಎಲ್ಲ ಸಂದರ್ಭಗಳಲ್ಲೂ ನಮಗೆ ಮೊಟ್ಟ ಮೊದಲು ನೆನಪು ಆಗತಕ್ಕಂಥ ಹೆಸರು ಅಂತ ಕೇಳಿದರೆ ಸನ್ಮಾನ್ಯ ಅನಂತಕುಮಾರ್ ಅವರದೇ.

ಈಗ ಗಮನಿಸಿ. ಬೆಂಗಳೂರಿನ ಅತ್ಯಾಧುನಿಕ ವಿಮಾನ ನಿಲ್ದಾಣದಿಂದ ಹಿಡಿದು ಗ್ರಾಮಾಂತರದ ಒಂದು ರಸಗೊಬ್ಬರದ ಅಂಗಡಿಯವರೆಗೆ ವೈವಿಧ್ಯಮಯ ಸನ್ನಿವೇಶಗಳಲ್ಲಿ ಒಬ್ಬ ವ್ಯಕ್ತಿಯೂ ಆತನ ಕರ್ತೃತ್ವವೂ ಯಾವ ರೀತಿಯಲ್ಲಿ ಸಮಾಜಕ್ಕೆ ದೇಶಕ್ಕೆ ಉಪಯೋಗಿಯಾಗಿ ಬದುಕಬಹುದು ಅನ್ನುವುದಕ್ಕೆ ಸನ್ಮಾನ್ಯ ಅನಂತಕುಮಾರ್ ಅವರು ಒಂದು ಮೇರು ನಿದರ್ಶನವಾಗಿದ್ದಾರೆ ಎಂದರೆ ಅತಿಶಯೋಕ್ತಿಯಲ್ಲ .

ರಾಜಕೀಯದ ಪಡಸಾಲೆಗಳಲ್ಲಿ ಕೇಳಿಬರುವ ಭಾಷಣದಲ್ಲಿ ಶಬ್ದಗಳಿಗಿಂತ ವಿಶೇಷಣಗಳೇ ಬಹಳ ಜಾಸ್ತಿ ಎನ್ನುವುದಿದೆ. ಆದರೆ ಅನಂತಕುಮಾರ್ ಅವರನ್ನು, ಯಾವುದೇ ಉಪಾಧಿ ಇಲ್ಲದೆಯೂ ಕೂಡ ಜನ ಮೆಚ್ಚಿಕೊಂಡರು ಯಾಕೆ ಅಂದರೆ ಅವರು ಮಾಡಿರತಕ್ಕಂತಹ ಕೆಲಸಗಳಿಗೋಸ್ಕರ. ಅವರು ಸ್ವಂತ initiativeನ ಜೊತೆಗೆ ಈ ಎಲ್ಲ ಕೆಲಸಗಳನ್ನು ಮುಂದುವರೆಸಿರತಕ್ಕಂತಹ ರೀತಿ ನಮ್ಮೆಲ್ಲರ ನೆನಪಿನಲ್ಲಿ ಇನ್ನೂ ಹಸಿರಾಗಿದೆ. ಕೇವಲ ಹಸಿರು ಸಸ್ಯಾಗ್ರಹದ ಕಾರಣಕ್ಕೆ ಬೆಂಗಳೂರು ನಗರ ಇವತ್ತು ಹಸಿರು ಬೆಂಗಳೂರು ಆಗುತ್ತ ಇರುವುದರ ಜೊತೆಗೆ ಈ ಎಲ್ಲ ಕೆಲಸಗಳ ಕಾರಣಕ್ಕೆ ಅನಂತಕುಮಾರ್ ಅವರ ನೆನಪು ಕೂಡ ನಮ್ಮಲ್ಲಿ ಶಾಶ್ವತವಾಗಿ ಇರುತ್ತೆ.

ಕನ್ನಡದ ಮಾತು ಅಂತ ಹೇಳಿದರೆ ಅದು ಅನೇಕ ಸಲ, ಸಾಂದರ್ಭಿಕ ಚಟುವಟಿಕೆಗಳಿಗೂ ಲಾಭಗಳಿಗೂ ಉಪಯೋಗಿಸಿಕೊಳ್ಳುವಂತಹ ಈ ಕಾಲದಲ್ಲಿ ಕನ್ನಡದ ಸಹಿಯನ್ನು ನಾವು ಮೊದಲು ನೋಡಿದ್ದು ಅನಂತಕುಮಾರ್ ಅವರ ಕೈಯಿಂದಲೇ. ಅವರು ಕನ್ನಡದಲ್ಲಿ ಸಹಿ ಹಾಕುತ್ತ ಇದ್ದಾರೆ ಅಂತ ನೋಡಿ ನಾವೆಲ್ಲರೂ ಕನ್ನಡದಲ್ಲಿ ಸಹಿ ಹಾಕಲಿಕ್ಕೆ ಆರಂಭ ಮಾಡಿದೆವು. ವಿಶ್ವಸಂಸ್ಥೆಯಲ್ಲಿ ಅಟಲ್‌ಜೀ ಹಿಂದಿಯಲ್ಲಿ ಮಾತಾಡಿದ ಹಾಗೆಯೇ ಅನಂತಕುಮಾರ್ ಅವರು ವಿಶ್ವಸಂಸ್ಥೆಯಲ್ಲಿ ಕನ್ನಡದಲ್ಲಿ ಮಾತನಾಡಿದರು. ಅಂದರೆ ಅನಂತಕುಮಾರ್ ಅವರು ಸಮಾಜ ಜೀವನದಲ್ಲಿ ನಡೆದುಕೊಳ್ಳುತ್ತ ಇದ್ದಂತಹ ಆ spectrum bandwidth ವೈವಿಧ್ಯ ವಿಸ್ತಾರಗಳನ್ನು ನಮಗೆ ಊಹೆ ಮಾಡಿಕೊಳ್ಳುವುದಕ್ಕೂ ಕೂಡ ಬಹಳ ಕಷ್ಟ . ಜೊತೆಗೆ ಅವರಿಗೆ ತೇಜಸ್ವಿನಿಯವರ ಒಂದು ಅದಮ್ಯವಾಗಿರತಕ್ಕಂತಹ ಬಲವೂ ಇತ್ತು. ಆದರೆ ಆ ಬಲದ ಮಧ್ಯದಲ್ಲಿ ಒಂದು ಕಲ್ಪನೆಯೂ ಬೇಕಿತ್ತು . ಒಬ್ಬ ಮನುಷ್ಯ ಬೆಂಗಳೂರಿನ ವಿಮಾನ ನಿಲ್ದಾಣದ ಬಗ್ಗೆ ಯೋಚನೆ ಮಾಡುತ್ತಲೇ ಅದರ ಜೊತೆಗೆ ಬೆಂಗಳೂರಿಗೆ ಒಂದು ಕೋಟಿ ಸಸ್ಯ ಬೇಕು ಅಂತ ಯೋಚನೆ ಮಾಡುವದು ಇವತ್ತಿನ capitalist ಜಗತ್ತಿನಲ್ಲಿ ಸ್ವಲ್ಪ ವಿಚಿತ್ರವೆಂದೇ ಹೇಳಬೇಕು.

ಒಬ್ಬ ಸಾಮಾನ್ಯ ಕಾರ್ಯಕರ್ತನಿಗೂ ಕೂಡ, ನಾನು ನಿಮ್ಮ ಜೊತೆಗೆ ಇದ್ದೀನಿ, ನಾನು ನಿನ್ನ ಜೊತೆಗೆ ಇರತಕ್ಕಂತಹ ಒಬ್ಬ ಕಾರ್ಯಕರ್ತ ಎನ್ನುವ ಒಂದು ಸಹವಾಸದ ಭಾಗ್ಯವನ್ನು ಕೊಡಬಲ್ಲ ಸಂಸ್ಕಾರವೂ ಇತ್ತು. ಸಮಾಜದ ಜೀವನವನ್ನು ಇನ್ನೊಂದು ಮೆಟ್ಟಿಲಿಗೆ ಏರಿಸಬಹುದಾದ ಬಹು ದೊಡ್ಡ ಕಲ್ಪನಾ ಶಕ್ತಿ ಕೂಡ ಅವರಲ್ಲಿತ್ತು.

ಅನಂತಕುಮಾರ್ ವಿದ್ಯಾಭ್ಯಾಸ ಮುಗಿಸಿ ವಿದ್ಯಾರ್ಥಿ ಪರಿಷತ್ತಿನ ಅಂಗಳದಲ್ಲಿ ಅವರು ತಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಳ್ಳುತ್ತ ನಡೆದರು. ಶ್ರೀ ಕೃಷ್ಣಭಟ್ಟರು, ದತ್ತಾಜೀಯವರು, ಜಯದೇವ ಅವರು ಮಾನ್ಯ ಶೇಷಾದ್ರಿಯವರು- ಈತರಹ ಅನೇಕ ಹಿರಿಯರ ಶಿಲ್ಪ ಶಾಲೆಯಲ್ಲಿ , ಒಬ್ಬ ಶಿಲ್ಪಿ ಹೇಗೆ ಈಗ ಕಲ್ಲಿನಲ್ಲಿ ಶಿಲ್ಪವನ್ನು ಕಲ್ಪಿಸಿಕೊಂಡು ಅದನ್ನು ಹೊರತರುವುದರಲ್ಲಿ ತನ್ನದೇ ಆದ ಪಾತ್ರವನ್ನು ಒಬ್ಬ ಶಿಲ್ಪಿ ವಹಿಸುತ್ತಾನೆಯೋ ಹಾಗೇ ಈತರಹದ ಹತ್ತಾರು ಜನ ಹಿರಿಯರ ಪ್ರಯತ್ನದಿಂದ ಅನಂತಕುಮಾರ್ ಅನ್ನತಕ್ಕಂತಹ ಒಂದು ವ್ಯಕ್ತಿತ್ವ ನಿಧಾನವಾಗಿ ವಿಕಾಸಗೊಳ್ಳತೊಡಗಿತು.



ಪಕ್ಷದಲ್ಲೂ ಕೂಡ ಎಲ್ಲರೂ ಕೂಡ ದಿಗ್ಗಜರೇ, ಒಬ್ಬರಿಗಿಂತ ಒಬ್ಬರು ದೈತ್ಯ ಪ್ರತಿಭೆಗಳು ಸಂಘಟನೆಯ ಮಟ್ಟಿಗೆ. ದೇಶದ ಮಟ್ಟಿಗೆ ಒಬ್ಬರಿಗಿಂತ ಒಬ್ಬರು ಪ್ರಖ್ಯಾತರು. ಅಂತಲೇ ಅನಂತಕುಮಾರ್ ಈ ಎಲ್ಲರ ಮಧ್ಯದಲ್ಲಿ ತುಂಬಾ ಚಿಕ್ಕವರಾಗಿ ಅವರು ವರ್ತಿಸಿದರು. ಇನ್ನೊಂದೆಡೆ ಎಲ್ಲರ ಮಧ್ಯದಲ್ಲಿ ತುಂಬಾ ದೊಡ್ಡವರಾಗಿ ಕಾಣಿಸಿಕೊಂಡರು. ಇವೆರಡು ಪಾತ್ರಗಳನ್ನೂ ಅವರು ಸಮರ್ಥವಾಗಿ ನಿರ್ವಹಿಸಿದರು. ಹೇಗೆಂದರೆ, ಸಂಘಟನೆಯ ಕಾರಣಕ್ಕೆ ಇವರು ಎಲ್ಲರ ಮಧ್ಯದಲ್ಲಿ ತುಂಬಾ ಸಣ್ಣವರಾಗಿ ಅವರನ್ನೆಲ್ಲ ಜೋಡಿಸತಕ್ಕಂತಹ ಒಂದು ದಾರವಾಗಿ ಅನಂತಕುಮಾರ್ ಹದಿನೈದು ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡಿದರು. ಎಲ್ಲ ನಾಯಕರ ಮಧ್ಯದಲ್ಲಿ ಒಂದು ಅತ್ಯುತ್ತಮವಾಗಿರತಕ್ಕಂತಹ ಸಂಘಟನೆಯ ಕೊಂಡಿಯಾಗಿದ್ದರು. ಕರ್ನಾಟಕದ ರಾಜ್ಯದ ಕರ್ನಾಟಕ ರಾಜಕಾರಣದ ಅಂಗಳದಿಂದ ೧೯೯೬ರಲ್ಲಿ ಅವರು ಲೋಕಸಭಾ ಸದಸ್ಯರಾಗಿ ದೆಹಲಿ ಪ್ರವೇಶ ಮಾಡಿದ ನಂತರ ಅವರು ರಾಷ್ಟ್ರೀಯ ನೆಲೆಯಲ್ಲಿ ತನ್ನ ಎಲ್ಲ ಪ್ರತಿಭೆಯನ್ನು ಕರ್ತೃತ್ವಶಕ್ತಿಯನ್ನು ಧಾರೆಯೆರೆಯುತ್ತ ತಮ್ಮ ಕಡೆಯ ದಿನಗಳವರೆಗೆ ದೆಹಲಿಯ ಅಂಗಳದಲ್ಲಿ ಅವರು ತನ್ನದೇ ಆಗಿರತಕ್ಕಂತಹ ಪಾತ್ರವನ್ನು ನಿರ್ವಹಿಸಿದರು.

ಅವರು ಯಾವಾಗಲೂ ತನ್ನನ್ನು ಪಕ್ಷದ ಚೌಕಟ್ಟಿಗೆ ಮಾತ್ರ ಸೀಮಿತ ಮಾಡಿಕೊಳ್ಳಲಿಲ್ಲ. ಪಕ್ಷ ಬೆಳೆಸಬೇಕು, ಪಕ್ಷ ಗಟ್ಟಿಯಾಗಬೇಕು ಅಂತ ಇರಬೇಕಾದರೆ ಪಕ್ಷಕ್ಕೆ ಸೇರದೇ ಇರತಕ್ಕಂಥ ವ್ಯಕ್ತಿಗಳ ಜೊತೆಗೂ ಕೂಡ ಅತ್ಯುತ್ತಮವಾದ ಸಂಪರ್ಕ ಅವರಿಗಿತ್ತು, ವಿಶೇಷವಾಗಿ ಕರ್ನಾಟಕದ ಮತ್ತು ಬೆಂಗಳೂರಿನ ಕೆಲಸಕ್ಕೆ ಅವರು ಯಾವತ್ತು ಕೂಡ ರಾಜಕೀಯದ ಚೌಕಟ್ಟನ್ನು ಎಂದೂ ಜೋಡಿಸಲಿಲ್ಲ. ಬೇರೆ ಬೇರೆ ಪಕ್ಷದ ಅನೇಕ ಕಾರ್ಯಕರ್ತರು ಸಂಸದರು ಮತ್ತು ಶಾಸಕರು ದೆಹಲಿಯಲ್ಲಿ ಏನು ಕೆಲಸ ಆಗಬೇಕು ಅದಕ್ಕೆ ಸನ್ಮಾನ್ಯ ಅನಂತಕುಮಾರ್ ಅವರನ್ನು ಅವಲಂಬಿಸುತ್ತ ಇದ್ದುದನ್ನು ಎಲ್ಲರೂ ಬಲ್ಲರು.

ಅನಂತಕುಮಾರ್ ಅವರು ದೆಹಲಿಯಲ್ಲಿ ಅತ್ಯಂತ ಹೆಸರುವಾಸಿಯಾಗಿರುವದು ಅವರು ಸಂಸದೀಯ ಖಾತೆ ಸಚಿವರಾಗಿ. ದೇಶದಲ್ಲಿ ಅವರು ನಾಗರಿಕ ವಿಮಾನ ಖಾತೆ ಸಚಿವರಾಗಿ, ರಸಗೊಬ್ಬರ ಮತ್ತು ರಾಸಾಯನಿಕ ಸಚಿವರಾಗಿ ಹೆಸರು ಮಾಡಿರಬಹುದು. ಆದರೆ ದೆಹಲಿಯಲ್ಲಿ ಅವರ ರಾಜಕೀಯ ಕುಶಲತೆ ಏನಿತ್ತೋ ಆ ಎಲ್ಲ ಕುಶಲತೆಯನ್ನು ಅವರು ಲೋಕತಂತ್ರದ ಮಂದಿರಗಳಾದ ಆ ಎರಡು ಸದನಗಳನ್ನು ನಡೆಸುವುದರಲ್ಲಿ ಅವರು ಧಾರೆ ಎರೆದರು ಅಂತ ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಸಂಘಟನೆಯಲ್ಲೂ ಅಷ್ಟೇ ಅವರದ್ದು ಬಹಳ ದೊಡ್ಡದಾಗಿರತಕ್ಕಂತಹ ಪಾತ್ರ. ಮೇಲಕ್ಕೆ ಏರುತ್ತ ಇದ್ದ ಹಾಗೇ ಯಾವ ನೆಲದಿಂದ ನಾವು ಮೇಲೆ ಬಂದೆವೋ ಆ ನೆಲವನ್ನು ಮರೆಯತಕ್ಕಂತದ್ದು ಮನುಷ್ಯ ಸ್ವಭಾವ. ಅನಂತಕುಮಾರ್ ಅವರಿಗೆ ತಾನು ಯಾವುದೇ ಎತ್ತರಕ್ಕೆ ಏರಿ ಯಾವುದೇ ಅಂಚುಗಳನ್ನು ಮುಟ್ಟಿದಾಗಲೂ ತನ್ನನ್ನು ಆ ಜಾಗಕ್ಕೆ ಕರೆದುಕೊಂಡು ಹೋದಂಥ ಸಂಘಟನೆ ಬಗ್ಗೆ ಅವರಿಗೆ ಇದ್ದಂತಹ ವಾತ್ಸಲ್ಯ. ಬದ್ಧತೆ ಅದು ಎಂದು ಕೂಡ ಮರೆಯಲಿಲ್ಲ. ಇವತ್ತು ಬಿಹಾರ್ ಮಧ್ಯಪ್ರದೇಶ್ ಜಾರ್‌ಖಂಡ್ ಛತ್ತಿಸ್‌ಘಡ್ ಮೊದಲಾದ ಅನೇಕ ರಾಜ್ಯಗಳಲ್ಲಿ ನಾವು ಪ್ರವಾಸ ಮಾಡುತ್ತ ಇರಬೇಕಾದರೆ ಅಲ್ಲಿ ಮಂಡಲ ಮಟ್ಟದ ಕಾರ್ಯಕರ್ತರೂ ಕೂಡ ಅನಂತಕುಮಾರ್ ನಮ್ಮ ಊರಿಗೆ ಬಂದಿದ್ದರು ಅನ್ನುವ ಮಾತುಗಳನ್ನು ಕೇಳುವಾಗ ನನಗೆ ಆಶ್ಚರ್ಯವಾಗುತ್ತೆ. ಇವರು ಕೇಂದ್ರದಲ್ಲಿ ಮಂತ್ರಿಯಾಗಿದ್ದು ದೆಹಲಿ ನಿಭಾಯಿಸುತ್ತ ಇರಬೇಕಾದರೆ ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷವನ್ನು ಕಟ್ಟಿ ಬೆಳೆಸುತ್ತ ಇರಬೇಕಾದರೆ ಇವರು ಈ ಮಂಡಲಕ್ಕೆ ಬರುವುದಕ್ಕೆ ಎಲ್ಲಿ ಪುರುಸೊತ್ತು ಆಯಿತು ಅಂತ ನಮಗೆ ಆಶ್ಚರ್ಯವಾಗುತ್ತೆ

ಅವರು ಅಷ್ಟು ಉನ್ನತ ಮಟ್ಟದಲ್ಲಿ ಇದ್ದರೂ ಸಂಘಟನೆಯ ವಿಷಯದಲ್ಲಿ ಅತ್ಯಂತ ತಳಮಟ್ಟದ ಕೆಲಸವನ್ನು ಮಾಡುವುದರಲ್ಲಿಯೂ ಕೂಡ ಅವರಿಗೆ ಅಭಿರುಚಿಯೂ ಇತ್ತು, ಶಕ್ತಿಯೂ ಇತ್ತು, ಮಾನಸಿಕತೆ ಕೂಡ ಇತ್ತು. ಭಾರತೀಯ ಜನತಾ ಪಕ್ಷ ಕರ್ನಾಟಕದಲ್ಲಿ ಆವರೆಗಿನ ಉಚ್ಛ್ರಾಯ ಸ್ಥಿತಿಯನ್ನ ಕಂಡಿದ್ದು ಅನಂತಕುಮಾರ್ ಅವರು ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ. ಲೋಕಸಭೆಯ ೧೮ ಕ್ಷೇತ್ರಗಳನ್ನು ೭೯ ವಿಧಾನಸಭೆಯ ಕ್ಷೇತ್ರಗಳನ್ನು ಪಕ್ಷ ಗೆದ್ದಿತು. ಸನ್ಮಾನ್ಯ ಯಡಿಯೂರಪ್ಪನವರ ನಾಯಕತ್ವ ಮತ್ತು ಅನಂತಕುಮಾರರ ಸಂಘಟನೆಯ ನೇತೃತ್ವ ಇವು ಎರಡು ದೇಶದ ಗಮನವನ್ನು ಸೆಳೆದವು. ದಕ್ಷಿಣ ಭಾರತದಲ್ಲಿ ಬಿ.ಜೆ.ಪಿ.ಅಧಿಕಾರಕ್ಕೆ ಬರುವದು ಅಸಾಧ್ಯ ಎಂಬ ಮಾತನ್ನು ಇವರಿಬ್ಬರೂ ಸುಳ್ಳಾಗಿಸಿದರು.

ಇವತ್ತು ಭಾರತೀಯ ಜನತಾ ಪಕ್ಷದಲ್ಲಿ ಇರತಕ್ಕಂತಹ ಅನೇಕರು ನಾನು ಪಾರ್ಟಿಗೆ ಬಂದಿದ್ದು ಅನಂತಕುಮಾರ್ ಅವರ ಕಾರಣಕ್ಕೆ ಎನ್ನುವುದುಂಟು. ರಾಜಕೀಯದಲ್ಲಿ ವ್ಯಕ್ತಿತ್ವವನ್ನು ಬಳಸುವದರ ಜೊತೆಗೆ ಅನಂತಕುಮಾರ್ ಅವರು ತಮ್ಮ ಸ್ನೇಹ ಮತ್ತು ಸಂಬಂಧವನ್ನು ಅಷ್ಟೇ ಬಲವಾಗಿ ಧನಾತ್ಮಕವಾಗಿ ಅವರು ಉಪಯೋಗಿಸಿದರು.

ಅನಂತಕುಮಾರ್ ಸಂಘಟನೆಯಲ್ಲಿ ಸೃಜನಾತ್ಮಕವಾಗಿ ಯಾವ ತರಹ ಯೋಚನೆ ಮಾಡಬಹುದು, ಕಾರ್ಯಕರ್ತರನ್ನು ಯಾವ ಯಾವ ರೀತಿಯಲ್ಲಿ ಕೆಲಸಕ್ಕೆ ತೊಡಗಿಸಬಹುದು. ಕಾರ್ಯಕರ್ತರಿಗೆ ಯಾವ ಯಾವ ರೀತಿಯಲ್ಲಿ ಧನಾತ್ಮಕವಾಗಿರತಕ್ಕಂತಹ ಕೆಲಸಗಳನ್ನ ಕೊಡಬಹುದು ಎಂಬುದಕ್ಕೆ ಅನಂತಕುಮಾರ್ ಅವರು ಕೂಡ ಒಂದು benchmark ಅಂತ ಹೇಳಿದರೆ ನಾನು ಭಾವಿಸುತ್ತೇನೆ. ಉದಾಹರಣೆಗೆ, ೧೯೯೨ನೇ ಇಸವಿಯಲ್ಲಿ. ಬೆಂಗಳೂರಿಗೆ ಏಕತಾ ಯಾತ್ರೆ ಬರುವಂತಹ ಸಂದರ್ಭದಲ್ಲಿ ಆ ಕಾರ್ಯಕ್ರಮ ಹೇಗೆ ನಡೆಸಬೇಕು ಅನ್ನುವುದಕ್ಕೆ ಒಂದು ಬೈಟಕ್ ಸಭೆ ಕೇಶವಶಿಲ್ಪದಲ್ಲಿ ನಡೆಯಿತು. ಭಾಷಣಗಳು ಎಲ್ಲ ಮುಗಿದಿತ್ತು. ಕೊನೆಯಲ್ಲಿ ಅನಂತಕುಮಾರ್ ಅವರು ನಾವು ನಡೆಸಬೇಕಾಗಿರುವ ಚಟುವಟಿಕೆಗಳ

ಪುಟ 4 ರಲ್ಲಿ ಮುಂದುವರಿದಿದೆ

# ಅಭಿವೃದ್ಧಿ ಹಾಗೂ ಸಂರಕ್ಷಣೆಯಲ್ಲಿ ಸಮತೋಲನ



ತಂತ್ರಜ್ಞಾನ, ವಿಜ್ಞಾನ ಹಾಗೂ ತರ್ಕದ ಸಮ್ಮಿಳನದಿಂದ ಪರಿಸರ ಸಂರಕ್ಷಣೆಯನ್ನು ಸಾಧಿಸಲು ಸಾಧ್ಯವಿದ್ದು, ಕೇವಲ ಆಧುನಿಕತೆಯನ್ನು ವಿರೋಧಿಸುವುದರಿಂದಲೇ ಪರಿಸರ ಸಂರಕ್ಷಣೆಯಾಗಲಾರದು ಎಂದು ವನ್ಯಜೀವಿ ಸಂರಕ್ಷಣಾ ಯೋಜನೆಗಳಿಗೆ ವೈಜ್ಞಾನಿಕ ಆಯಾಮವನ್ನು ನೀಡಿದ ಸಂಶೋಧಕ ಜೀವಶಾಸ್ತ್ರಜ್ಞರಾದ ಉಲ್ಲಾಸ್ ಕಾರಂತ್ ಅಭಿಪ್ರಾಯಪಟ್ಟರು. ಅಭಿವೃದ್ದಿ ಹಾಗೂ ಸಂರಕ್ಷಣೆಯಲ್ಲಿ ಸಮತೋಲನ - ನೀತಿ ನಿರೂಪಣೆಯಲ್ಲಿ ವೈಜ್ಞಾನಿಕ ವಿಧಾನದ ಬಳಕೆ ಎಂಬ ವಿಚಾರದ ಕುರಿತು ಅನಂತಕುಮಾರ್ ಪ್ರತಿಷ್ಠಾನ ಬೆಂಗಳೂರಿನಲ್ಲಿ ಆಯೋಜಿಸಿದ್ದ "ದೇಶ ಮೊದಲು " ವೆಬಿನಾರ್ ಸಂವಾದದ ಎರಡನೆಯ ಸರಣಿಯನ್ನು ಎರಡನೇ ಸರಣಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅಭಿವೃದ್ಧಿಯ ಜೊತೆಯಲ್ಲಿ ಸಂರಕ್ಷಣೆ ಸಾಧ್ಯವಿದೆ ಎನ್ನುವುದು ಇತ್ತೀಚಿನ ವರ್ಷಗಳಲ್ಲಿ ಸಾಬೀತಾಗಿದೆ. ಉದಾಹರಣೆಗೆ, ಕರಾವಳಿ ಪ್ರದೇಶದ ಜಿಲ್ಲೆಗಳಲ್ಲಿ ಕಳೆದ ಎರಡು ದಶಕಗಳಲ್ಲಿ ನಗರೀಕರಣ, ಕೈಗಾರಿಕೀಕರಣ ಹಾಗೂ ಅಭಿವೃದ್ಧಿಯಿಂದ ಹುಲಿಯ ಜನಸಂಖ್ಯೆಯ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮ ಬೀರಿಲ್ಲ. ೧೯೫೦ರ ದಶಕದಲ್ಲಿ ಬೇಟೆ, ಮರಹನನ ವ್ಯಾಪಕವಾಗಿದ್ದ ಕಾಲದಲ್ಲಿ ದಕ್ಷಿಣ ಕನ್ನಡದ ಕಾಡುಗಳಲ್ಲಿ ಕೆಲವೇ ಹುಲಿಗಳಿದ್ದವು. ಮುಂದಿನ ವರ್ಷಗಳಲ್ಲಿ ಹುಲಿಯನ್ನು ಕಾಡಿನಲ್ಲಿ ಕಾಣಲು ಸಾಧ್ಯವೇ ಇಲ್ಲ ಎಂದು ಯಾರಾದರೂ ಹೇಳಬಹುದಾದ ಸ್ಥಿತಿಯಿತ್ತು. ಆದರೆ, ಜನಸಂಖ್ಯೆ ನಾಲ್ಕೈದು ಪಟ್ಟು ಹೆಚ್ಚಿ, ಕಾಡಿನ ವಿಸ್ತಾರ ಕಡಿಮೆಯಾಗಿರುವ ವರ್ತಮಾನದ ಸಂದರ್ಭದಲ್ಲೂ ನೀವು ಅಳಿದುಳಿದಿರುವ ಕಾಡುಗಳಲ್ಲಿ ಹುಲಿಗಳನ್ನು ನೋಡಬಹುದಾಗಿದೆ. ಎಂದಮೇಲೆ, ಅಭಿವೃದ್ಧಿ ಮತ್ತು ಸಂರಕ್ಷಣೆ ಜೊತೆಗೂಡಿ ಸಾಗಬಹುದಾಗಿದೆ ಎಂದಾಯಿತು.

**ಉಲ್ಲಾಸ ಕಾರಂತ**

ಕೇವಲ ಅಭಿವೃದ್ಧಿ ಹಾಗೂ ಕೈಗಾರಿಕೀಕರಣವನ್ನು ಕಡಿಮೆ ಮಾಡುವುದರಿಂದ ಮಾತ್ರ ಪರಿಸರ ಸಂರಕ್ಷಣೆ ಸಾಧ್ಯ ಎನ್ನುವ ವಾದ ಸರಿಯಲ್ಲ. ಆಧುನಿಕ ತಂತ್ರಜ್ಞಾನ, ವಿಜ್ಞಾನ ಹಾಗೂ ತರ್ಕದ ಸಮ್ಮಿಳನದಿಂದ ಪರಿಸರ ಸಂರಕ್ಷಣೆಯನ್ನು ಸಾಧಿಸಲು ಸಾಧ್ಯವಿದೆ. ಮುಂದಿನ ದಿನಗಳಲ್ಲಿ ಇವುಗಳ ಸಮರ್ಥವಾದ ಬಳಕೆಯನ್ನು ನಾವು ಉತ್ತೇಜಿಸಬೇಕಾಗಿದೆ. ಅರಣ್ಯ ಪರಿಸರಸಂರಕ್ಷಣೆಯೆನ್ನುವುದು ಅಭಿವೃದ್ಧಿಗೆ ವಿರೋಧಿಯಲ್ಲ. ಸರಿಯಾದ ತರ್ಕ, ವಿಜ್ಞಾನಗಳನ್ನು ಬಳಸಿ ಸಕಾರಣವಾಗಿ ಯೋಜನೆಗಳನ್ನು ರೂಪಿಸಿದಾಗ, ಪರಿಸರಕ್ಕೆ ಧಕ್ಕೆಯಾಗದಂತೆ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿದೆ. ಅರಣ್ಯ , ಪರಿಸರಗಳ ಸಂರಕ್ಷಣೆಯೆನ್ನುವುದು ಅಭಿವೃದ್ಧಿಯ ಚಾಲನೆಗೆ ಪೂರಕವಾದ ಅಂಶ. ಈಗ ಕೇವಲ ಶೇಕಡಾ ಎರಡೂವರೆಯಷ್ಟು ಭೂಪ್ರದೇಶದಲ್ಲಿ ಉಳಿದುಕೊಂಡಿರುವ ಜೀವವೈವಿಧ್ಯ ಪ್ರದೇಶಗಳನ್ನೂ ಅಭಿವೃದ್ಧಿಯ ಹೆಸರಿನಲ್ಲಿ ನಾಶಪಡಿಸುವ ಹುನ್ನಾರವನ್ನು ಮಾತ್ರವೇ ಆಕ್ಷೇಪಿಸಬೇಕಾಗಿದೆ. ಸೂಕ್ತವಾದ ತರ್ಕ, ತಂತ್ರಜ್ಞಾನ, ವಿಜ್ಞಾನಗಳ ಅನ್ವಯದಿಂದ ರೂಪಿಸುವ ಯೋಜನೆಗಳಿಂದ ನಮ್ಮ ಜೀವವೈವಿಧ್ಯವನ್ನು ಈಗಲೂ ತಕ್ಕಮಟ್ಟಿಗೆ ಕಾಪಾಡಿಕೊಳ್ಳಬಹುದಾಗಿದೆ. ಅರಣ್ಯದ ಬುಡಕಟ್ಟು ತರುಣನೊಬ್ಬನನ್ನು ಇಂಜಿನಿಯರಿಂಗ್ ಪದವೀಧರನನ್ನಾಗಿ ನೋಡುವುದೂ ಸಂರಕ್ಷಣೆಯ ಒಂದು ಆದರ್ಶಸ್ಥಿತಿಯಾಗಿದೆ ಎಂದು ಉಲ್ಲಾಸ ಕಾರಂತರು ವಿವರಿಸಿದರು. ಪಶ್ಚಿಮ ಘಟ್ಟಗಳಲ್ಲಿ ಗಣಿಗಾರಿಕೆಯನ್ನು ಪ್ರೋತ್ಸಾಹಿಸದೆ, ಹೆಚ್ಚಿನ ನೈಸರ್ಗಿಕ ಸಂಪತ್ತು ಇಲ್ಲದಿರುವ ಪ್ರದೇಶಗಳಲ್ಲಿ ಗಣಿಗಾರಿಕೆ ಮಾಡಿದರೆ , ನಿಸರ್ಗ ಪರಿಸರದ ಮೇಲೆ ಹೆಚ್ಚು ಒತ್ತಡ ಬೀಳುವುದಿಲ್ಲ, ಅತಿಯಾದ ಹಾನಿಯೂ ಒದಗುವುದಿಲ್ಲ. ಆಧುನಿಕ ಆರ್ಥಿಕತೆಗೆ ಬಲ ನೀಡುವ ಅಭಿವೃದ್ದಿಯ ಜೊತೆಗೆ ಸಂರಕ್ಷಣೆಗೂ ಆದ್ಯತೆ ನೀಡುವಂತಹ ಅಭಿವೃದ್ದಿ ಕೆಲಸಗಳನ್ನು ಮಾಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಪಶ್ಚಿಮ ಘಟ್ಟಗಳಿಗೆ ಯುನೆಸ್ಕೋ ವಿಶ್ವಪರಂಪರೆಯ ಸ್ಥಾನಮಾನಗಳನ್ನು ಕಲ್ಪಿಸುವುದಕ್ಕೆ ಇತರ ಎಲ್ಲ ರಾಜಕಾರಣಿಗಳು ವಿರೋಧ ವ್ಯಕ್ತಪಡಿಸುತ್ತಿದ್ದಾಗ ಅನಂತಕುಮಾರ್ ಒಬ್ಬರೇ ಅದರ ಪರವಾಗಿ ಮಾತನಾಡಿದವರು. ವಿಶ್ವಪರಂಪರೆಯ ತಾಣಗಳಲ್ಲಿ ಪಶ್ಚಿಮಘಟ್ಟಗಳ ಸೇರ್ಪಡೆ ನೋಬೆಲ್ ಪುರಸ್ಕಾರಕ್ಕೆ ಸಮಾನವೆಂದು ಅವರು ಪ್ರತಿಪಾದಿಸಿದ್ದರೆಂದು ಉಲ್ಲಾಸ ಕಾರಂತ ಸ್ಮರಿಸಿಕೊಂಡರು.

## ಕೇಂದ್ರ-ರಾಜ್ಯದ ನಡುವೆ ಸಂಪರ್ಕದ ಕೊಂಡಿಯಾಗಿದ್ದ ಅನಂತ ಕುಮಾರ್

ಪುಟ 1 ರಿಂದ

ನಾನು ಅಡ್ವೋಕೇಟ್ ಆಗಿ ಪ್ರಾಕ್ಟೀಸ್ ಮಾಡುವ ಸಂದರ್ಭದಲ್ಲಿ ಹುಬ್ಬಳ್ಳಿಗೆ ಬಂದು ನನ್ನನ್ನು ರಾಜಕೀಯಕ್ಕೆ ಬರುವಂತೆ ಒತ್ತಾಯ ಮಾಡಿ ಪಕ್ಷದ ಜವಾಬ್ದಾರಿ ಕೊಟ್ಟು ಘೋಷಣೆಯನ್ನು ಮಾಡಿ ಅವರು ಹೋದ ಬಳಿಕ ನಾನು ಪಕ್ಷದ ಅಂದಂದಿನ ರಾಜಕೀಯ ಸಂಘಟನೆ, ರಾಜಕೀಯ ಬೆಳವಣಿಗೆಗೆ ನಾನು ಹೆಚ್ಚು ಸಕ್ರಿಯವಾಗಿ ಭಾಗವಹಿಸುವಂತಾಯಿತು. ಆ ಹಿನ್ನೆಲೆಯಲ್ಲಿ ಅನಂತ ಕುಮಾರ್ ನನಗೆ ಕೇವಲ ಸ್ನೇಹಿತರಷ್ಟೇ ಅಲ್ಲ, ಒಂದು ಕುಟುಂಬದ ಸದಸ್ಯರಷ್ಟೇ ಅಲ್ಲ ನನಗೂ ರಾಜಕೀಯ ಗುರು ಎನ್ನುವುದನ್ನು ನಾನು ಪದೇಪದೇ ಸಾಕಷ್ಟು ಸಲ ಹೇಳಿದ್ದೇನೆ.

ಇದೇ ರೀತಿ ಇಡೀ ಕರ್ನಾಟಕದಲ್ಲಿ ನೂರಾರು ರಾಜಕೀಯ ನಾಯಕರುಗಳನ್ನು ಬೆಳೆಸುವಂತಹ ಕೆಲಸವನ್ನು ಅನಂತ ಕುಮಾರ್ ಅವರು ಮಾಡಿದ್ದಾರೆ . ಅನಂತಕುಮಾರ್ ರಾಷ್ಟ್ರಮಟ್ಟದಲ್ಲಿ ಎಲ್ಲ ನಾಯಕರ ಜೊತೆ ನಿರಂತರ ಮತ್ತು ಅತ್ಯಂತ ಆತ್ಮೀಯವಾದಂತಹ, ಹತ್ತಿರವಾದಂತಹ ಸಂಪರ್ಕ ಹೊಂದಿದ್ದರು. ಬಹುಶಃ ಕೇಂದ್ರದಲ್ಲಿ ರಾಷ್ಟ್ರೀಯಪಾರ್ಟಿ ಭಾರತೀಯ ಜನತಾ ಪಕ್ಷ ಬಂದು, ಸುದೀರ್ಘಕಾಲ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದೇ ಅದಕ್ಕೆ ಕಾರಣ.

ಅವರಿಗೆ ಎಲ್ಲರ ಜೊತೆ ಒಂದು ಉತ್ತಮವಾದ ಒಡನಾಟವಿತ್ತು. ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅದ್ವಾನಿ ಇನ್ನಿತರ ನಾಯಕರ ಜೊತೆ ಒಂದು ಆತ್ಮೀಯ ಸಂಬಂಧ ಬಂದಿದ್ದರಿಂದ ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರದ ನಡುವೆ ಒಂದು ಸಂಪರ್ಕದ ಕೊಂಡಿಯಾಗಿ ಅವರು ನಿರಂತರವಾಗಿ ಕೆಲಸ ಮಾಡಿಕೊಂಡು ಬಂದರು. ಕೇಂದ್ರದಲ್ಲಿ ವಾಜಪೇಯಿ ಸರ್ಕಾರ ಇದ್ದಾಗ ರಾಜ್ಯದಲ್ಲಿ ಬೇರೆ ಬೇರೆ ಸರ್ಕಾರಗಳು ಇದ್ದರೂ ಮುಂದೆ ಬಂದು ಎರಡೂ ಸರ್ಕಾರಗಳ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ರಾಜ್ಯದ ಸಮಸ್ಯೆಗಳನ್ನು ಕೇಂದ್ರಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟು ಅದನ್ನ ಸುಲಲಿತವಾಗಿ ಪರಿಹಾರ ನೀಡುವ ಕೆಲಸವನ್ನು ಅನಂತ ಕುಮಾರ್ ಮಾಡುತ್ತಿದ್ದರು. ಕೇಂದ್ರಸರ್ಕಾರದ ಬಳಿ ಕರ್ನಾಟಕದ ಬಗ್ಗೆ ಮಾತನಾಡಿ ಒತ್ತಡ ತರುವಂತಹ ಶಕ್ತಿ ಅನಂತ ಕುಮಾರ್ ಅವರಿಗಿತ್ತು. ಈಗ ಅವರಿಲ್ಲದ ಕೊರತೆ ನಮ್ಮನ್ನು ಕಾಡುತ್ತಿದೆ.

ಇನ್ನೊಂದು ಮುಖ್ಯ ಸಂಗತಿಯೆಂದರೆ, ಅವರು ಸ್ನೇಹಜೀವಿ ಮತ್ತು ಎಲ್ಲರ ಜೊತೆಜೊತೆ ಬಹುಶಃ ಕರ್ನಾಟಕದಲ್ಲಿರುವಂತಹ ಪ್ರತಿಯೊಂದು ಜಿಲ್ಲೆ, ಪ್ರತಿಯೊಂದು ತಾಲೂಕಿನಲ್ಲಿರುವ ಪ್ರತಿಯೊಂದು ಕಾರ್ಯಕರ್ತರ ಜೊತೆ ಅವರ ಹೆಸರಿನೊಂದಿಗೆ ಗುರುತಿಸುವ ರೀತಿ ಬಹುಶಃ ಬಹಳಷ್ಟು ನಾಯಕರಿಗೆ ಸಾಧ್ಯವಿಲ್ಲ. ಅಷ್ಟೊಂದು ನೆನಪಿನ ಶಕ್ತಿ ಅನಂತ ಕುಮಾರ್ ಅವರಲ್ಲಿತ್ತು. ಹೀಗಾಗಿ ಇಡೀ ಜಿಲ್ಲೆಯ ಯಾವುದೇ ತಾಲೂಕಿನಲ್ಲಿ ನಾಯಕರು ಇದ್ದಾರೆ, ಕಾರ್ಯಕರ್ತರಿದ್ದಾರೆಂದರೆ ತಕ್ಷಣವೇ ಅವರು ಅವರ ಹೆಸರನ್ನು ಹೇಳುವ ಕೆಲಸವನ್ನು ಅನಂತ ಕುಮಾರ್ ಮಾಡುತ್ತಿದ್ದರು. ಆ ಹಿನ್ನೆಲೆಯಲ್ಲಿ ಅನಂತ ಕುಮಾರ್ ಅವರು ಸಂಘಟನೆಯ ಬೆಳವಣಿಗೆಯಲ್ಲಿ ಹೆಚ್ಚಿನ ಕೆಲಸ ಮಾಡಿದ್ದರು.

ನನಗೂ ಅವರಿಗೂ ಬಹಳ ಆತ್ಮೀಯವಾದಂತಹ ಸಂಬಂಧ. ಬೆಂಗಳೂರಿನಲ್ಲಿ, ದೆಹಲಿಯಲ್ಲಿ ಅವರ ಮನೆಗೆ ಹೋದರೆ ನಮಗೆ ಊಟ ತಿಂಡಿ ಇಲ್ಲದೆ ವಾಪಸ್ ಕಳುಹಿಸುತ್ತಿರಲಿಲ್ಲ. ಅಕಸ್ಮಾತ್ ನಾನು ದೆಹಲಿಗೆ ಹೋದಾಗ ಅವರಿಗೆ ನಾನು ಬಂದಿರುವುದು ಹೇಳದೇ ಇದ್ದಾಗ..ಅದು ಅವರ ಗಮನಕ್ಕೆ ಬಂದರೆ ತಕ್ಷಣವೇ ಅವರು ಎಲ್ಲಿಂದಾದರೂ ಫೋನ್ ಮಾಡಿ, ನಮ್ಮ ಮನೆಗೆ ಯಾಕೆ ಬರಲಿಲ್ಲ ಬನ್ನಿ ಮಧ್ಯಾನ್ಹ ಊಟಕ್ಕೆ ಬನ್ನಿ, ರಾತ್ರಿ ಊಟಕ್ಕೆ ಬನ್ನಿ ಎನ್ನುವಂತಹ ಈರೀತಿ ಆತ್ಮೀಯತೆ ಇದೆಯಲ್ಲ, ಒಂದು ಕುಟುಂಬದ ಸದಸ್ಯರಾಗಿ ನಡೆದುಕೊಳ್ಳುವ ರೀತಿ ಇದೆಯಲ್ಲ..ಅದು ಮರೆಯಲಾಗದ್ದು. ರಾಷ್ಟ್ರೀಯಮಟ್ಟದಲ್ಲಿ ಬೆಳೆದಿದ್ದರೂ ಸಹ ನಮ್ಮಂತಹ ಸ್ನೇಹಿತರನ್ನು ಅವರೆಂದಿಗೂ ಮರೆಯಲಿಲ್ಲ. ಅವರ ಹಾಸ್ಯಚಟಾಕಿ, ಹಾಸ್ಯಲೇಪನ ಮಾತುಗಳು ಇವತ್ತೂ ಪ್ರತಿಹಂತದಲ್ಲೂ ನಮಗೆ ನೆನಪಿಗೆ ಬರುತ್ತಿರುತ್ತದೆ.



ಅವರ ಮಾರ್ಗದರ್ಶನ, ಜೀವನಶೈಲಿ, ಯಾವರೀತಿ ಸಂಘಟನೆ ಬೆಳೆಸಬೇಕು, ಯಾವರೀತಿ ನಾಯಕತ್ವವನ್ನು ಬೆಳೆಸಬೇಕು, ಪಕ್ಷವನ್ನು ಹೇಗೆ ತೆಗೆದುಕೊಂಡು ಹೋಗಬೇಕು, ಬಹುಶಃ ಇವತ್ತಿಗೂ ನಮ್ಮಂತಹವರಿಗೂ, ಕಾರ್ಯಕರ್ತರಿಗೂ ಇವತ್ತಿಗೂ ಮಾರ್ಗದರ್ಶನ ಕೊಡುವಂತಹದ್ದು. ಆ ಮಾರ್ಗದಲ್ಲಿಯೇ ಮುನ್ನಡೆಯುತ್ತ ಹೋಗುವುದೇ ನಿಜವಾಗಿ ಮಾನ್ಯ ಅನಂತ ಕುಮಾರ್ ಅವರಿಗೆ ನಾವು ಗೌರವ ಸಲ್ಲಿಸಿದಂತೆ.

ಇವತ್ತು ಶ್ರೀಮತಿ ತೇಜಸ್ವಿನಿ ಅನಂತ ಕುಮಾರ್ ಅವರೂ ಸಹ ನಿರಂತರವಾಗಿ ಪರಿಶ್ರಮ ಪಟ್ಟು ಅದಮ್ಯ ಚೇತನದ ಮುಖಾಂತರ ಹಲವಾರು ಸಾಮಾಜಿಕ ಕೆಲಸ ನಿರಂತರವಾಗಿ ಚಿರಸ್ಥಾಯಿ ಅಗಿರುವಂತೆ ಮಾಡುತ್ತಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಎಂದು ಈ ಸಂದರ್ಭದಲ್ಲಿ ಶುಭಹಾರೈಸುತ್ತಿದ್ದೇನೆ.

## ಶ್ರೀ ನೆಹರು ಓಲೇಕರ್, ವಿಧಾನಸಭಾ ಸದಸ್ಯರು



ಕರ್ನಾಟಕದ ಮತ್ತು ದೇಶದ ಹೆಮ್ಮೆಯ ಪುತ್ರರಾಗಿರುವಂಥ ಅನಂತಕುಮಾರ್‌ಜೀ ಅವರ ೬೧ನೇ ಹುಟ್ಟುಹಬ್ಬ ಆಚರಿಸುವ ಸಂಧರ್ಭದಲ್ಲಿ ಇವತ್ತು ಅವರು ನಮ್ಮ ಜೊತೆಗೆ ಇಲ್ಲ. ಆದರೂ ಕರ್ನಾಟಕ ರಾಜ್ಯದ ಜನತೆಯ ಮನಸ್ಸಿನಲ್ಲಿ ಮತ್ತು ದೇಶದ ಜನತೆಯ ಮನಸ್ಸಿನಲ್ಲಿ ಉಳಿದ್ದಾರೆ ಅನ್ನಲಿಕ್ಕೆ ಕಾರಣ ಅವರ ಅಧಿಕಾರದ ಅವಧಿಯಲ್ಲಿ ಮಾಡಿರುವಂಧಹ ಮಹತ್ತರವಾಗಿರುವಂಧಹ ಕೆಲಸಗಳು.ಅದರಲ್ಲೂ ರಸಗೊಬ್ಬರದ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಬಹಳ ಉತ್ತಮವಾಗಿರುವ ಸಾಧನೆಯನ್ನು ಸಾಧಿಸಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಅನಂತಕುಮಾರ್‌ಜೀ ಅವರು ಅನೇಕ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದು. ಅವರ ಶಕ್ತಿಯುಕ್ತಿಗಳಿಗೆ ದ್ಯೋತಕವಾಗಿದೆ.

ನಾನು ಪ್ರಾರಂಭಿಕವಾಗಿ ಚುನಾವಣೆಗೆ ನಿಲ್ಲಬೇಕು ಎಂದು ಆಶಿಸುವಾಗ ಅನಂತಕುಮಾರ್‌ಜೀ ಅವರೇ ಕರ್ನಾಟಕ ರಾಜ್ಯದ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದರು. ಅವರು ಸಹಿತ ನನ್ನನ್ನು ಕರೆದು ಅಭ್ಯರ್ಥಿಯಾಗಿ ನಿಲ್ಲುವಂತೆ ಆದೇಶಿಸಿದ್ದು ನನಗೆ ಹೆಮ್ಮೆ ತಂದ ಸಂಗತಿ.

ಇದೇ ರೀತಿ ಅನೇಕ ಯುವಕರನ್ನು ಬೆಳೆಸುವಲ್ಲಿ ಅನಂತಕುಮಾರ್ ಅವರು ಬಹಳ ಹೆಚ್ಚಿನ ಪಾತ್ರವನ್ನು ವಹಿಸಿದ್ದರು ಮತ್ತು ಮುತುವರ್ಜಿಯನ್ನು ತೋರಿದ್ದರು ಎನ್ನಲು ತುಂಬ ಅಭಿಮಾನ ಎನ್ನಿಸುತ್ತದೆ. ಧನ್ಯವಾದಗಳು.

# ಅನಂತ್ ಕಾರ್ಯವೈಖರಿಯೇ ಸ್ಫೂರ್ತಿ



**ರಾಜೀವ್ ಚಂದ್ರಶೇಖರ್**
ಸಂಸತ್ ಸದಸ್ಯರು, ರಾಜ್ಯಸಭೆ

ನನ್ನೊಡನೆ ಅನಂತಕುಮಾರ್ ಅವರ ಬಾಂಧವ್ಯ ಇಪ್ಪತ್ತೈದು ವರ್ಷಗಳಷ್ಟು ಹಳೆಯದಾದದ್ದು. ಪದೇಪದೇ ಅನಂತಕುಮಾರ್ ಅವರ ಬಗ್ಗೆ ನನ್ನ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದಕ್ಕೆ, ಹೇಳುವುದಕ್ಕೆ ನನಗೆಂದಿಗೂ ದಣಿವಾಗುವುದಿಲ್ಲ. ಇದನ್ನು ನನ್ನ ಹಕ್ಕು ಮತ್ತು ಸುಯೋಗವೆಂದು ಭಾವಿಸುತ್ತೇನೆ. ಅನಂತಕುಮಾರ್ ಅವರು ನನ್ನ ಮಿತ್ರರು, ನನ್ನ ಮಾರ್ಗದರ್ಶಕರು. ನಾನು ಅವರನ್ನು ೧೯೯೪-೯೫ರ ಸಮಯದಲ್ಲಿ ಮೊಟ್ಟಮೊದಲು ಭೇಟಿಯಾದೆ. ಆ ಸಮಯದಲ್ಲಿ ಅವರು ರಾಜಕೀಯದಲ್ಲಿದ್ದರೆ ನಾನು ವಾಣಿಜ್ಯ ಕ್ಷೇತ್ರದಲ್ಲಿದ್ದೆ. ಆ ಸಮಯದಲ್ಲಿ ನಾನು ಇನ್ನೂ ಪ್ರಗತಿಯ ಹಾದಿಯಲ್ಲಿದ್ದ ಉದ್ಯಮಿಯಾಗಿದ್ದರೆ, ಅವರು ಉದಯೋನ್ಮುಖ ರಾಜಕೀಯ ನಾಯಕರಾಗಿದ್ದರು. ಅವರನ್ನು ಮೊದಲು ಭೇಟಿ ಮಾಡಿದಾಗ ಒಬ್ಬ ಆದರ್ಶವಂತ, ಉತ್ಸಾಹಿ ನಾಯಕರಾಗಿ ನನಗೆ ಕಂಡಿದ್ದರು.

ನಾನು ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಹೊತ್ತಿಗೆ ಅನಂತ ಯಶಸ್ವಿ ನಾಯಕರಾಗಿದ್ದರೂ ಅಧಿಕಾರದ ಅಮಲನ್ನು ತಲೆಗೇರಿಸಿಕೊಂಡಿರಲಿಲ್ಲ. ಅವರ ಸಜ್ಜನಿಕೆ, ಹಸನ್ಮುಖ, ಎಲ್ಲರಿಗೂ ಆಪ್ತವಾಗುವಂತಹ ಅಂಶಗಳಾಗಿದ್ದವು. ಸಾಮಾನ್ಯವಾಗಿ ನಾಯಕರು ರಾಜಕೀಯ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುತ್ತಿರುವಾಗ ಇಂತಹ ಗುಣಗಳನ್ನು ಬೇಗನೆ ತೊರೆದು ಬಿಡುತ್ತಾರೆ. ಅದರಲ್ಲೂ ನಮ್ರತೆ, ಸ್ನೇಹ, ಸಂಬಂಧ, ಬಾಂಧವ್ಯದಂತಹ ಅಂಶಗಳನ್ನು ದೂರಮಾಡಿಬಿಡುತ್ತಾರೆ. ಆದರೆ ಅನಂತಕುಮಾರ್ ಅತ್ಯಂತ ವಿಶೇಷವಾದಂತಹ ವ್ಯಕ್ತಿತ್ವ ಹೊಂದಿದಂತಹವರು. ಇವರೆಂದಿಗೂ ತಮ್ಮ ಮೂಲಗುಣವನ್ನು ಬಿಟ್ಟುಕೊಟ್ಟಿರಲಿಲ್ಲ.

ಅವರು ನನ್ನ ಸ್ನೇಹಿತರು, ನಿಜ. ನಾನು ೨೦೦೬ರಲ್ಲಿ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ನಂತರ ಅವರು ನನ್ನ ಗುರುಗಳೆನ್ನಿಸಿ, ಮಾರ್ಗದರ್ಶಕರಾದರು. ಆರಂಭಿಕ ಹಂತದಲ್ಲಿ ಅನಂತಕುಮಾರ್ ನನ್ನ ಜೊತೆ ಬಹಳಷ್ಟು ಸಮಯ ಕಳೆದು ನನಗೆ ಸೂಕ್ತವಾದ ದಾರಿತೋರಿದರು. ನಾನು ಉತ್ತಮ ರಾಜಕಾರಣಿ ಎಂದು ಹೇಳಿಕೊಳ್ಳಲು ಇಚ್ಛಿಸುವುದಿಲ್ಲ. ಆದರೆ ಅವರ ಸಲಹೆ, ಮಾರ್ಗದರ್ಶನದಿಂದಾಗಿ ಒಂದಷ್ಟು ಉತ್ತಮ ಕೆಲಸಗಳನ್ನು ಮಾಡುವ ಸೌಭಾಗ್ಯ ದೊರಕಿತು.ಅವರ ಆ ಬೆಂಬಲವನ್ನು ನಾನೆಂದಿಗೂ ಮರೆಯುವುದಿಲ್ಲ.

ಅವರು ಇತರರಿಗಿಂತ ಭಿನ್ನವಾಗಿದ್ದ ಅತ್ಯುತ್ತಮ ರಾಜಕಾರಣಿ ಮಾತ್ರವಲ್ಲದೆ ಯುವಜನಾಂಗಕ್ಕೆ ಆದರ್ಶಪ್ರಾಯರಾಗಿದ್ದಾರೆ. ಪ್ರಸ್ತುತ ರಾಜಕಾರಣದಲ್ಲಿ ಯುವಜನಾಂಗಕ್ಕೆ ರಾಜಕೀಯ ನಾಯಕರು ಸ್ಫೂರ್ತಿ ಆಗುವುದು ಸುಲಭದ ಸಂಗತಿಯಲ್ಲ. ಆದರೆ ಸಾಧ್ಯವೆಂದು ಅವರು ಸಾಧಿಸಿ ತೋರಿಸಿದರು. ಅವರು ಹಾಕಿಕೊಟ್ಟ ಮೌಲ್ಯಗಳು ಆದರ್ಶ, ಕನಸು, ಕಾರ್ಯವೈಖರಿ ಎಲ್ಲವೂ ನನಸಾಗಿಸುವುದು ಸರಳವಾದ ಕೆಲಸವಲ್ಲ. ಆದರೆ ಪ್ರತಿಷ್ಠಾನದ ಮೂಲಕ ಯುವಜನಾಂಗಕ್ಕೆ ಅವರ ಕಾರ್ಯವೈಖರಿ ಸ್ಫೂರ್ತಿಯಾಗುತ್ತಿದೆ. ಅನಂತಕುಮಾರ್ ಪ್ರತಿಷ್ಠಾನ ತೇಜಸ್ವಿನಿಜಿ, ಕೃಷ್ಣಭಟ್‌ಜಿ ಹಾಗೂ ಡಾ.ಶ್ರೀನಾಥ್‌ಜಿ ಅವರ ಅವರ ನಾಯಕತ್ವದಲ್ಲಿ ಮುನ್ನಡೆಯಲೆಂದು ಆಶಿಸುತ್ತೇನೆ.

## ಕನಸುಗಳಿಗೆ ನಿಜ ರೂಪ ಕೊಟ್ಟ ಧೀಮಂತ

ಪುಟ 2 ರಿಂದ

ಬಗ್ಗೆ ವಿವಿಧ ಅಂಶಗಳನ್ನು ಹೇಳಿದರು. ನನಗೆ ಬರೆದುಕೊಳ್ಳುವ ಅಭ್ಯಾಸ ಇತ್ತು. ಹಾಗಾಗಿ ಬರೆದುಕೊಳ್ಳುತ್ತ ಹೋದೆ. ನಾವು ಪಟ್ಟಿಮಾಡಿಕೊಂಡ ಅಂಶಗಳು ೫೦ಕ್ಕಿಂತ ಜಾಸ್ತಿ ಇದ್ದವು. ನನ್ನೊಡನೆ ಇದ್ದ ಹಿರಿಯರು ನನಗೆ ಹೇಳಿದರು ಒಬ್ಬ ಮನುಷ್ಯ ಸಂಘಟನೆಯಲ್ಲಿ ಎಷ್ಟು ಕ್ರಿಯೇಟೀವ್ ಆಗೀ ಯೋಚನೆ ಮಾಡಬಹುದು ಅನ್ನುವುದಕ್ಕೆ ಅನಂತಕುಮಾರ್ ಒಂದು ಮಾದರಿ.

ಕನ್ನಡ ಮತ್ತು ಬೆಂಗಳೂರು - ಇವೆರಡನ್ನು ಅವರು ಎಂದೂ ಕೂಡ ಮರೆಯಲಿಲ್ಲ. ವಿರೋಧ ಪಕ್ಷದ ಒಬ್ಬ ಅತಿ ದೊಡ್ಡ ಮುಖಂಡರೇ ಒಮ್ಮೆ ಅನಂತಕುಮಾರ್ ಬಿಟ್ಟರೆ ಬೆಂಗಳೂರು ನಾಯಕರು ಅನ್ನುವವರು ಯಾರ್‍ರೀ ಇದ್ದಾರೆ ಹೇಳಿರಪ್ಪ ಅಂತ ಕೇಳಿದ್ದರು. ಅನಂತಕುಮಾರ್ ವಿಶ್ವ ಸಂಸ್ಥೆಯಲ್ಲಿ ಕನ್ನಡದ ಭಾಷಣವನ್ನು ಮಾಡತಕ್ಕ ಸಾಂಕೇತಿಕ ಕೆಲಸವನ್ನು ಮಾತ್ರ ಮಾಡಲಿಲ್ಲ , ಅಕ್ಷರಶ: ಎಲ್ಲ ವ್ಯವಸ್ಥೆಗಳಲ್ಲೂ ಕೂಡ ಅವರು ಕನ್ನಡವನ್ನು ಅಳವಡಿಸಿಕೊಂಡು ಬರತಕ್ಕಂಥ ಕೆಲಸವನ್ನು ಮಾಡಿದರು. ದೆಹಲಿಗೆ ಬಂದು ೨೦, ೨೫ ವರ್ಷಗಳಷ್ಟು ಕಾಲ ಕೆಲಸ ಮಾಡಿದ ಮೇಲೂ ಕೂಡ ಬೆಂಗಳೂರಿನಲ್ಲಿ ವಾಪಸ್ಸು ಮತ್ತೆ ಗಾಂಧೀ ಬಜಾರ್ ಕನ್ನಡವನ್ನೇ ಮಾತಾಡುವಷ್ಟರ ಮಟ್ಟಿಗೆ ಕನ್ನಡವನ್ನು ಯಾವಾಗಲೂ ಕೂಡ ಉಳಿಸಿಕೊಂಡಿದ್ದರು.

ಅನಂತಕುಮಾರ್ ದೊಡ್ಡ ಕನಸುಗಾರ ಅವರು. ಆದರೆ, ಕನಸು ಕಾಣುತ್ತಾ ಹಾಗೆಯೇ ಉಳಿಯುತ್ತಿರಲಿಲ್ಲ. ತಾನು ಕಂಡ ಕನಸಿಗೆ ಕೈಕಾಲು ಬರೆಯುವಂಥ ಕೆಲಸವನ್ನು ಅದ್ಭುತವಾಗಿ ಮಾಡುತ್ತ ಇದ್ದರು. ನಾವು ಇಬ್ಬರೇ ಕುಳಿತುಕೊಂಡು ಮಾತನ್ನಾಡುತ್ತ ಇರುವಾಗ ಅವರು ಯಾವತ್ತು ಕೂಡ ಸ್ವಂತದ ಆಸೆಗಳ ಬಗ್ಗೆ ಎಂದು ಕೂಡ ಹೇಳಲೇ ಇಲ್ಲ. ಅವರು ತುಂಬಾ ಗಾಢವಾಗಿ ಮಾತಾಡುತ್ತ ಇರಬೇಕಾದರೆ ನನಗೆ ಆಸೆ ಅಂತ ಅವರು ಹೇಳಿದ್ದು ರಾಮಮಂದಿರದ ಬಗ್ಗೆ. ನನಗೆ ಆಸೆ ಅಂತ ಹೇಳಿದ್ದು ಅವರು ಅಖಂಡ ಭಾರತದ ಬಗ್ಗೆ. ನನಗೆ ಆಸೆ ಪೂರೈಸಿತು ಅಂತ ಹೇಳಿದ್ದು ಭಾರತ ಒಂದು ಪರಮಾಣು ಶಕ್ತ ಭಾರತ ಆಗಬೇಕು ಅನ್ನುವುದರ ಬಗ್ಗೆ. ಅಂಥ ಕನಸು, ಕಲ್ಪನೆ ಅನಂತಕುಮಾರ್ ಅವರಿಗೆ ವಿಶೇಷವಾಗಿ ಇತ್ತು. ಆರೀತಿಯ ಉದಾತ್ತವಾಗಿರತಕ್ಕಂತಹ ರಾಷ್ಟ್ರೀಯ ಕನಸುಗಳನ್ನು ಕಂಡಿರತಕ್ಕಂತಹ ಒಬ್ಬ ಧೀಮಂತ ವ್ಯಕ್ತಿ ನಮ್ಮ ಮಧ್ಯದಲ್ಲಿ. ಒಂದು ರೀತಿಯಲ್ಲಿ ಅವಸರದಲ್ಲೇ ತಮ್ಮ ಜೀವನವನ್ನು ಮುಗಿಸಿದರು ಅಂತ ಹೇಳಬಹುದು ೫೯ ಅನ್ನುವದು ಏನೂ ಬಹಳ ದೊಡ್ಡ ವಯಸ್ಸು ಅಂತ ಏನೂ ಇಲ್ಲ ಇವತ್ತು ನಮ್ಮ ಎದುರಿಗೆ ಅನೇಕ ಸಂಗತಿಗಳನ್ನು ಅವರು ಇಟ್ಟು ಹೋಗಿದ್ದಾರೆ . ಹಸಿರು ಬೆಂಗಳೂರು ಆಗಿರಲಿ, ಅದಮ್ಯಚೇತನದಿಂದ ಅವರು ಕಟ್ಟಿದಂಥ ಯೋಜನೆಗಳಾಗಿರಲಿ ಅದೆಲ್ಲವನ್ನು ಇವತ್ತು ನಾವೆಲ್ಲರೂ ಕೂಡ ಹೊತ್ತುಕೊಂಡು ಹೋಗಬೇಕು. ಅವರ ಆ ನೆನಪಿಗೆ ಅರ್ಥ ತಂದುಕೊಡಬೇಕಾಗಿರತಕ್ಕಂತಹ ಒಂದು ಗುರುತರ ಜವಾಬ್ದಾರಿ ನಮ್ಮ ಎಲ್ಲರಿಗೂ ವೈಯಕ್ತಿಕ ನೆಲೆಯಲ್ಲಿಯೂ ಇದೆ ಸಾಮೂಹಿಕ ನೆಲೆಯಲ್ಲಿಯೂ ಇದೆ . ಇವತ್ತು ಅನಂತಕುಮಾರ್ ಪ್ರತಿಷ್ಠಾನ ಆ ದಿಕ್ಕಿನಲ್ಲಿ ಬಹಳ ದೊಡ್ಡದಾಗಿರತಕ್ಕಂತಹ ಹೆಜ್ಜೆಗಳನ್ನು ಇಡಲಿಕ್ಕೆ ಹೊರಟಿದೆ. ತೇಜಸ್ವಿನಿ ಅವರ ಕರ್ತೃತ್ವ ಇದರಲ್ಲಿ ಮಹತ್ವದ ಪಾತ್ರ ವಹಿಸಲಿದೆ. ನಾವೂ ಅದರಲ್ಲಿ ಸಹಪಥಿಕರಾಗೋಣ. ಅದರ ಮುಖಾಂತರ ನಾವು ಎಲ್ಲ ನೆನಪುಗಳಿಗೂ ಒಂದು ಅರ್ಥ ತುಂಬಿಕೊಡುವಂಥ ಪ್ರಯತ್ನ ಮಾಡೋಣ. ನಮಸ್ಕಾರ.

## ಅನಂತಕುಮಾರ್ ಬದುಕಿನ ಶೈಲಿ, ಮೌಲ್ಯಗಳು ಸರ್ವರಿಗೆ ಪ್ರೇರಣೆ ನೀಡಲಿ

ಪುಟ 1 ರಿಂದ

ಬಹುಶಃ ಲೋಕಸಭೆಯಲ್ಲಿ ಅನಂತಕುಮಾರ್‌ರವರನ್ನು ಭೇಟಿ ಮಾಡಿದ ಯಾವುದೇ ವ್ಯಕ್ತಿಗೆ, ಅವರ ಪರಿಚಯ ಇರುವಂತಹ ಎಲ್ಲರಿಗೂ ಸಹ ಅವರ ಆತ್ಮೀಯಸಂಬಂಧ, ವಿಶ್ವಾಸ ಏನು ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಪಾರ್ಲಿಮೆಂಟಿನ ಒಳಗಡೆ ಅವರ ಕೊಠಡಿಯೊಳಗೆ ಹೋದಾಗ ಅಲ್ಲಿಗೆ ಎಲ್ಲಾ ರಾಜ್ಯಗಳ ಮುಖಂಡರುಗಳು ಬರುತ್ತಿದ್ದರು. ಸಂಬಂಧಪಟ್ಟ ಸಚಿವರುಗಳನ್ನು ಕರೆಸಿ ಸ್ಥಳದಲ್ಲೆ ಯಾವ ಕೆಲಸ ಆಗಬೇಕೋ ಅದನ್ನು ಮಾನ್ಯ ಅನಂತಕುಮಾರ್‌ರವರು ಮಾಡಿಕೊಡುತ್ತಿದ್ದರು. ಇಂತಹ ಒಬ್ಬ ಹಿರಿಯವ್ಯಕ್ತಿಯನ್ನು ಕಳೆದುಕೊಂಡು ನಾಡು ಬಡವಾಗಿದೆ ಎಂದು ನಾನು ಭಾವಿಸಿದ್ದೇನೆ. ಆರುಬಾರಿ ಸಂಸತ್ ಸದಸ್ಯರಾಗಿ ಕರ್ನಾಟಕವನ್ನು ಪ್ರತಿನಿಧಿಸಿ, ಕೇಂದ್ರಮಂತ್ರಿಯಾಗಿ ವಿವಿಧಖಾತೆಗಳನ್ನು ಯಶಸ್ವಿಯಾಗಿ ನಿಭಾಯಿಸಿದ ಮೇರುನಾಯಕ ನಮ್ಮ ಅನಂತಕುಮಾರ್ ಅವರು ನನ್ನ ಮಟ್ಟಿಗೆ ಅತ್ಯಂತ ಮಾನವೀಯತೆ ಇದ್ದ ಸರಳ ಮನುಷ್ಯರಾಗಿದ್ದರು. ಅವರು ಯಾವಾಗಲೂ ಸಮಾಜದ ಕಟ್ಟಕಡೆಯ ವ್ಯಕ್ತಿಯ ಹಿತಾಸಕ್ತಿಯನ್ನು ಕಾಪಾಡುವ ವಿಚಾರದಲ್ಲಿ ಕಳಕಳಿಯನ್ನು ಹೊಂದಿರುವಂತಹ ವ್ಯಕ್ತಿ.

ಅನಂತಕುಮಾರ್ ದೇಶದ ಪ್ರತಿಯೊಂದು ರಾಜ್ಯದ ಮುಖ್ಯಮಂತ್ರಿಗಳು, ಅಲ್ಲಿನ ಮುಖಂಡರುಗಳು, ವಿರೋಧಪಕ್ಷದ ನಾಯಕರುಗಳ ಜೊತೆ ನಿಕಟವಾದ ಸಂಬಂಧ, ಸಂಪರ್ಕ ಹೊಂದಿದ್ದರು. ಯಾವುದೇ ಕೆಲಸ ಪ್ರಧಾನಿಯವರಿಂದ, ಆ ಕಾಲದಲ್ಲಿ ಆಗಬೇಕೆಂದರೆ ಅವರೆಲ್ಲರೂ ಸಂಪರ್ಕ ಮಾಡುತ್ತಿದ್ದುದು ಅನಂತಕುಮಾರ್ ಅವರನ್ನೇ. ಅವರು ತಕ್ಷಣ ಸ್ಪಂದಿಸುತ್ತಾ ಇದ್ದುದನ್ನು ನಾವು ಪ್ರತ್ಯಕ್ಷವಾಗಿ ನೋಡಿದ್ದೇವೆ. ಆ ಪರಿಚಯ ಇರುವಂತಹ ಎಲ್ಲರಿಗೂ ಅದು ಗೊತ್ತಿರುವಂತಹದ್ದು.

ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಮಾರ್ಗದರ್ಶನದಲ್ಲಿ ಅನಂತಕುಮಾರ್‌ರವರ ನೂರಾರು ಹಿತೈಷಿಗಳು ಅವರ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ ಮತ್ತು ಸಮಾಜಸೇವೆಯ ವಿಶಿಷ್ಟ ಕಾರ್ಯದಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅನಂತಕುಮಾರ್ ನಾಯಕತ್ವದಿಂದ, ಅವರ ಜೀವನದಿಂದ ನಾವು ಕಲಿಯಬೇಕಾದಂತಹ ತುಂಬಾ ಪಾಠಗಳಿವೆ ಎಂದು ನಾನು ಭಾವಿಸಿದ್ದೇನೆ. ಈ ಉದ್ದೇಶಕ್ಕಾಗಿ ಸ್ಥಾಪಿಸಿರುವ ಅನಂತಕುಮಾರ್ ಪ್ರತಿಷ್ಠಾನ ಬೆಂಗಳೂರಿನಲ್ಲಿ ನಾಯಕತ್ವ ತರಬೇತಿಸಂಸ್ಥೆ ಮತ್ತು ಸಾರ್ವಜನಿಕ ನೀತಿನಿರೂಪಣಾ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುತ್ತಿರುವುದು ಸಂತೋಷದ ಸಂಗತಿ. ಇಂತಹ ಉದಾತ್ತ ಉಪಕ್ರಮವನ್ನು ಬೆಂಬಲಿಸಲು ನಮ್ಮ ರಾಜ್ಯಸರ್ಕಾರ ಬದ್ಧವಾಗಿದೆ. ಅನಂತಕುಮಾರ್ ಮೌಲ್ಯಗಳು, ನಾಯಕತ್ವಶೈಲಿ ಮೊದಲಾದವನ್ನು ಪ್ರೇರಣೆಯಾಗಿ ಮುಂದಿಟ್ಟುಕೊಂಡು ಉದಯೋನ್ಮುಖ ನಾಯಕರನ್ನು ಬೆಳೆಸುವುದಕ್ಕಾಗಿ ಪ್ರತಿಷ್ಠಾನ ಮಾರ್ಗದರ್ಶನ ಮಾಡುವುದು ಶ್ಲಾಘನೀಯ ಕಾರ್ಯವಾಗಿದೆ. ಈ ಉಪಕ್ರಮಕ್ಕೆ ನಮ್ಮ ಎಲ್ಲಾ ರೀತಿಯ ಬೆಂಬಲ ಇರುತ್ತದೆ ಎಂಬ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ನಾನು ನೀಡಲು ಇಚ್ಛಿಸುತ್ತೇನೆ. ಅನಂತಕುಮಾರ್ ಪ್ರತಿಷ್ಠಾನವು ವೆಬಿನಾರ್, ಉಪನ್ಯಾಸ, ಪ್ರಕಟಣೆ ಮುಂತಾದ ಚಟುವಟಿಕೆಗಳನ್ನು ಹಮ್ಮಿಕೊಂಡಿರುವುದು ಅಭಿನಂದನಾರ್ಹ ಸಂಗತಿ.



ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಅವರು ಪ್ರತಿಷ್ಠಾನದ ಮೂಲಕ ನಾಡಿನ ಉದ್ದಗಲಕ್ಕೂ ಕೆಲಸ ಮಾಡುತ್ತಿದ್ದಾರೆ, ಬಡಮಕ್ಕಳಿಗೆ ಊಟವನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ, ಇವೆಲ್ಲವೂ ಸಹ ಅನಂತಕುಮಾರ್ ಪ್ರೇರಣೆಯಿಂದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಆ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಸ್ವಾಗತಾರ್ಹ ಸಂಗತಿ. ಇಂದು ಬಿಡುಗಡೆಯಾಗುತ್ತಿರುವ ಅನಂತಪಥ ಮಾಸಪತ್ರಿಕೆ ಸಮಾಜಕ್ಕೆ ಒಳ್ಳೆಯ ಮೌಲ್ಯಗಳನ್ನು ಪರಿಚಯಿಸುವ ಉಪಯುಕ್ತ ಕೆಲಸ ಮಾಡಲಿ ಎಂದು ಹಾರೈಸುತ್ತೇನೆ. ಅನಂತಕುಮಾರ್ ತನ್ನ ಬದುಕಿನಲ್ಲಿ ಕಂಡ ಕನಸು, ಸಾಧಿಸಿದ ಆದರ್ಶಗಳನ್ನು ಮುಂದುವರೆಸಿಕೊಂಡು ಹೋಗುವುದೇ ನಮ್ಮ ಆತ್ಮೀಯ ಸ್ನೇಹಿತ ಅನಂತಕುಮಾರ್‌ರವರಿಗೆ ನಾವು ಸಲ್ಲಿಸುವ ಅತ್ಯುತ್ತಮ ಗೌರವ ಎಂದು ಭಾವಿಸಿದ್ದೇನೆ. ಅನಂತಕುಮಾರ್ ಪ್ರತಿಷ್ಠಾನ ಕೈಗೊಂಡಿರುವ ಎಲ್ಲಾ ಸಾಮಾಜಿಕ ಕಾಳಜಿಯ ಕೆಲಸಗಳು ಯಶಸ್ವಿಯಾಗಲಿ ಎಂದು ಹಾರೈಸಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಅವರ ತಂಡದವರಿಗೆ ಶುಭ ಹಾರೈಸುತ್ತೇನೆ ನಮಸ್ಕಾರ. ಧನ್ಯವಾದಗಳು.

# ವೈಜ್ಞಾನಿಕ ಹಾಗೂ ತಿಳುವಳಿಕೆಯುಳ್ಳ ಕ್ರಮಗಳಿಗೆ ಆದ್ಯತೆಯಿರಲಿ




**ಅಭಿವೃದ್ಧಿ ಕಾರ್ಯಗಳ ದೆಸೆಯಿಂದ ಅರಣ್ಯಗಳ ಛಿದ್ರೀಕರಣವಾಗುತ್ತಿದೆ**

ಅಭಿವೃದ್ಧಿಯ ಆಕಾಂಕ್ಷೆಗಳನ್ನು ವನ್ಯಸಂರಕ್ಷಣೆಯ ಅಗತ್ಯ ವಿಧಿಗಳೊಂದಿಗೆ ಸಮತೋಲನಗೊಳಿಸುವುದು ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಬಹು ಮುಖ್ಯ. ಇದನ್ನು ಸಾಧಿಸಲು, ನಮಗೆ ವೈಜ್ಞಾನಿಕ ತತ್ವಗಳು ಮತ್ತು ಉತ್ತಮ ದತ್ತಾಂಶಗಳ ಆಧಾರದ ಮೇಲೆ ರೂಪಿಸಲಾದ ನೀತಿಗಳು ಬೇಕಾಗುತ್ತವೆ. ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ವರದಿಯಲ್ಲಿರುವ ಅಧಿಕೃತ ಮಾಹಿತಿಯ ವಿಶ್ಲೇಷಣೆಯು 'ರೆಕಾರ್ಡ್ ಮಾಡಿದ ಅರಣ್ಯ ಪ್ರದೇಶ'ದ ವ್ಯಾಪ್ತಿಯನ್ನು ವಿವರಿಸುತ್ತಾ ಅಧಿಸೂಚಿತ ಕಾಡುಗಳು ಸುಮಾರು ೭.೬೮ ಲಕ್ಷ ಹೆಕ್ಟೇರ್‌ನಷ್ಟಿರುವುದಾಗಿ ಗುರುತಿಸಿದೆ. ಅತಿಕ್ರಮಣ, ಅರಣ್ಯ ಹಕ್ಕುಗಳ ಕಾಯ್ದೆಯಡಿ ವೈಯಕ್ತಿಕ ಅರಣ್ಯ ಹಕ್ಕುಗಳ ಅನುದಾನ ಮತ್ತು ಅಭಿವೃದ್ಧಿ ಯೋಜನೆಗಳಿಗೆ ತಿರುಗಿಸುವಿಕೆಯಿಂದಾಗಿ ೪೦ ಲಕ್ಷ ಹೆಕ್ಟೇರ್‌ಗಿಂತಲೂ ಹೆಚ್ಚು ನಷ್ಟವಾಗಿದೆ ಎಂಬ ಅಂಶದ ಹೊರತಾಗಿಯೂ ಈ ಪ್ರದೇಶದ ಮಾಹಿತಿ ಇದ್ದ ಹಾಗೆಯೇ ಇದೆ.

ದುರದೃಷ್ಟವಶಾತ್, ರಾಷ್ಟ್ರೀಯ ಅರಣ್ಯ ನೀತಿ ಮತ್ತು ರಾಷ್ಟ್ರೀಯ ವನ್ಯಜೀವಿ ಕ್ರಿಯಾ ಯೋಜನೆಯಲ್ಲಿನ ನೀತಿ ಸೂಚನೆಗಳು ಉತ್ತಮ ವೈಜ್ಞಾನಿಕ ಜ್ಞಾನವನ್ನು ಆಧರಿಸಿಲ್ಲ. ಅರಣ್ಯ ನಷ್ಟಕ್ಕೆ ಪರಿಹಾರರೂಪದ ಅರಣ್ಯೀಕರಣವೇ ರಾಮಬಾಣವಾಗಿದೆ ಎಂಬ ವಿತಂಡವಾದ ಮುಂದುವರಿದೆ. ಹಾಗೆಯೇ, ಕೆಟ್ಟ ಯೋಜಿತ ಅಭಿವೃದ್ಧಿ ಯೋಜನೆಗಳಿಂದ ಉಂಟಾಗುವ ಅರಣ್ಯ ವಿಘಟನೆಯ ಬೆದರಿಕೆಯನ್ನು ಸರಿಯಾಗಿ ಪರಿಹರಿಸಲು ವಿಜ್ಞಾನ ಆಧಾರಿತ ನೀತಿಯನ್ನು ರೂಪಿಸಿಲ್ಲದಿರುವುದೇ ದೊಡ್ಡ ಕೊರತೆ.

ಹೆದ್ದಾರಿಗಳು ಮತ್ತು ರೈಲ್ವೆಮಾರ್ಗದಂತಹ, ಕಾಡು ಕತ್ತರಿಸಿಹಾಕುವ ಅಭಿವೃದ್ಧಿಕಾರ್ಯಗಳ ಪರಿಣಾಮವನ್ನೂ ಪರಿಹಾರಗಳನ್ನೂ ಕುರಿತು ಸೂಕ್ತವರದಿಯನ್ನು ಭಾರತದ ವನ್ಯಜೀವಿ ಸಂಸ್ಥೆ ಹೊರತಂದಿದೆ. ಆದರೆ, ಕಾಡುಗಳನ್ನು ತೆರವುಗೊಳಿಸುವ ಪ್ರಕ್ರಿಯೆಯಲ್ಲಿ, ವರದಿಯಲ್ಲಿ ಹೇಳಿರುವ ಪರಿಹಾರಕ್ರಮಗಳನ್ನಾಗಲಿ ವಿವರಿಸಿರುವ ತತ್ವಗಳನ್ನಾಗಲಿ ಪರಿಗಣಿಸಲಾಗುತ್ತಿಲ್ಲ. ಉದಾಹರಣೆಗೆ, ಪಶ್ಚಿಮ ಘಟ್ಟಗಳನ್ನು ಸುಮಾರು ೧೫ ಕಿ.ಮೀ ಗಳ ಅಂತರದಲ್ಲೇ ಹೇಗೆ ಪಂಕ್ಚರ್ ಮಾಡಲಾಗುತ್ತಿದೆ ಎಂಬುದನ್ನು ನೋಡಿದರೆ, ಜೀವಿಪರಿಸ್ಥಿತಿ ಮತ್ತು ಆರ್ಥಿಕತೆ ಎರಡರ ಮೇಲೂ ವಿಪರೀತ ಪರಿಣಾಮ ಬೀರುವುದನ್ನು ಗಮನಿಸಬಹುದು.

ಈ ಸವಾಲುಗಳನ್ನು ದೃಢವಾಗಿ ನಿಭಾಯಿಸಲು, ಕೆಲವು ಪ್ರಮುಖ ನೀತಿ ಸುಧಾರಣೆಗಳನ್ನು ತುರ್ತಾಗಿ ಜಾರಿಗೊಳಿಸುವ ಅಗತ್ಯವಿದೆ, ಅವುಗಳೆಂದರೆ - ನೈಸರ್ಗಿಕ ಕಾಡುಗಳ ಮತ್ತಷ್ಟು ವಿಘಟನೆಯನ್ನು ಕಡಿಮೆ ಮಾಡುವ ವೈಜ್ಞಾನಿಕ ಭೂದೃಶ್ಯ / ಪರಿಸರ ವ್ಯವಸ್ಥೆಯ ಆಡಳಿತಕ್ಕೆ ಒಂದು ಮಾದರಿ ಬದಲಾವಣೆ; ಸಂಪರ್ಕವನ್ನು ಖಚಿತಪಡಿಸಿಕೊಳ್ಳಲು ಹೆಚ್ಚಿನ ಆದ್ಯತೆ; ಪ್ರಸ್ತುತ ಕಾಡುಗಳೊಳಗಿನ ವಿನಾಶಕಾರಿ ಅಭಿವೃದ್ಧಿ ಕಾರ್ಯಗಳಿಗೆ ಧನಸಹಾಯ ನೀಡಲು ಬಳಸುತ್ತಿರುವ ಸುಮಾರು ೫೦,೦೦೦ ಕೋಟಿಗಳ ಬೃಹತ್ ಕ್ಯಾಂಪಾ ನಿಧಿಯನ್ನು ವನ್ಯಜೀವಿಗಳ ಆವಾಸಸ್ಥಾನಗಳನ್ನು ಕ್ರೋಡೀಕರಿಸಲು ಬಳಸುವುದು. ಹಾಳಾದ ಕಾಡುಗಳ ಸ್ವಾಭಾವಿಕ ಚೇತರಿಕೆ ಬಹಳ ನಾಮಮಾತ್ರ ವೆಚ್ಚದಲ್ಲಿ ಸಂಭವಿಸುತ್ತದೆ ಎಂದು ತಿಳಿದರೆ ಸಾಕು, ಮುಖ್ಯವಾಗಿ, ಕಾಡನ್ನು ಬೆಂಕಿಯಿಂದ ರಕ್ಷಿಸಬೇಕು. ಜಾನುವಾರುಗಳ ಮೇಯಿಸುವಿಕೆ ತಪ್ಪಬೇಕು ಮತ್ತು ಇಲಾಖೆಯ ಸಿಬ್ಬಂದಿಯ ಆಲಸ್ಯದಿಂದ ರಕ್ಷಿಸುವುದಕ್ಕಿಂತ ಹೆಚ್ಚೇನೂ ಅಗತ್ಯವಿಲ್ಲ. ಮೂಲಸೌಕರ್ಯ ಯೋಜನೆಗಳನ್ನು ಪ್ರತ್ಯೇಕಿಸಿ ಮತ್ತು ಎಲ್ಲಾ ಅರಣ್ಯೇತರ ಘಟಕಗಳನ್ನು ಕಾಡುಗಳ ಹೊರಗೆ ಸರಿಸಬೇಕು. ಅರಣ್ಯಗಳನ್ನು ತೆರವುಗೊಳಿಸುವ ಪ್ರಕ್ರಿಯೆಯಲ್ಲಿ ಸರಿಯಾದ ಮಾರ್ಗಸೂಚಿಗಳನ್ನು ಜಾರಿಗೆ ತರುವುದು. ಅರಣ್ಯಪ್ರದೇಶದಲ್ಲಿ ಓವರ್‌ಪಾಸ್ / ಅಂಡರ್‌ಪಾಸ್, ಎಚ್‌ವಿ ಡಿಸಿ ಪವರ್ ಕೇಬಲ್‌ಗಳ ಅಳವಡಿಕೆ ಮುಂತಾದ ಕೆಲಸಗಳಲ್ಲಿ ವನ್ಯಜೀವನಕ್ಕೆ ಧಕ್ಕೆಯಾಗದಂತೆ ವೈಜ್ಞಾನಿಕ ಕ್ರಮಗಳನ್ನು ಕಡ್ಡಾಯಗೊಳಿಸುವುದು.

ಮೇಲಿನವುಗಳಿಗೆ ಹೆಚ್ಚುವರಿಯಾಗಿ, ನದಿಗಳು - ಒಂದು ಪ್ರಮುಖ ರಾಷ್ಟ್ರೀಯ ಆಸ್ತಿಗೆ ಕಾನೂನು ರಕ್ಷಣೆಯ ಅಗತ್ಯವಿರುತ್ತದೆ, ಅದನ್ನು ಯಾವುದೇ ಹೊಸ ಕಾನೂನುಗಳ ಅಗತ್ಯವಿಲ್ಲದ ಇ ಎಸ್ ಜೆಡ್ ಆಡಳಿತದ ಅಡಿಯಲ್ಲಿ ತರುವ ಮೂಲಕ ಒದಗಿಸಬಹುದು.

ಅಂತಿಮವಾಗಿ, ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಸಮತೋಲನಗೊಳಿಸಲು ನಾವು ಮುನ್ನೆಚ್ಚರಿಕೆ ತತ್ವ ಮತ್ತು ಅಂತರ-ಪೀಳಿಗೆಯ ಒಪ್ಪಿತ ಸಿದ್ಧಾಂತಗಳ ಒರೆಗಲ್ಲಿನಲ್ಲಿ ಅಭಿವೃದ್ಧಿ ನೀತಿಯನ್ನು ಪರೀಕ್ಷಿಸಬೇಕಾಗಿದೆ. ಪ್ರಸ್ತುತ ಸರಿದೂಗಿಸುವ ಅರಣ್ಯೀಕರಣ ನೀತಿ ವಿಧಾನವು ಮುಂದುವರಿದರೆ, ನಾವು ಹಸಿರು ಭಾರತವನ್ನೇನೋ ಕಾಣಬಹುದು ಆದರೆ ನೈಸರ್ಗಿಕ ಕಾಡುಗಳನ್ನು ಕಳೆದುಕೊಳ್ಳಬೇಕಾಗುತ್ತದೆ.



**ಪಶ್ಚಿಮಘಟ್ಟಗಳ ಉಳಿವಿನ ಬಗೆಗೆ ೨೦ ಆಗಸ್ಟ್ ೨೦೧೨ರಂದು ಏರ್ಪಡಿಸಿದ್ದ ಸಭೆಯಲ್ಲಿ ಅನಂತಕುಮಾರ್ ಮಾತನಾಡುತ್ತಿರುವುದು. ಪಕ್ಕದಲ್ಲಿರುವವರು ಈ ಬರೆಹದ ಲೇಖಕ ಪ್ರವೀಣ್ ಭಾರ್ಗವ್**

# ಯೇ ಮೇರಾ ಲಡ್ಕಾ ಹೈ

ಅನಂತಕುಮಾರ್ ನಮ್ಮ ಜೊತೆ ಭೌತಿಕವಾಗಿ ಇಲ್ಲ ಎನ್ನುವಂತಹದ್ದು ನಮಗೆ ಅನ್ನಿಸುವುದೇ ಇಲ್ಲ ಎಂದು ಅನೇಕರು ಹೇಳುತ್ತಿರುತ್ತಾರೆ. ಅದನ್ನು ಅಕ್ಷರಶಃ ನಾನು ಪ್ರತಿದಿವಸ ಅನುಭವಿಸುತ್ತಿರುತ್ತೇನೆ. ನನ್ನ ಕಚೇರಿಯನ್ನು ಪ್ರವೇಶಿಸುತ್ತಿರುವಂತೆಯೇ ಬಲಗಡೆಯಲ್ಲಿ ಭಾರತಮಾತೆ ಮತ್ತು ಅನಂತ್‌ಕುಮಾರ್ ಫೋಟೋ ಇರಿಸಿದೆ. ಆಫೀಸಿನ ಒಳಗಡೆ ಬರುವಾಗ ನಾನು ಪ್ರತಿದಿನ ಭಾರತಮಾತೆಗೆ ನಮಸ್ಕರಿಸಿ ಅನಂತ್‌ಕುಮಾರ್‌ರವರು ಕ್ರಮಿಸಿದ ದುಡಿಮೆಯ ಹಾದಿಯಲ್ಲಿ ನಾನು ಸಾಗುವಂತಹ ಶಕ್ತಿಯನ್ನು ನನಗೆ ಕೊಡುವಂತೆ ಆ ತಾಯಿ ಭಾರತಿಯಲ್ಲಿ ಕೇಳಿಕೊಂಡೇ ನಾನು ಒಳಗೆ ಬರುವುದು. ಅನಂತ್‌ಕುಮಾರ್ ನೆನಪು ಇವತ್ತಿಗೂ ಸಹ ಆರೀತಿಯ ಪ್ರೇರಣಾದಾಯಿ ಶಕ್ತಿ.

ಹಿಂದೆ, ರಾಜಸ್ಥಾನದಲ್ಲಿ ನಡೆದ ಜನಚೇತನ ಯಾತ್ರೆಗೆ ಹೋಗಿದ್ದ ಸಂದರ್ಭ. ರಾಜಸ್ಥಾನದ ಹೋಟೆಲ್‌ನಲ್ಲಿ ರಥಯಾತ್ರೆಗೆ ಸಂಬಂಧಪಟ್ಟಂತೆ ಸಂಜೆ ಅಡ್ವಾನಿಯವರ ಜೊತೆ ಎಗ್ಸಿಕ್ಯುಟಿವ್ ಕಮಿಟಿಯ ಮೀಟಿಂಗ್ ಇತ್ತು. ಅನಂತ್‌ಕುಮಾರ್ ಆ ರಥಯಾತ್ರೆಯ ಕನ್ವಿನರ್ ಆಗಿದ್ದರು. ಆ ಹೋಟೆಲ್‌ನಲ್ಲಿ ನಾವೆಲ್ಲಾ ಇದ್ದೆವು. ನಾವು ಹೊರಗಡೆ ನಿಂತಿದ್ದೆವು.ನಾನು ಮತ್ತು ನನ್ನ ಆತ್ಮೀಯ ಸ್ನೇಹಿತ ಮಧುಕೇಶ್ವರ ದೇಸಾಯಿ-ಮೊರಾರ್ಜಿ ದೇಸಾಯಿಯವರ ಮೊಮ್ಮಗ ಅಲ್ಲಿ ಒಟ್ಟಾಗಿ ನಿಂತಿದ್ದೆವು.ಮೀಟಿಂಗ್‌ನಲ್ಲಿ ಅರುಣ್‌ಜೇಟ್ಲಿ ಅವರು ಸೇರಿದಂತೆ ಕೆಲವೊಂದಷ್ಟು ಪ್ರಮುಖರಿದ್ದರು.ಒಂದು ನಿಮಿಷ ಒಳಗಡೆ ಹೋದರೆ ನಾವು ಅವರ ಜೊತೆ ಸೆಲ್ಫಿ, ಒಂದು ಫೋಟೋ ತೆಗೆಸಿಕೊಂಡು ಬರಬಹುದು ಎಂದೂ ಹೇಗಾದರೂ ಒಳಗಡೆ ಹೋಗಬೇಕೆಂದು ನಾವು ಹೊರಗಡೆಯಿಂದ ಪ್ರಯತ್ನ ಮಾಡುತ್ತಿದ್ದೆವು.ಹೀಗೆ ನಾವು ಒಳಗೆ ಬರುವಾಗ ಒಬ್ಬರು ರಾಜಸ್ಥಾನದ ಬಿಜೆಪಿಯ ನಾಯಕರು ಮಧುಕೇಶ್ವರ ದೇಸಾಯಿಯನ್ನು ಗುರುತಿಸಿದರು. ಅವನನ್ನು ಒಳಗೆ ಕರೆದುಕೊಂಡು ಹೊರಟರು. ನನ್ನ ಹತ್ತಿರ ಐಡೆಂಟಿಟಿ ಕಾರ್ಡ್ ಇದ್ದರೂ ಒಳಗೆ ಬಿಡಲಿಲ್ಲ. ಆಗ ಅಲ್ಲಿಗೆ ಅನಂತ್‌ಕುಮಾರ್ ಬಂದರು. ನಾನೇನೂ ಹೇಳಲಿಲ್ಲ. ಅನಂತ್‌ಕುಮಾರ್ ಗಮನಿಸಿದರು.. ಸೆಕ್ಯೂರಿಟಿ ಬಳಿ ಹೋಗಿ ನನ್ನನ್ನು ಕರೆದರು ಆತ ಏ ಕೌನ್ ಹೈ? ಎಂದಾಗ ಅವರು ಯೇ ಮೇರಾ ಲಡಕಾ ಹೈ ಅಂದರು ಅವರು ಆರೀತಿ ಹೇಳಿದ್ದಕ್ಕೆ ನನಗೆ ಆ ಕಾರ್ಯಕ್ರಮಕ್ಕೆ ಹೋಗಲು ಪ್ರವೇಶ ಸಿಕ್ಕಿತು. ನಾನು ಒಳಗಡೆ ಹೋದೆ. ಅರುಣ್‌ಜೇಟ್ಲಿ ಅವರ ಜೊತೆ ಫೋಟೊ ತೆಗೆಸಿಕೊಂಡೆ. ಆದಿನ ನನಗೆಪ್ರವೇಶ ಸಿಕ್ಕಿದ್ದು ಯಾಕೆಂದ್ರೆ ಅನಂತ್‌ಕುಮಾರ್ ಅವರ ಹುಡುಗ ಅಂತ! ಆ ಘಟನೆ ನನ್ನ ಮನದಲ್ಲಿ ಎಷ್ಟು ಅಚ್ಚಳಿಯದೆ ಉಳಿದಿದೆಯೆಂದರೆ ಅಂದು ನನಗೆ ಅನಂತ್‌ಕುಮಾರ್ ಒಂದು ಗುರುತು, ಐಡೆಂಟಿಟಿ ಕೊಟ್ಟರು.

ಅನಂತ್‌ಕುಮಾರ್ ಎಂದರೆ ಸದಾ ಚೈತನ್ಯದ ಬುಗ್ಗೆ.. ಅವರೊಡನೆ ಕಾರಿನಲ್ಲಿ ಹೋಗುತ್ತಿದ್ದ ಸಂದರ್ಭ. ಆಗ ನಾನಿನ್ನೂ ತುಂಬಾ ಚಿಕ್ಕವನಿದ್ದೆ . ಅವರ ಕಾರಿನಲ್ಲಿ ಹಿಂದಿನ ಸೀಟಿನಲ್ಲಿ ನಾನು ಕುಳಿತಿರುತ್ತಿದ್ದೆ. ನನಗೆ ಚೀಟಿ ತಗೊ ಅನ್ನುತ್ತಿದ್ದರು,ಕಾಗದದಲ್ಲಿ ಯಾವುದೋ ಒಂದೆರಡು ಲೈನ್ ಚುಟುಕು ಬರೆಯುತ್ತಿದ್ದರು.ಕವಿತೆ ಬರೆಯುತ್ತಿದ್ದರು,ಹಾಸ್ಯ ಚಟಾಕಿ ಹಾರಿಸುತ್ತಿದ್ದರು.ಯಾರ ಮೇಲೋ ಜೋಕ್ ಮಾಡುತ್ತಿದ್ದರು.

ಅನಂತ್‌ಕುಮಾರ್ ಎಂದರೆ ಸ್ನೇಹ, ಹಾಸ್ಯ,ಒಬ್ಬರನ್ನು ಗುರುತಿಸಿ ಬೆಳೆಸುವಂತಹದ್ದು. ಇವೆಲ್ಲವೂ ಕೂಡ ನನಗೆ ನೆನಪಾಗುತ್ತದೆ. ಅಂತಹ ದಕ್ಷ ಆಡಳಿತಗಾರ, ನಾಯಕ ಪ್ರೇರಣಾದಾಯಿ ನಮ್ಮಂತಹ ಕೋಟ್ಯಂತರ ಜನರಿಗೆ ಐಡೆಂಟಿಟಿ ಕೊಟ್ಟವರು.. ಅವರು ಸದಾ ನಮ್ಮ ಜೊತೆ ಇರುತ್ತಾರೆ.



**ತೇಜಸ್ವಿ ಸೂರ್ಯ**
**ಲೋಕಸಭಾ ಸದಸ್ಯ**

ಸಾಧಕರೊಡನೆ ಸಂದರ್ಶನ

# "ನಾನು ಏನು ಹೇಳಿದರೂ ಕನ್ನಡದ ಮೂಲಕವೇ ಹೇಳಬೇಕು"

- ಡಾ. ಹೆಚ್. ಎಸ್. ವೆಂಕಟೇಶಮೂರ್ತಿ



**ಕನ್ನಡನಾಡು ಉದಯಿಸಿ ಎಪ್ಪತ್ತು ವರುಷಗಳು ಕಳೆದರೂ ಕನ್ನಡಭಾಷೆಗೆ ಇನ್ನೂ ಸೂಕ್ತ ಸ್ಥಾನಮಾನಗಳು ಲಭ್ಯವಾಗಿಲ್ಲ ಎಂಬ ಕೊರಗು ಇದ್ದೇ ಇದೆ. ಇದು ನಿಜವೇ?**

ನಿಜ. ಶಿಕ್ಷಣ ವ್ಯವಸ್ಥೆಯಿಂದ ಕನ್ನಡ ಬಹಿಷ್ಕೃತವಾಗುತ್ತಿದೆ. ವ್ಯವಹಾರದಲ್ಲೂ ಕನ್ನಡಕ್ಕೆ ಸಿಕ್ಕಬೇಕಾದ ಮಾನ್ಯತೆ ಸಿಗುತ್ತಿಲ್ಲ. ಹಳ್ಳಿ ಹಳ್ಳಿಗಳಲ್ಲಿ, ಮನೆಮನೆಗಳಲ್ಲಿ, ಉದ್ಯೋಗವಲಯಗಳಲ್ಲಿ, ಅಧಿಕಾರ , ಆಡಳಿತ ರಂಗಗಳಲ್ಲಿ ಕನ್ನಡ ಅಲಕ್ಷಿತವಾಗುತ್ತಿದೆ. ಮಕ್ಕಳು ಕನ್ನಡದ ಕೈ ತಪ್ಪಿದರೆಂದರೆ ಭಾಷೆಯ ನಿತ್ಯೋಪಯೋಗ ಕ್ಷೀಣಗೊಳ್ಳುತ್ತದೆ. ಈ ಬಗ್ಗೆ ನಾವೆಲ್ಲ ಜಾಗೃತರಾಗಬೇಕಾದದ್ದು ಅನಿವಾರ್ಯ.

**ಕನ್ನಡವನ್ನು ಕಲಿಕೆಯ ಭಾಷೆಯಾಗಿ, ಶಿಕ್ಷಣಮಾಧ್ಯಮವಾಗಿ ಬೋಧಿಸುವಲ್ಲಿ ನಿಮ್ಮ ಸಲಹೆಗಳೇನು?**

ಪ್ರೈಮರಿ ಮತ್ತು ಮಾಧ್ಯಮಿಕ ಶಾಲೆಯಲ್ಲಿ ಮಕ್ಕಳು ಕನ್ನಡದ ಮೂಲಕವೇ ಕಲಿಯುವಂತಾಗಬೇಕು. ಇಂಗ್ಲಿಷ್ ಭಾಷೆಯನ್ನು ಒಂದು ಪಠ್ಯ ವಿಷಯವಾಗಿ ಬೋಧಿಸಲು ಅಡ್ಡಿಯಿಲ್ಲ. ಸಾರ್ವಭೌಮತ್ವ ಕನ್ನಡಕ್ಕೇ-ಪರಿಸರ ಭಾಷೆಗೇ -ಇರಬೇಕು.

**ಕನ್ನಡ, ಕನ್ನಡಿಗರಿಗೆ ಸವಲತ್ತಿನ ಮಾತು ಬಂದ ಕೂಡಲೇ ದೇಶದ ಸಮಗ್ರತೆಯ ನೆಪದಲ್ಲಿ ಆಕ್ಷೇಪ ಕಾಣಿಸಿಕೊಳ್ಳುತ್ತದೆಯಲ್ಲ!**

ಪ್ರಾಂತೀಯತೆಯ ಲಕ್ಷಣಗಳನ್ನು ಉಳಿಸಿಕೊಂಡು ನಾವು ದೇಶೀಯ ಐಕ್ಯದ ಬಗ್ಗೆ ಮಾತಾಡಬೇಕು.

**ತಮ್ಮ ಸಾಹಿತ್ಯ ಲೇಖನ, ಕಾವ್ಯರಚನೆಗಳ ದೀರ್ಘಕಾಲೀನ ಸಾಧನೆಗೆ ಪ್ರೇರಕವಾದ ಅಂಶ ಯಾವುದು?**

ಸಾಹಿತ್ಯ, ವಿಶೇಷವಾಗಿ ಕಾವ್ಯ, ನನ್ನ ಅಂತರಂಗದ ಭಾಷೆ. ನಾನು ಏನು ಹೇಳಿದರೂ ಕನ್ನಡದ ಮೂಲಕವೇ ಹೇಳಬೇಕು. ಇದೇ ನನ್ನ ಬಹುಕಾಲದ ತೊಡಗುವಿಕೆಗೆ ಪ್ರೇರಕ.

**ನವ್ಯ, ನವ್ಯೋತ್ತರಗಳನ್ನು ದಾಟಿ ಇಪ್ಪತ್ತೊಂದನೆಯ ಶತಮಾನದಲ್ಲಿ ಹೊಸ ನೆಲೆಯನ್ನು ಕಂಡುಕೊಳ್ಳಲು ಯತ್ನಿಸುತ್ತಿರುವ ಕನ್ನಡ ಸಾಹಿತ್ಯದ ಸ್ಥಿತಿಗತಿ, ಆಶೋತ್ತರಗಳ ಬಗೆಗೆ ತಮ್ಮ ಅಭಿಪ್ರಾಯವೇನು?**

ತುಂಬ ಸಮರ್ಥರಾದ ಹೊಸ ಲೇಖಕರು ಕಾಣಿಸಿಕೊಂಡಿದ್ದಾರೆ. ಗಟ್ಟಿಯಾದ, ಘನವಾದ ಕಾದಂಬರಿಗಳೂ ಬರುತ್ತಾ ಇವೆ. ೨೧ ನೇ ಶತಮಾನ ಪ್ರಮುಖವಾಗಿ ಕಾದಂಬರಿ, ಕಥೆಗಳ ಯುಗವಾಗಬಹುದು.

**ಕವಿತೆಯ ಪ್ರಕಾರವನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಮುಂದುವರಿಸಲು ಅಪೇಕ್ಷಿಸುವ ಸಾಹಿತ್ಯಾಭ್ಯಾಸಿಗಳಿಗೆ ತಮ್ಮ ಸಲಹೆಯೇನು?**

ಕಾವ್ಯ ರಂಜನೆಯ ಮಾಧ್ಯಮವಲ್ಲ. ಆತ್ಮ ಶೋಧದ ಮಾರ್ಗ. ಹೊಸ ಕವಿಗಳು ಇದನ್ನು ಗ್ರಹಿಸಿ ಕಾವ್ಯ ರಚನೆಯಲ್ಲಿ ತೊಡಗುವುದು ಅಗತ್ಯವೆಂದು ಭಾವಿಸುತ್ತೇನೆ.

**ಅನಂತಕುಮಾರರಂಥ ನಾಯಕರ ವ್ಯಕ್ತಿತ್ವ, ಸಾಧನೆಗಳು ದೇಶದ ಮುನ್ನಡೆಗೆ ಹೇಗೆ ಮಾದರಿಯಾಗಬಹುದು?**

ಅನಂತಕುಮಾರರ ಪ್ರಾಮಾಣಿಕತೆ, ಕನ್ನಡ ಪ್ರೇಮ, ರಾಷ್ಟ್ರೀಯತೆ ಪ್ರಶ್ನಾತೀತವಾದುದು. ಕನ್ನಡದ ವಿಷಯ ಬಂದಾಗ ಅವರು ಪಕ್ಷಾತೀತವಾಗಿ ಕೆಲಸ ಮಾಡುತ್ತಿದ್ದರು. ಕನ್ನಡದ ಹಿತ ರಕ್ಷಣೆಗೆ ಕೇಂದ್ರದಲ್ಲಿದ್ದು ಸದಾ ಹೋರಾಡುತ್ತಿದ್ದರು. ಹೀಗಾಗಿ ಅವರ ಬಗ್ಗೆ ನನಗೆ ವಿಶೇಷ ಅಭಿಮಾನವುಂಟು. ರಾಜಕಾರಣಿಗಳಲ್ಲಿ ಪಕ್ಷಾತೀತವಾದ ದೇಶ ನಿಷ್ಠೆ ಈವತ್ತಿನ ತುರ್ತು ಅಗತ್ಯ.

ಅನಂತ ನಮನ

## ಸಾಂಸ್ಕೃತಿಕ ರಾಯಭಾರಿ

ನಾನು ೨೦೦೯ರಲ್ಲಿ ನಾನು ಭಾರತೀಯ ಜನತಾ ಪಾರ್ಟಿಯ ಒಬ್ಬ ಸದಸ್ಯಳಾದ ಮೇಲೆ ಅನಂತಕುಮಾರ್ ಅವರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವ ಅವಕಾಶ ಸಿಕ್ಕಿತು. ನನಗೆ ಅವರು ಒಬ್ಬ ಸಾಂಸ್ಕೃತಿಕ ರಾಯಭಾರಿಯಾಗಿ ಕಂಡರು. ಬಹಳ ಆಶ್ಚರ್ಯ ಅನ್ನಿಸುತ್ತ ಇದ್ದುದೇನೆಂದರೆ ಇಷ್ಟೆಲ್ಲ ರಾಜಕೀಯದಲ್ಲಿ ಸಂಘಟನೆಯಲ್ಲಿ ಎಲ್ಲ ಕಡೆ ಅಷ್ಟೊಂದು ಬಿಡುವಿಲ್ಲದ ಸಮಯದಲ್ಲಿಯೂ ಕೂಡ ಅವರು ಸಾಹಿತ್ಯ ಆಸಕ್ತಿಯನ್ನು ಒಂದು ಚೂರು ಕಳೆದುಕೊಳ್ಳದೇ ಇದ್ದುದು. ಸಾಹಿತ್ಯದ ಅಧ್ಯಯನವಾಗಲಿ, ಪುಸ್ತಕಗಳನ್ನು ನಮಗೆಲ್ಲ ಕೊಟ್ಟು ಓದಿ ಅಂತ ಹೇಳುವುದಾಗಲೀ ಅಥವಾ ಸಿನಿಮಾಗಳನ್ನು ನೋಡಿ ಅದರ ವಿಶ್ಲೇಷಣೆ ಮಾಡುವುದಾಗಲೀ ಅಚ್ಚರಿಯಿಂಟುಮಾಡುತ್ತಿತ್ತು. ಬಿಡುವಿಲ್ಲದ ಕೆಲಸಗಳ ನಡುವೆ ಇವರಿಗೆ ಇಷ್ಟೊಂದು ಸಮಯ ಎಲ್ಲಿ ಸಿಗುತ್ತೆ ಎನ್ನಿಸುತ್ತಿತ್ತು.

ನನ್ನ ಅಭಿನಯದ ಹೆಬ್ಬೆಟ್ಟು ರಾಮಕ್ಕ ಚಿತ್ರದ ಆಡಿಯೋ ಬಿಡುಗಡೆಗೆ ಅನಂತಕುಮಾರ್ ಅವರು ಅತಿಥಿಯಾಗಿ ಬಂದಿದ್ದರು. ಬಂದು ಅಲ್ಲಿ ಬಹಳಷ್ಟು ಆ ಸಿನಿಮಾ ಬಗ್ಗೆ ಮಾತಾಡಿ ಆ ಸಿನಿಮಾವನ್ನು ನೋಡಬೇಕು ಅಂತ ಬಯಸಿದ್ದರು. ಮತ್ತೆ ಸಾವಿತ್ರಿಬಾಯಿ ಫುಲೆಯವರ ಬಗೆಗೂ ತಮ್ಮ ತಾಯಿಯವರಾದ ಗಿರಿಜಾ ಶಾಸ್ತ್ರಿಯವರ ಬಗೆಗೂ ನಮಗೆ ಬಹಳಷ್ಟು ಹೇಳಿ ನಮ್ಮನ್ನು ಹುರಿದುಂಬಿಸುತ್ತ ಇದ್ದರು. ಅಯ್ಯೋ ನನ್ನ ಎರಡು ಸಿನಿಮಾಗಳನ್ನು ಅವರು ನೋಡಲಿಲ್ಲವಲ್ಲ ಅವರು ಎಂಬ ದುಃಖ ನನ್ನನ್ನು ಇವತ್ತಿಗೂ ಒಂದು ರೀತಿಯಾಗಿ ಎಲ್ಲೋ ಬಹಳ ಕಾಡುವುದು. ಅನಂತಣ್ಣ ಇಲ್ಲದ ನೋವನ್ನೆಲ್ಲ ಮರೆಸುವಂಥ ಒಳ್ಳೆಯ ಕೆಲಸಗಳನ್ನು ಇವತ್ತು ತೇಜಸ್ವಿನಿ ಅಮ್ಮ ಮಾಡುತ್ತ ಇದ್ದಾರೆ. ಅವರ ಕುಟುಂಬದ ಸದಸ್ಯರು ಎಲ್ಲರೂ ಸೇರಿ ಅದಮ್ಯಚೇತನದ ಮೂಲಕ ಹಲವಾರು ಒಳ್ಳೆಯ ಕೆಲಸಗಳನ್ನು ಮುಂದುವರೆಸುತ್ತ ಇದ್ದಾರೆ. ಅವರ ನೆನಪನ್ನು ಇನ್ನು ಹಸಿರಾಗಿಸುವುದಕ್ಕೋಸ್ಕರ ಹಸಿರು ಬೆಂಗಳೂರು ಆಂದೋಲನವನ್ನು ಹಮ್ಮಿಕೊಂಡಿದ್ದಾರೆ. ಎಲ್ಲರಿಗೂ ನನ್ನ ಧನ್ಯವಾದಗಳು.



**ತಾರಾ ಅನುರಾಧ**
ಸದಸ್ಯರು, ಕರ್ನಾಟಕ ವಿಧಾನಪರಿಷತ್ತು

## ಜ್ಞಾನ ವಿಜ್ಞಾನ ತತ್ವಜ್ಞಾನದ ಸಂಗಮ

ಅನಂತಕುಮಾರ್ ಅವರು ಸರಳ ಸಜ್ಜನರೂ ಸದಾ ಕ್ರಿಯಾಶೀಲರೂ ಎನಿಸಿದ ಅತ್ಯಂತ ಸುಸಂಸ್ಕೃತ ರಾಜಕಾರಣಿ ಅಂತ ಹೇಳಬಹುದು. ಅಂತಹ ಚಟುವಟಿಕೆಯಿಂದ ಇರುವಂಥ ವ್ಯಕ್ತಿ ಇದ್ದಕ್ಕಿದ್ದಂತೆ ಕಣ್ಮರೆಯಾಗಿದ್ದು ನಮ್ಮೆಲ್ಲರಿಗೂ ಆಘಾತವುಂಟುಮಾಡಿತು. ಆದರೆ ಅವರು ಬದುಕಿದ ಅವಧಿ ಕಡಿಮೆಯಾದರೂ ಮಾಡಿದ ಸಾಧನೆ ಅಗಾಧವಾದಂಥದ್ದು.

ಅವರು ಪ್ರಥಮಬಾರಿಗೆ ಕೇಂದ್ರಮಂತ್ರಿ ಆದಾಗ ಪ್ರಧಾನಿಯವರು ಅವರಿಗೆ ಹೇಳಿದರಂತೆ ಜನರ ಬದುಕು ಸುಖಕರ ಆಗಬೇಕು ಅಂದರೆ ರೈತರಿಗೂ ಜನರಿಗೂ ಒಳ್ಳೆಯ ಕಾರ್ಯಕ್ರಮವನ್ನು ಆಯೋಜಿಸಿ ಅಂತ ಅವರಿಗೆ ಸೂಚನೆ ಕೊಟ್ಟರಂತೆ. ಅದಕ್ಕೆ ಸರಿಯಾಗಿ ಅವರು ರೈತರಿಗೆ ರಾಸಾಯನಿಕ ಗೊಬ್ಬರ ಸುಲಭವಾಗಿ ಕಡಿಮೆದರದಲ್ಲಿ ಸಿಗುವ ಹಾಗೆ ಅವರು ಮಾಡಿದರು. ಅಷ್ಟೇ ಅಲ್ಲ ಜನರಿಗೆ ಜನರಿಕ್ ಔಷಧಗಳು, ಹೃದಯದ ಸ್ಟೆಂಟ್, ಮೊಳಕಾಲ ಚಿಪ್ಪು ಚಿಕಿತ್ಸೆ ಎಲ್ಲವೂ ಅತ್ಯಂತ ಕಡಿಮೆಬೆಲೆಯಲ್ಲಿ ಸಿಕ್ಕುವ ಹಾಗೇ ಮಾಡಿದಂಥ ಅದ್ಭುತ ಕೆಲಸ ಅವರದ್ದು.

ಪಾರಮಾರ್ಥಿಕದ ಜೊತೆಗೆ ದೇಶ ಪ್ರೇಮ ಸಮಾಜ ಪ್ರೇಮ, ಈ ಎರಡು ಸದ್ಗುಣಗಳನ್ನೂ ತಮ್ಮ ಮನದಲ್ಲಿ ಇಟ್ಟುಕೊಂಡು ಅದರಂತೆ ನಡೆದಂಥವರು ಅವರು. ಬಿಹಾರ್‌ನಲ್ಲಿ ಆಗಲಿ ಮಧ್ಯಪ್ರದೇಶದಲ್ಲಾಗಲಿ ಅಷ್ಟೇ ಏಕೆ, ಇಡೀ ಭಾರತದಾದ್ಯಂತ ಅತ್ಯಂತ ಜನಪ್ರಿಯರಾದಂಥ ಕರ್ನಾಟಕದ ಒಬ್ಬ ರಾಜಕಾರಣಿ ಅಂದರೆ ಅನಂತಕುಮಾರ್ ಅವರು. ಅವರು ಜ್ಞಾನ ವಿಜ್ಞಾನ ತತ್ವಜ್ಞಾನದ ಸಂಗಮವಾಗಿದ್ದರು. ಸಾಹಿತ್ಯ ಸಂಗೀತ ಸಂಸ್ಕೃತಿಯ ಸಂಗಮವಾಗಿದ್ದರು. ಶಿಸ್ತು ಶ್ರದ್ಧೆ ಸಮಯಗಳ ಸಂಗಮವೂ ಆಗಿದ್ದರು. ಹಾಗಾಗಿ ರಾಜಕಾರಣಿಗಳಲ್ಲೇ ಅತ್ಯಂತ ಅಪರೂಪವಾದಂಥ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು ಅನಂತಕುಮಾರ್ ಆಗಿದ್ದರು. ದೇಶವು ಅವರಂಥ ಅತ್ಯಂತ ಉತ್ಕೃಷ್ಟ ರಾಜಕಾರಣಿಗಳನ್ನು ಬೆಳೆಸುವಂತಾಗಲಿ ಎಂದು ಹಾರೈಸುತ್ತೇನೆ.



**ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ**
ಖ್ಯಾತ ವೈದ್ಯರು

# ಕನ್ನಡದ ಅನಂತಪ್ರೇಮ



ಕನ್ನಡ ಭಾಷೆಯ ಬಗೆಗೆ ಕನ್ನಡದ ಬಗ್ಗೆ ಅನಂತ್ ಕುಮಾರ್ ಅವರಿಗೆ ಮೊದಲಿನಿಂದಲೂ ವಿಶೇಷವಾದ ಪ್ರೀತಿ. ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಾಗಿ ರಾಜ್ಯಮಟ್ಟದಲ್ಲೂ , ನಗರ ಮಟ್ಟದಲ್ಲೂ ನಡೆಯುತ್ತಿದ್ದ ಎಲ್ಲಾ ಕಾರ್ಯಕ್ರಮಗಳನ್ನು ಬಹುಮಟ್ಟಿಗೆ ಶುದ್ಧ ಕನ್ನಡದಲ್ಲಿ ನಡೆಸುತ್ತಿದ್ದರು. ಸಾಮಾನ್ಯ ಕಾರ್ಯಕರ್ತನ ಹಂತದಿಂದ ಮೇಲೇರಿ ರಾಜ್ಯ ಪ್ರಧಾನಕಾರ್ಯದರ್ಶಿಯಾಗಿ , ಸಂಘಟನಾ ಕಾರ್ಯದರ್ಶಿಯಾಗಿ ಹತ್ತು ವರ್ಷಗಳ ಕಾಲ ಕರ್ನಾಟಕದಲ್ಲಿ ವಿದ್ಯಾರ್ಥಿ ಸಮೂಹದ ನಡುವೆ ಓಡಾಡುತ್ತಾ ಶುದ್ಧ ಕನ್ನಡದಲ್ಲಿ ಮಾತನಾಡುತ್ತಾ ಅವರು ಭಾಷಾ ಪ್ರೇಮವನ್ನು ಮೆರೆದರು.

ಪದವಿಯಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಸಾಹಿತ್ಯವನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡಿದ್ದರೂ, ಇಂಗ್ಲೀಷ್ ನಲ್ಲಿ ಯಾವ ರೀತಿಯ ಪ್ರಭುತ್ವ ಇತ್ತೋ ಕನ್ನಡದಲ್ಲಿ ಅದೇ ರೀತಿಯ ಭಾಷಾಪ್ರಭುತ್ವವನ್ನು ಅನಂತ್ ಪಡೆದಿದ್ದರು. ಮುಂದೆ ಅವರು ರಾಜಕೀಯಕ್ಕೆ ಸೇರ್ಪಡೆಯಾದ ಮೇಲೆ ೧೯೯೫ ರಲ್ಲಿ ರಾಷ್ಟ್ರೀಯ ಕಾರ್ಯದರ್ಶಿಗಳಾದರು. ಭಾರತೀಯ ಜನತಾ ಪಕ್ಷ ಕ್ಕೆ ಸೇರಿಕೊಂಡ ಬಳಿಕ ದೆಹಲಿಯವರ ಜೊತೆಗೆ ಅನಂತ್ ಕುಮಾರ್ ಅವರ ಒಡನಾಟ ಮೊದಲಾಯಿತು. ತಮ್ಮ ಬದುಕಿನ ಕೊನೆಯವರೆಗೂ ಕರ್ನಾಟಕ ಮತ್ತು ದೆಹಲಿಯ ಸಂಪರ್ಕದ ಮಾಧ್ಯಮವಾಗಿದ್ದವರು ಅವರೇ. ಕರ್ನಾಟಕಕ್ಕೆ ಸಂಬಂಧಿಸಿದ ಎಲ್ಲ ಮಾತುಕತೆಯನ್ನು ಅನಂತ್ ಕುಮಾರ್ ಅವರೇ ನಿರ್ವಹಿಸುತ್ತಿದ್ದರು. ಹೀಗಾಗಿ ಹಿಂದಿಯನ್ನು ಮಾತನಾಡುವುದರಲ್ಲೂ ಪರಿಣತಿಯನ್ನು ಸಾಧಿಸಿದರು.

ಮುಖ್ಯವಾಗಿ ಯಾರೇ ಪ್ರಮುಖರು ಕರ್ನಾಟಕಕ್ಕೆ ಬಂದಾಗ ವಾಜಪೇಯಿಯವರು ಇರಬಹುದು, ಅಡ್ವಾನಿಯವರು ಇರಬಹುದು , ಇವರೆಲ್ಲಾ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡುವಾಗ ಅದರ ಅನುವಾದವನ್ನು ಬಹಳ ಸುಂದರವಾಗಿ ಅನಂತ್ ಕುಮಾರ್ ಮಾಡುತ್ತಿದ್ದರು. ರಾಜಕೀಯ ಭಾಷಣಗಳ ಅನುವಾದಕ್ಕಂತೂ ಅವರಿಗೆ ಶಬ್ಧಗಳನ್ನು ಹುಡುಕುವಂತಹ, ಯೋಚನೆ ಮಾಡುವಂತಹ ಅವಶ್ಯಕತೆಯೇ ಇರಲಿಲ್ಲ, ಏಕೆಂದರೆ ಬಹುವರ್ಷಗಳಿಂದ ನಿರಂತರವಾಗಿ ಅನಂತ್ ಕುಮಾರ್ ಸಾರ್ವಜನಿಕ ಭಾಷಣವನ್ನು ಮಾಡಿಕೊಂಡು ಬಂದಿದ್ದರು ...

ಒಮ್ಮೊಮ್ಮೆ ಅದ್ವಾನಿಯವರು ಹತ್ತು ಹದಿನೈದು ನಿಮಿಷ ಮಾತನಾಡಿ ನಂತರ ಭಾಷಾಂತರಕ್ಕೆ ಅವಕಾಶಮಾಡಿಕೊಡುವುದಕ್ಕಾಗಿ ನಿಲ್ಲಿಸುತ್ತಿದ್ದರು. ಅಂದರೆ ಒಂದು ವಾಕ್ಯದಿಂದ ಮತ್ತೊಂದು ವಾಕ್ಯ ಭಾಷಾಂತರವಲ್ಲ, ಹದಿನೈದು ನಿಮಿಷಗಳ ನಿರರ್ಗಳ ಭಾಷಣದ ನಂತರ ಅನಂತ್ ಕುಮಾರ್ ಅವರು ಮಾತನಾಡುತ್ತಿದ್ದರು. ಬಹಳಷ್ಟು ಬಾರಿ ಸಾವಿರಾರು ಜನ ಸಭಿಕರೇ ಅನಂತ್ ಕುಮಾರ್ ಹದಿನೈದು ನಿಮಿಷ ಮಾತನಾಡಿದರೇ? ಯಾವ ರೀತಿ ಭಾಷಾಂತರ ಮಾಡುತ್ತಾರೆ, ಯಾವುದಾರೂ ವಿಷಯ ಬಿಟ್ಟು ಬಿಡ್ತಾರೆಯೇ, ಯಾವುದಾದರೂ ಪದ ಬಿಡುತ್ತಾರೆಯೇ?ಎಂಬುದನ್ನು ಗಮನಿಸುತ್ತಿದ್ದರು. ಆದರೆ, ವಿಷಯ ಬಿಡುವುದಿರಲಿ ಯಾವುದೊಂದು ಪದವನ್ನೂ ಬಿಡದೆ ಅದನ್ನು ಹಾಗೇ ಯಥಾವತ್ತಾಗಿ ಅನುವಾದ ಮಾಡುವುದನ್ನು ರಾಜ್ಯವಿಡೀ ಭಾರತೀಯ ಜನತಾ ಪಕ್ಷದ ಎಲ್ಲಾ ಕಾರ್ಯಕರ್ತರು, ಅವರ ಹಿತೈಷಿಗಳೆಲ್ಲಾ ನೋಡಿದ್ದಾರೆ.

ರಾಜಕೀಯ ಭಾಷಣವಷ್ಟೇ ಅಲ್ಲ. ಒಮ್ಮೆ ಅರಮನೆ ಮೈದಾನದಲ್ಲಿ ಸೌಂದರ್ಯ ಲಹರಿಯ ಸಾಮೂಹಿಕ ಪಠಣ ನಡೆದಿತ್ತು. ಅಲ್ಲಿ ಸುಮಾರು ಒಂದು ಲಕ್ಷ ಜನ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಅದ್ವಾನಿಜಿಯವರು ಮುಖ್ಯ ಅತಿಥಿಗಳು. ಅವರು ಶಂಕರಾಚಾರ್ಯರ ಬಗ್ಗೆ ಮತ್ತು ಸೌಂದರ್ಯ ಲಹರಿಯ ಗ್ರಂಥ ಹಾಗೂ ಅದರ ಮಹತ್ವಗಳನ್ನು ಹಿಂದಿಯಲ್ಲಿ ಹೇಳಿದರು. ಆಗ ಅಷ್ಟೇ ಸುಂದರವಾಗಿ ಅದನ್ನು ಕನ್ನಡದಲ್ಲಿ ನಿರೂಪಣೆ ಮಾಡಿದ ಅನಂತಕುಮಾರ್, ಯಾವುದೇ ಶಬ್ದಕ್ಕೂ ತಡಕಾಡದೆ ಕನ್ನಡದಲ್ಲಿ ಸ್ಪಷ್ಟವಾಗಿ ಅನುವಾದ ಮಾಡಿದ್ದು ಎಷ್ಟರಮಟ್ಟಿಗಿತ್ತು ಎಂದರೆ ಅದ್ವಾನಿಜಿ ಅವರ ಭಾಷಣ ನಂತರ ಅನುವಾದ ಆದ ಬಳಿಕವೇ ಚಪ್ಪಾಳೆಗಳು ಬರಲಾರಂಭವಾದವು. ಇದನ್ನು ಗಮನಿಸಿದ ಅದ್ವಾನಿಜಿಯವರು ಭಾಷಣದಲ್ಲೂ ಉಲ್ಲೇಖ ಮಾಡಿದರು, ನನ್ನ ಭಾಷಣಕ್ಕಿಂತ ಅನುವಾದವೇ ಇನ್ನೂ ಚೆನ್ನಾಗಿದೆ ಎನ್ನುವುದು ಕೇಳಿ ನನಗೆ ಸಂತೋಷವಾಗುತ್ತಿದೆ ಎಂದು ಅದ್ವಾನಿಜಿಯವರು ಹೇಳಿದರು.

ಇನ್ನೊಂದು, ಅನಂತ್ ಕುಮಾರ್ ಅವರ ಬರವಣಿಗೆ. ಕನ್ನಡದಲ್ಲಿ ಅವರು ಬರೆಯಲಾರಂಭಿಸಿದಾಗ ಆ ಬರೆವಣಿಗೆಯನ್ನು ತಿದ್ದಿತೀಡಿ ಮಾಡುವಂತೆ ಇರುತ್ತಿರಲಿಲ್ಲ. ಯಾವುದೇ ವಿಷಯವಿರಲಿ. ಒಮ್ಮೆ ಬರೆಯಲಾರಂಭಿಸಿದಾಗ ಅದೇ ಓಘದಲ್ಲಿ ಬರೆಯುತ್ತಿದ್ದುದು ಒಂದು ವಿಶೇಷತೆ.

ಇನ್ನೊಂದು ಮುಖ್ಯ ವಿಶೇಷತೆ ಎಂದರೆ ಕನ್ನಡಭಾಷೆಯ ಉಚ್ಚಾರಣೆಯ ಸೊಗಡು, ಹೊರಳುಗಳು. ಬಳ್ಳಾರಿಯಲ್ಲಿ ಯಾವರೀತಿ ಕನ್ನಡ ಮಾತನಾಡುತ್ತಾರೆ, ಧಾರವಾಡದಲ್ಲಿ ಸಿರಸಿ, ಮಂಗಳೂರುಗಳಲ್ಲಿ ಹೇಗೆ ಮಾತನಾಡುತ್ತಾರೆ, ಕಲ್ಬುರ್ಗಿ, ಬೀದರ್ ಆ ಶೈಲಿ ಬೇರೆ, ಮೈಸೂರು ಶೈಲಿಯೇ ಬೇರೆ, ಚಾಮರಾಜ ನಗರದ ಶೈಲಿ ಇನ್ನೊಂದು ಬಗೆ -ಈ ರೀತಿ ಯಾವ ಶೈಲಿ ಹೇಗೆ ಮಾತನಾಡುತ್ತಾರೆ ಎನ್ನುವುದನ್ನು ಬಹಳ ಚೆನ್ನಾಗಿ ಅದನ್ನು ನಾಟಕೀಯವಾಗಿ, ಮಿಮಿಕ್ರಿ ರೀತಿ ಅನುಕರಿಸಿ ತೋರಿಸುವುದು ಅವರ ಹವ್ಯಾಸಗಳಲ್ಲೊಂದು.

ಚಹಾ ಕುಡಿಯುತ್ತಾ ಹರಟೆಯಲ್ಲೂ ಬಗೆಬಗೆಯ ಕನ್ನಡ ಶೈಲಿಗಳನ್ನು ಉದಾಹರಿಸಿ ಹೇಳುತ್ತಿದ್ದರು. ವೇದಿಕೆಯ ಮೇಲೆ ಭಾಷಣದಲ್ಲೂ ಇಂಥ ಪ್ರಯೋಗಗಳು ನಡೆಯುತ್ತಿದ್ದುದುಂಟು. ಒಮ್ಮೆ ರವೀಂದ್ರ ಕಲಾ ಕ್ಷೇತ್ರದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಲವತ್ತೈದು ನಿಮಿಷ ಕರ್ನಾಟಕದ ಬೇರೆಬೇರೆ ಜಿಲ್ಲೆಗಳಲ್ಲಿ ಕನ್ನಡವನ್ನು ಯಾವರೀತಿ ಮಾತನಾಡುತ್ತಾರೆ ಮತ್ತು ಅದರಿಂದ ಕೆಲವೊಮ್ಮೆ ಯಾವರೀತಿ ಆಭಾಸಗಳಾಗುತ್ತವೆ ಎನ್ನುವುದನ್ನು ಬಹಳ ಸ್ವಾರಸ್ಯಕರವಾಗಿ ವಿವರಿಸಿದ್ದರು.

# ಒಂದ್ನಿಮಿಷ ಕನ್ನಡ



೨೦೧೫ ನವೆಂಬರ್ ಒಂದನೆಯ ತಾರೀಖು. ಅನಂತಕುಮಾರ್ ಅವರ ಕಚೇರಿಯಲ್ಲಿ ರಾಜ್ಯೋತ್ಸವದ ಆಚರಣೆ ನಡೆದಿತ್ತು. ಮಹಾನಗರ ಪಾಲಿಕೆಯ ಸದಸ್ಯರು, ಪಕ್ಷದ ಕಾರ್ಯಕರ್ತರು, ವಿವಿಧ ಮಂಡಲಗಳ ಅಧ್ಯಕ್ಷರು ಪಾಲ್ಗೊಂಡಿದ್ದ ಈ ಕಾರ್ಯಕ್ರಮದಲ್ಲಿ ಇನ್ನೂ ಹಲವರು ಗಣ್ಯರೂ ಶಿಕ್ಷಕರೂ ಭಾಗವಹಿಸಿದ್ದರು. ಆ ದಿನವೇ ನಾವು ಒಂದು ವಿಶಿಷ್ಟ ಸ್ಪರ್ಧೆಯನ್ನು ಪ್ರಾರಂಭ ಮಾಡಿದೆವು. ಅದೇನೆಂದರೆ, ಪ್ರತಿ ಸ್ಪರ್ಧಿಯೂ ವೇದಿಕೆಗೆ ಬಂದು ನಿಂತು ಒಂದು ನಿಮಿಷ ಶುದ್ಧ ಕನ್ನಡದಲ್ಲಿ ಮಾತನಾಡಬೇಕು.

ಬೇರೆ ಬೇರೆ ವಿಷಯಗಳನ್ನು ನಮೂದಿಸಿದ ಚೀಟಿಗಳನ್ನು ಇಡಲಾಗಿತ್ತು. ಬಂದಿರುವಂತಹ ಪ್ರತಿಯೊಬ್ಬರೂ ಬಂದು ಒಂದೊಂದು ಚೀಟಿಯನ್ನು ಎತ್ತಬೇಕು. ಮಾತಿಗೆ ಮೊದಲು ವಿಷಯದ ಬಗೆಗೆ ಅವರಿಗೆ ಯೋಚನೆ ಮಾಡುವುದಕ್ಕೆ ಒಂದು ನಿಮಿಷ ಸಮಯಾವಕಾಶ. ಒಂದು ನಿಮಿಷ ಯಾವುದೇ ಆಂಗ್ಲ ಪದ ಸೇರಿಸದೆ ಮಾತನಾಡಬೇಕು. ಸ್ಪರ್ಧಿಗೆ ಕೊಡಲಾದ ವಿಷಯದ ಮೇಲಿನ ಪ್ರಭುತ್ವಕ್ಕಿಂತ ವಿಶೇಷವಾಗಿ ಶುದ್ಧವಾಗಿ ಕನ್ನಡವನ್ನು ಮಾತನಾಡುವುದಕ್ಕೇ ಆದ್ಯತೆ ನೀಡಲಾಗಿತ್ತು.

ಈ ಸ್ಪರ್ಧೆ ಎಷ್ಟು ಕುತೂಹಲ, ಆಸಕ್ತಿ ಮೂಡಿಸಿತೆಂದರೆ ಮುಕ್ಕಾಲು ಗಂಟೆಯಲ್ಲಿ ಮುಗಿಯಬೇಕಾದ ಕಾರ್ಯಕ್ರಮ ಎರಡು ಗಂಟೆಗಳ ಕಾಲ ಮುಂದುವರಿಯಿತು.ಅರವತ್ತು-ಎಪ್ಪತ್ತು ಜನ ಮಾತನಾಡಿದರು. ಆದರೆ, ಆ ಎಪ್ಪತ್ತು ಜನರಲ್ಲಿ ಇಬ್ಬರು ಮಾತ್ರ ಶುದ್ಧವಾಗಿ ಮಾತನಾಡಲು ಸಾಧ್ಯವಾಯಿತು.

ಅನಂತ್ ಕುಮಾರ್ ಅವರಿಗೆ ಕನ್ನಡದ ಬಗ್ಗೆ ವಿಶೇಷ ಕಾಳಜಿ ಮತ್ತು ಪ್ರೀತಿ. ಸ್ಪರ್ಧಿಗಳ ಮಾತಿನ ಮಧ್ಯೆ ಅನಂತ್ ಕುಮಾರ್ ಅವರೂ ಕನ್ನಡಪದ ಸೇರಿಸುತ್ತಿದ್ದರು. ಸ್ಪರ್ಧೆಯಲ್ಲಿ ನಿರ್ಣಾಯಕರ ಪಾತ್ರವೇ ಇರಲಿಲ್ಲ. ಸ್ಪರ್ಧಿ ಬಾಯಿತಪ್ಪಿ ಸಾರಿ ಅಂತ ಹೇಳಿದ ತಕ್ಷಣವೇ ಜನರೇ ಅವರನ್ನು 'ಮುಗಿಯಿತು' ಎಂದು ಕೂಗಿ ಕೆಳಗೆ ಇಳಿಸುತ್ತಿದ್ದರು.



ಈ ಕಾರ್ಯಕ್ರಮ ಅದೊಂದು ಬಗೆಯಲ್ಲಿ ಸಂಚಲನ ತಂದಿತು. ಜೊತೆಯಲ್ಲಿ ಬೆಂಗಳೂರಿಗರಿಗೆ ಇನ್ನೊಂದು ಗಂಭೀರವಾಗಿ ಯೋಚನೆ ಮಾಡುವಂತಹ ವಿಷಯವೂ ಸಿಕ್ಕಿತು. ಒಂದು ನಿಮಿಷವೂ ನಮಗೆ ಕನ್ನಡ ಮಾತನಾಡುವುದಕ್ಕೆ ಆಗುತ್ತಿಲ್ಲವಲ್ಲ ಎನ್ನುವುದೊಂದು ಚಿಂತನೆ ಪ್ರಾರಂಭವಾಯಿತು.


ಈ ಕಾರ್ಯಕ್ರಮದ ಯಶಸ್ಸು ನಮಗೆ ಹುರುಪು ತಂದಿತು. ನಾಡಿನೆಲ್ಲೆಡೆ ಈ ಸ್ಪರ್ಧೆ ಏರ್ಪಡಿಸತೊಡಗಿದೆವು. ಶಾಲಾವಿದ್ಯಾರ್ಥಿಗಳಿಗೆ ,ಶಿಕ್ಷಕರಿಗೆ ಸಾರ್ವಜನಿಕರಿಗೆ , ಉದ್ಯಾನವನಕ್ಕೆ ವಿಹಾರಕ್ಕಾಗಿ ಬರುವವರಿಗೆ ಹೀಗೆ.. ಎಲ್ಲೆಡೆ ಹೋಗಿ ಸ್ಪರ್ಧೆ ಮಾಡುತ್ತಿದ್ದೆವು. ಯಾವಾಗ ಅನಂತ್ ಕುಮಾರ್ ಜೊತೆಗೆ ಇರುತ್ತಿದ್ದರೋ ಆಗ ಹದಿನೈದು- ಇಪ್ಪತ್ತು ನಿಮಿಷ ಅವರೇ ಸ್ಪರ್ಧೆ ನಡೆಸುತ್ತಿದ್ದರು. ಕೆಲವೊಮ್ಮೆ ಅವರೇ ವಿಷಯಗಳನ್ನು ನೀಡುತ್ತಿದ್ದರು. ಬಹಳ ವಿಶೇಷವಾದ ವಿಷಯಗಳನ್ನು ಚೀಟಿಯಲ್ಲಿ ಬರೆದು ಹಾಕುತ್ತಿದ್ದರು. ಸಂಚಾರಿ ದೂರವಾಣಿಗೆ ಜಂಗಮ ದೂರವಾಣಿ ಎನ್ನುವ ಹೆಸರಿಡಿ ಎಂದು ಹೇಳುತ್ತಿದ್ದರು. ಈ ರೀತಿ ಬಹಳ ಉತ್ಸಾಹವನ್ನು, ಸಂತೋಷವನ್ನು ತರುತ್ತಾ ನಮ್ಮ ಭಾಷೆಗೆ ಆದ್ಯತೆ ನೀಡುವಂತಹ ಕಾರ್ಯಕ್ರಮ ಸಾವಿರಾರು ಜನರಿಗೆ ನೂರಾರು ಸ್ಥಳಗಳಲ್ಲಿ ಈ ಸ್ಪರ್ಧೆ ಆಯೋಜನೆ ಮಾಡಿದೆವು. ಒಂದು ನಿಮಿಷ ಕನ್ನಡ ಎನ್ನುವಂತಹ ಸ್ಪರ್ಧೆ ಅನಂತ್ ಕುಮಾರ್ ಅವರ ಬಹಳ ಪ್ರೀತಿಯ ಕಾರ್ಯಕ್ರಮ . ಬೆಂಗಳೂರಿನಲ್ಲಿ ಮಾತ್ರವಲ್ಲ ರಾಜ್ಯಾದ್ಯಂತ ಮನೆ ಮಾತಾಗಿತ್ತು.

**- ತೇಜಸ್ವಿನಿ ಅನಂತಕುಮಾರ್**

# ಫೋನ್ ಇಡಂತ ಹೇಳು ಅವನಿಗೆ!

೧೯೯೮. ಅನಂತಕುಮಾರ್ ಕೇಂದ್ರದಲ್ಲಿ ಮಂತ್ರಿಯಾಗಿ ನೇಮಕಗೊಂಡ ಸಂದರ್ಭ. ಕುಂದಗೋಳದ ಪಾಳಂದೆ ಮನೆಯವರಿಗೆಲ್ಲ ಹಿಡಿಸಲಾರದಷ್ಟು ಹಿಗ್ಗು. ರಾಷ್ಟ್ರೀಯ ಸ್ವಯಂಸೇವಕಸಂಘದ ವಿಸ್ತಾರಕನಾಗಿ ಕುಂದಗೋಳಕ್ಕೆ ಬರುತ್ತಿದ್ದ ಯುವಕನೊಬ್ಬ ಹೀಗೆ ರಾಷ್ಟ್ರೀಯಮಟ್ಟದಲ್ಲಿ ಯಶಸ್ಸಿನ ಸೋಪಾನವೇರಿದ್ದು ಸಾಮಾನ್ಯ ವಿಷಯವಲ್ಲ. ಅಶೋಕ ಪಾಳಂದೆಯ ಪರಿಚಯದ ವಲಯದಲ್ಲಿ ಯಾರಾದರೊಬ್ಬರು ತಾಲೂಕುಮಟ್ಟದಲ್ಲೋ ಜಿಲ್ಲಾಮಟ್ಟದಲ್ಲೋ ಆಯ್ಕೆಯಾಗಿ ಹೋದದ್ದೇ ಈವರೆಗಿನ ಸಾಧನೆ ಎನ್ನಬಹುದಾಗಿತ್ತು. ಹೀಗಿರುವಲ್ಲಿ ಅನಂತಕುಮಾರ್ ಏರಿದ ಎತ್ತರವನ್ನು ಕಂಡು ಅವರಿಗೆಲ್ಲ ಸಂತಸ, ಬೆರಗು, ಹೆಮ್ಮೆ.

ಈಗ ಎಲ್ಲೋ ದೂರದ ದಿಲ್ಲಿಯಲ್ಲಿರುವ ಅನಂತಕುಮಾರರನ್ನು ಕಂಡು ಮಾತನಾಡಿಸುವುದಂತೂ ಸಾಧ್ಯವಾಗದ ವಿಷಯ. ಅವರನ್ನು ಅಭಿನಂದಿಸುವ ಒಂದು ಗ್ರೀಟಿಂಗ್ ಆದರೂ ಕಳಿಸೋಣವೆಂದು ಅಶೋಕ ಯೋಚಿಸಿದರು.. ಆದರೆ, ಈ ಗ್ರೀಟಿಂಗ್ ಅವರಿಗೆ ಮುಟ್ಟುವುದು ಯಾವಾಗ? ತನ್ನಂತೆಯೇ ಅದೆಷ್ಟು ಜನ ಕಳಿಸಿರಬಹುದು? ಅವೆಲ್ಲದರ ನಡುವೆ ಕುಂದಗೋಳದ ಪಾಳಂದೆ ಕಳುಹಿಸಿದ ಶುಭಾಶಯಪತ್ರವೊಂದು ಅವರ ಗಮನ ಸೆಳೆಯುವುದಾದರೂ ಹೇಗೆ? ಎಂಬ ಪ್ರಶ್ನೆಗಳೆದ್ದು ಅಶೋಕನ ಉತ್ಸಾಹಕ್ಕೆ ಭಂಗತಂದವು. ಅದಕ್ಕಿಂತ ದೂರವಾಣಿಯಲ್ಲಿ ಮಾತನಾಡಿಸಿ ನೇರವಾಗಿ ಶುಭಾಶಯ ಹೇಳುವುದೇ ಮೇಲು ಎಂದು ತೋರಿತು.




ಆಗೆಲ್ಲ ಹಗಲುಹೊತ್ತಿನಲ್ಲಿ ಎಲ್ಲಿಗಾದರೂ ಫೋನ್ ಮಾಡುವುದೆಂದರೆ ಶುಲ್ಕ ಹೆಚ್ಚು. ದಿಲ್ಲಿಯಂಥ ದೂರದ ಊರಿಗೆ ಇನ್ನಷ್ಟು ಹೆಚ್ಚು. ದೂರವಾಣಿ ಕರೆಗಾಗಿ ಹೆಚ್ಚು ಹಣ ವ್ಯಯಮಾಡುವಷ್ಟು ಪಾಳಂದೆ ಕುಟುಂಬ ಆರ್ಥಿಕವಾಗಿ ಸಮರ್ಥವಾಗಿರಲಿಲ್ಲ. ಅದೇನೂ ಅಶೋಕನ ಉತ್ಸಾಹವನ್ನು ಕುಂದಿಸಲಿಲ್ಲ. ನಮ್ಮ ಮನೆಯ ಹುಡುಗನಂತೆ ಪ್ರೀತಿ ತೋರುವ ಅನಂತಕುಮಾರ ಮಂತ್ರಿಯಾದ ಸಂತೋಷದೆದುರಿಗೆ ಹತ್ತಾರು ರೂಪಾಯಿ ಖರ್ಚಿನ ಲೆಕ್ಕ ಹಾಕುವುದೇ? ಹೇಗೂ ಆ ಹೊತ್ತಿಗೆ ಮನೆಯಲ್ಲಿದ್ದವರು ಅಶೋಕ ಒಬ್ಬರೇ. ಮನೆಮಂದಿಯೆಲ್ಲ ಶುಭಾಶಯ ಹೇಳಲು ಸಾಲುಗಟ್ಟಿ ನಿಂತರೆ ದೂರವಾಣಿಯ ನಿಮಿಷ, ಸೆಕೆಂಡು ಲೆಕ್ಕ ಹಾಕಬೇಕಿತ್ತೇನೋ. ಆದರೆ, ಒಬ್ಬನ ಮಾತು ಎಷ್ಟು ಹೊತ್ತು ಹಿಡಿದೀತು? ಹೆಚ್ಚು ಮಾತನಾಡುವಷ್ಟು ಮಂತ್ರಿಗಳಿಗೆ ಸಮಯಾವಕಾಶ ಇರಬೇಕಲ್ಲ! ಅದೆಲ್ಲ ಒತ್ತಟ್ಟಿಗಿರಲಿ. ಸಂಭ್ರಮದ ಕ್ಷಣದಲ್ಲಿ ಅಭಿನಂದನೆ ಹೇಳದಿದ್ದರೆ ಹೇಗೆ? ಸಂಪರ್ಕ ಸಿಗುವುದೋ ಇಲ್ಲವೋ ಎಂಬ ಸಂಶಯದಲ್ಲೇ ಅಶೋಕ ಪಾಳಂದೆ ಅನಂತಕುಮಾರರ ದೂರವಾಣಿಸಂಖ್ಯೆಗೆ ಕರೆಮಾಡಿದರು. ಸಂಪರ್ಕ ಸಿಕ್ಕಿಯೇ ಬಿಟ್ಟಿತು.

ಅತ್ತಣಿಂದ ಕರೆ ಸ್ವೀಕರಿಸಿದವರು ಯಾರೋ ಸಿಬ್ಬಂದಿ. ಯಾರು ಏನು ವಿಚಾರಿಸಿದರು. ಕುಂದಗೋಳದಿಂದ ತಾನು ಅಶೋಕ ಪಾಳಂದೆ, ಅನಂತಕುಮಾರರ ಸ್ನೇಹಿತ, ಅವರಿಗೆ ಅಭಿನಂದನೆ ಹೇಳೋಣವೆಂದು ಕರೆ ಮಾಡಿರುವುದಾಗಿ ವಿವರಣೆ ಕೊಟ್ಟಿದ್ದಾಯಿತು. ಒಂದು ನಿಮಿಷ ಸಂಪರ್ಕದಲ್ಲೇ ಇರುವಂತೆ ಹೇಳಿದ ಆ ವ್ಯಕ್ತಿ ಮಂತ್ರಿಗಳಿಗೆ ಫೋನ್ ಕೊಡಲು ಮುಂದಾದರು. ಯಾರದ್ದು ಫೋನ್ ಎಂಬ ಅನಂತಕುಮಾರರ ಧ್ವನಿ ಕೇಳಿಸಿತು. ಅವರಿಗೆ ಅಭಿನಂದನೆ ಹೇಳಲು ಪದಗಳನ್ನು ಜೋಡಿಸಿಕೊಳ್ಳಲು ಅಶೋಕ ಯತ್ನಿಸುತ್ತಿರುವಂತೆಯೇ ಅತ್ತಣಿಂದ ಅನಂತಕುಮಾರರ ಧ್ವನಿ ಕೇಳಿತು: ಫೋನ್ ಇಡಂತ ಹೇಳು ಅವನಿಗೆ!

ಅಶೋಕ ಪಾಳಂದೆಯ ಉತ್ಸಾಹವೆಲ್ಲ ಜರ್ರನೆ ಇಳಿದುಹೋಯಿತು ಇಳಿದುಹೋಯಿತು. ಫೋನ್ ಇಡಂತ ಹೇಳು ಅವನಿಗೆ! ಕೆನ್ನೆಗೆ ಬಲವಾಗಿ ಬಾರಿಸಿದಂತಾಯಿತು. ಕಣ್ಣಿನಲ್ಲಿ ನೀರು ತುಂಬಿ ಬಳಬಳನೆ ಸುರಿಯಿತು. ಎಷ್ಟೆಲ್ಲ ಅಭಿಮಾನ, ಉತ್ಸಾಹದಲ್ಲಿ ಕರೆ ಮಾಡಿದ್ದೆ! ಅದಕ್ಕೆ ಬಂದ ಪ್ರತಿಕ್ರಿಯೆಯಾದರೂ ಏನು? ಎಂಥ ತಿರಸ್ಕಾರದ ಮಾತು! ಏನೂ ಹೇಳದೆ ಸುಮ್ಮನೆ ಫೋನ್ ಕಟ್ ಮಾಡಿದ್ದರೂ ನೋವಾಗುತ್ತಿರಲಿಲ್ಲ.. ಹೀಗೆ.. ಈ ನೋವನ್ನು ಹೇಳಿಕೊಳ್ಳಲು ಮನೆಯಲ್ಲಿ ಯಾರೂ ಇಲ್ಲವಲ್ಲ ಎಂಬ ಕಸಿವಿಸಿ, ದುಃಖವನ್ನು ಹೆಚ್ಚಿಸಿತು. ಅಷ್ಟರಲ್ಲೇ ಫೋನ್ ರಿಂಗಣಿಸಿದ ಸದ್ದಾಯಿತು.

ಅಶೋಕ ಸಾವರಿಸಿಕೊಂಡು ಫೋನ್ ಎತ್ತಿಕೊಂಡರು. ಹಲೋ ಎಂದು ಕ್ಷೀಣವಾಗಿ ಕೇಳುತ್ತಿರುವಂತೆ ಅತ್ತಣಿಂದ ಧ್ವನಿಯೊಂದು ಸಾಹೇಬರು ಮಾತನಾಡುತ್ತಾರೆ ಎಂದಿತು. ಯಾವ ಸಾಹೇಬರು ಏನು ಎಂದು ಕೇಳಲು ಆಸ್ಪದವಾಗಲಿಲ್ಲ. ಮರುಕ್ಷಣದಲ್ಲಿ ಅನಂತಕುಮಾರರ ಧ್ವನಿ ಕೇಳಿಬಂದಿತು. ಪಾಳಂದೆ, ಈಗ ಮಾತಾಡೋಣ. ನೀ ಏನ್ ಕಡಿಮಿ ಮಾತಾಡಂವ ಅಂತೂ ಅಲ್ಲ, ಹೌದಲ್ಲ, ಆಗ ನೀನು ಫೋನ್ ಮಾಡಿದ್ದೀ. ಹಗಲು ಹೊತ್ತು ಬ್ಯಾರೆ, ರೇಟ್ ಭಾಳ ಆಗ್ತವ, ಅದಕ ಕಟ್ ಮಾಡಂತ ಹೇಳಿ ಈಗ ನಾನ ಮಾಡೀನಿ. ಈಗ ಎಷ್ಟ್ ಬೇಕಾರ ಮಾತಾಡೋಣು. ಬಿಲ್ ನನಗ ಬರತವ ಬರಲಿ ಬಿಡು...

ಅಶೋಕ ಪಾಳಂದೆಯ ಗಂಟಲು ಮತ್ತೆ ಕಟ್ಟಿತು. ಕೇಂದ್ರದಲ್ಲಿ ಮಂತ್ರಿಯಾಗಿ ಹೋದ ಗೆಳೆಯ ತನಗೆ ಫೋನ್ ಬಿಲ್ಲು ಹೊರೆಯಾಗಬಾರದೆಂದು ಕಾಳಜಿಪಟ್ಟುಕೊಂಡು ಫೋನ್ ಕಟ್ ಮಾಡಿದುದನ್ನು ತಾನು ಕೆಟ್ಟದಾಗಿ ಎಣಿಸಿದೆನಲ್ಲ ಎಂದು ದುಃಖ ಹೊಸದಾಗಿ ಉಮ್ಮಳಿಸಿತು. ಕಣ್ಣೀರಿನ ಕಾರಣ ತಿಳಿಯಲು ಮನೆಯಲ್ಲಿ ಆಗಲೂ ಯಾರೂ ಇರಲಿಲ್ಲ. ಅತ್ತ ಕುಂದಗೋಳದ ಆತ್ಮೀಯ ಕುಟುಂಬದವರ ಕ್ಷೇಮವಿಚಾರಣೆ ಮುಂದುವರಿಸಿದ ಕೇಂದ್ರಮಂತ್ರಿಗಳಿಗೆ ಬಡಗೆಳೆಯನ ಉಮ್ಮಳ ಗೋಚರವಾಗುವಂತಿರಲಿಲ್ಲ .

## ಅನಂತ ನಮನ



**ಜಸ್ಟಿಸ್ ಎನ್. ಕುಮಾರ್**
ನಿವೃತ್ತ ನ್ಯಾಯಮೂರ್ತಿಗಳು

ನನಗೂ ನಮ್ಮ ಅನಂತಕುಮಾರ್ ಅವರಿಗೂ ಸಂಬಂಧವೇನೆಂದರೆ ನಾನು ಅವರ ಒಬ್ಬ ನಿಷ್ಠಾವಂತ ಮತದಾರ. ಹಿಂದಿನ ಆರೂ ಚುನಾವಣೆಗಳಲ್ಲಿ ನನ್ನ ಮತವನ್ನು ಅವರಿಗೆ ಚಲಾಯಿಸಿದ್ದೇನೆ , ಒಬ್ಬ ಯೋಗ್ಯವ್ಯಕ್ತಿಗೆ ನನ್ನ ಮತವನ್ನು ಕೊಟ್ಟಿದ್ದೇನೆ ಎನ್ನುವುದು ನನಗೆ ಸಂತಸ ತರುವ ವಿಷಯ. ನಾವು ಕೊಟ್ಟ ಮತವನ್ನು ಅವರು ಎಂದು ದುರುಪಯೋಗಪಡಿಸಿಕೊಳ್ಳಲಿಲ್ಲ. ಒಬ್ಬ ಧೀಮಂತನಾಯಕನಾಗಿ ಜನರ ಪರವಾಗಿ ರಾಜ್ಯದ ಪರವಾಗಿ ಅವರ ಹಿತವನ್ನು ಕಾಯುವಲ್ಲಿ ಬಹಳ ಶ್ರಮಪಟ್ಟಿದ್ದಾರೆ ಅದಕ್ಕಾಗಿ ಅವರ ಬಗ್ಗೆ ನನಗೆ ಗೌರವ.

ಅದಮ್ಯಚೇತನದ ಮುಖಾಂತರ ಅನ್ನ ಅಕ್ಷರ ಆರೋಗ್ಯದ ಬಗ್ಗೆ ಅವರು ಮಾಡಿದ ಕೆಲಸ ಸರ್ವರಿಗೂ ತಿಳಿದಿರುವುದೇ. ಅಷ್ಟೇ ಅಲ್ಲ ಅವರು ಹೋದ ಮೇಲೂ ಸಹ ಆ ಕಾರ್ಯಕ್ರಮಗಳನ್ನು ಅವರು ಶ್ರೀಮತಿಯವರು ನಡೆಸಿಕೊಂಡು ಹೋಗುತ್ತಾ ಇದ್ದಾರೆ ಅದು ಬಹಳ ಸಂತೋಷದ ವಿಚಾರ.

ಅವರು ಬೆಂಗಳೂರಿನಲ್ಲಿ ಇದ್ದ ವೇಳೆ ಅವರೂ ನಾನೂ ಲಾಲ್‌ಬಾಗಿಗೆ ಹೋಗುತ್ತಿದ್ದೆವು. ಬೆಳಿಗ್ಗೆ ನಾನು ಅರ್ಧಗಂಟೆಯಲ್ಲಿ ಇಡೀ ಲಾಲ್‌ಬಾಗ್ ಸುತ್ತು ಹಾಕಿದ್ದರೆ ಅವರು ಅರ್ಧಗಂಟೆಯಾದರೂ ಮೂರು ಅಡಿ ಹೋಗುತ್ತಿರಲಿಲ್ಲ ; ಅಷ್ಟೊಂದು ಜನ ಅಲ್ಲಿ ಅಡ್ಡ ಇರುವವರು.

ಸಸ್ಯಾಗ್ರಹ ಎಂಬ ಕಾರ್ಯಕ್ರಮ ಶುರುಮಾಡಿ. ಹೊಸದಾಗಿ ಸಸ್ಯಾಗ್ರಹ ಅಂತ ಹೇಳಿ ಶುರುಮಾಡಿ ಬೆಂಗಳೂರನ್ನೇ ಒಂದು ಹಸಿರಿನ ವನವಾಗಿ ಮಾರ್ಪಡಿಸುವಂತಹ ಕಾರ್ಯಕ್ಕೆ ಚಾಲನೆ ತಂದರು. ಮುಂದೆ ಅವರ ಶ್ರೀಮತಿಯವರೂ ಈ ಆಂದೋಲನವನ್ನು ಮುಂದುವರೆಸಿಕೊಂಡು ಹೋಗುತ್ತ ಇದ್ದಾರೆ.

ಈಗ ಅನಂತಕುಮಾರ್ ಪ್ರತಿಷ್ಠಾನ ಪ್ರಾರಂಭವಾಗಿದೆ. ನಮ್ಮ ದೇಶದಲ್ಲಿ ಬಹಳ ಬುದ್ಧಿವಂತ ಜನ ಇದ್ದಾರೆ ನಿಯತ್ತಿನ ಜನ ಇದ್ದಾರೆ ಆದರೆ ಒಳ್ಳೆಯ ಜನನಾಯಕರು ಇಲ್ಲ ಇದು ಕಟುಸತ್ಯ. ಇವತ್ತು ನಾಯಕರು ಇದ್ದಾರೆ ಜಾತಿ ನಾಯಕರು ಇದ್ದಾರೆ ಪಾರ್ಟಿ ನಾಯಕರು ಇದ್ದಾರೆ ಆದರೆ, ರಾಷ್ಟ್ರನಾಯಕರಾಗಿ ಇಡೀ ಜನಾಂಗವನ್ನು ಪ್ರತಿನಿಧಿಸುವಂಥ ನಾಯಕರ ಕೊರತೆ ಕಂಡುಬರುತ್ತ ಇದೆ. ಅದನ್ನು ಲಕ್ಷ್ಯದಲ್ಲಿರಿಸಿಕೊಂಡು ಇವತ್ತು ಅವರ ಹೆಸರಿನಲ್ಲಿ ಈ ಒಂದು ಅನಂತಕುಮಾರ್ ಪ್ರತಿಷ್ಠಾನದ ಮುಖಾಂತರ ಮುಂದಿನ ಪೀಳಿಗೆಯಲ್ಲಿ ಆರೋಗ್ಯವಂತ ಜವಾಬ್ದಾರಿಯುತ ಹಾಗೂ ದೇಶವನ್ನು ಕಟ್ಟತಕ್ಕಂತಹ ನಾಯಕರನ್ನು ರೂಪಿಸಬಲ್ಲ ಕಾರ್ಯಕ್ರಮ ನಡೆಯಲಿದೆ. ಈ ದಿಶೆಯಲ್ಲಿ ಆ ಸಂಸ್ಥೆಗೆ ಏನೂ ಬೇಕೋ ಅವೆಲ್ಲ ಸಹಾಯವನ್ನು ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆ.

## ಸಿ.ಟಿ.ರವಿ, ಭಾಜಪಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಪುಟ 1 ರಿಂದ

ಒಮ್ಮೆ ನನ್ನೊಡನೆ ಹಿತನುಡಿಯುವಾಗ, ಜೀವನ ಒಂದು ಕತ್ತೆ ಚೆನ್ನಾಗಿ ದುಡಿಸಿಕೋ ಎಂದು ಹೇಳಿದ್ದರು. ನಿಷ್ಠೆಯ ಪ್ರಶ್ನೆ ಬಂದಾಗ ಅದು ಅವಶ್ಯಕತೆಯಲ್ಲ, ಜೀವನದ ಜೀವಾಳ. ಎಲ್ಲದಕ್ಕಿಂತ ಶ್ರೇಷ್ಟವಾದದ್ದು ರಾಷ್ಟ್ರನಿಷ್ಠೆ. ವ್ಯಕ್ತಿನಿಷ್ಠೆ, ಪಕ್ಷನಿಷ್ಠೆಯನ್ನು ಮೀರಿದ್ದು ರಾಷ್ಟ್ರನಿಷ್ಠೆ ಎನ್ನುವಂತಹ ಭಾವನೆಯನ್ನು ಬಿಂಬಿಸಿದವರು ಅನಂತ್‌ಕುಮಾರ್. ಅವರಿಗೆ ಪ್ರೇರಣೆಯಾಗಿದ್ದವರು ಅವರ ತಾಯಿ ಗಿರಿಜಾಶಾಸ್ತ್ರಿ. ಹೋರಾಟದ ಕಿಚ್ಚನ್ನು ಆ ತಾಯಿ ಅನಂತ್‌ರವರ ಆಂತರ್ಯದಲ್ಲಿ ತುಂಬಿಸಿದ್ದರು.ಅವರ ನೆನಪಲ್ಲಿ ಅದಮ್ಯಚೇತನ ಆರಂಭಗೊಂಡಿತು. ಅನ್ನ, ಅಕ್ಷರ, ಆರೋಗ್ಯ ಆ ಮೂರು ಅಂಶಗಳನ್ನು ಮುಂದಿಟ್ಟು ಅದಮ್ಯ ಚೇತನ ಕೆಲಸ ಮಾಡುತ್ತಾ ಬಂದಿದೆ. ಅಷ್ಟು ಮಾತ್ರವಲ್ಲದೆ ಬೆಂಗಳೂರನ್ನು ಹಸಿರುಗೊಳಿಸಬೇಕೆಂದು ಪ್ರತಿ ವಾರಕ್ಕೊಮ್ಮೆ ಹಸಿರು ಭಾನುವಾರ ಎನ್ನುವಂತಹ ಕಾರ್ಯಕ್ರಮವನ್ನು ಪ್ರಾರಂಭಿಸಿ ಗಿಡ ನೆಡುವಂತಹ ಕೆಲಸವನ್ನು ಆರಂಭಿಸಿದರು ಅನಂತ್ ಕುಮಾರ್.

ಯುವಕರಿಗೆ ಪ್ರೇರಣಾದಾಯಿಯಾಗಿದ್ದ ಅನಂತ್‌ಕುಮಾರ್ ಅವರ ನೆನಪು ಶಾಶ್ವತವಾಗಿಡುವುದಕ್ಕೆ ಯುವಕರಿಗೆ ನಾಯಕತ್ವದ ತರಬೇತಿ ನೀಡಲು ಅನಂತ್‌ಕುಮಾರ್ ಪ್ರತಿಷ್ಠಾನ ಆರಂಭಗೊಂಡಿದೆ.ಅನಂತ್‌ಕುಮಾರ್ ಪ್ರತಿಷ್ಠಾನಕ್ಕೆ ಕರ್ನಾಟಕಸರ್ಕಾರ ೨೦ ಕೋಟಿರೂಗಳನ್ನು ವರ್ಷದ ಬಜೆಟ್‌ನಲ್ಲಿ ಇಟ್ಟಿದೆ. ಏಕೆಂದರೆ ಅವರ ಹೆಸರು ಶಾಶ್ವತವಾಗಿ ಉಳಿಯಬೇಕು.ಅವರ ಸಮಾಜಮುಖಿ ಕೆಲಸ ಶಾಶ್ವತವಾಗಿ ಬೆಳೆಯಬೇಕು ಅನಂತ್ ಕುಮಾರ್ ಪ್ರತಿಷ್ಠಾನ ಈ ನಿಟ್ಟಿನಲ್ಲಿ ಯುವಕರಿಗೆ ನಾಯಕತ್ವದ ತರಬೇತಿ ಕೊಡುತ್ತಿದೆ.. ಸಾಮಾಜಿಕ ಚಿಂತನೆಯನ್ನು,ಅವರು ಸಮಾಜಮುಖಿಯಾಗುವುದನ್ನು ಹೇಳಿಕೊಡುತ್ತಿದೆ.ಪರಿಸರದ ಬಗ್ಗೆ ಕಾಳಜಿಯನ್ನಿಟ್ಟುಕೊಂಡು ಕೆಲಸ ಮಾಡುವುದನ್ನು ಹೇಳಿಕೊಡುತ್ತಿದೆ. ಹೀಗಾಗಿ ಅನಂತ್‌ಕುಮಾರ್ ಪ್ರತಿಷ್ಠಾನಕ್ಕೆ ಸರ್ಕಾರ ನೀಡಿರುವ ಪ್ರತಿಯೊಂದು ಪೈಸೆಯೂ ಸದ್ವಿನಿಯೋಗವಾಗುತ್ತದೆ ಎನ್ನುವ ನಂಬಿಕೆ ನಮಗಿದೆ. ಧನ್ಯವಾದಗಳು.

## ಶ್ರೀ ದೊಡ್ಡರಂಗೇಗೌಡ, ಖ್ಯಾತ ಕವಿಗಳು



ಅನಂತಕುಮಾರ್ ಅವರನ್ನು ಕುರಿತು ಮಾತಾಡುವುದಕ್ಕೆ ಅನಂತಾನಂತ ವಿಷಯಗಳು ಇವೆ. ಅವರು ಎಷ್ಟರಮಟ್ಟಿಗೆ ಸಮಾಜಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡರು , ತಮ್ಮಲ್ಲಿ ಇರತಕ್ಕಂಥ ಪ್ರತಿಭೆಯನ್ನು ಈ ರಾಷ್ಟ್ರಕ್ಕೆ ಧಾರೆಯೆರೆದರು ಎಂಬುದು ಸರ್ವವಿದಿತ. ಒಂದು ಅದಮ್ಯಚೇತನ ಸಂಸ್ಥೆ ಸಾಕು, ಅವರ ಹೆಸರನ್ನು, ಮತ್ತು ತೇಜಸ್ವಿನಿ ಅನಂತಕುಮಾರ್ ಅವರ ಹೆಸರನ್ನು ಉಳಿಸುವುದಕ್ಕೆ. ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ಊಟ ಹಾಕುವಂಥ ಒಂದು ಯೋಜನೆ ಇದೆಯೆಲ್ಲ , ಪೌಷ್ಠಿಕ ಆಹಾರವನ್ನು ಒದಗಿಸುವಂತಹ ಒಂದು ಪರಿಕಲ್ಪನೆ ಇದೆಯೆಲ್ಲ ಅದು ಬಹಳ ದೊಡ್ಡದು. ಪ್ರತಿಭಾನುವಾರ ಎಲ್ಲ ಯುವ ಚೇತನಗಳನ್ನ ಒಗ್ಗೂಡಿಸಿ ಆ ಸಮುದಾಯಶಕ್ತಿಯನ್ನು ವೃಕ್ಷಸಂಪತ್ತನ್ನು ಬೆಳೆಸುವುದಕ್ಕಾಗಿ ಅವರು ಕಾರಣೀಭೂತರಾದರು.

ಕೇಂದ್ರ ಸರ್ಕಾರದಲ್ಲಿ ಅವರು ಉನ್ನತವಾದಂಥ ಸ್ಥಾನಕ್ಕೆ ಏರುವುದಕ್ಕೆ ನಿಜವಾಗಿಯೂ ಅವರು ಅರ್ಹರಾಗಿದ್ದರು ಅದಕ್ಕೆ ಬೇಕಾದಂಥ ಎಲ್ಲ ಪ್ರಶಿಕ್ಷಣವನ್ನು ಪಡೆದುಕೊಂಡಿದ್ದರು. ರಾಜಕೀಯ ಜ್ಞಾನ ಗೊತ್ತಿತ್ತು ; ಒಳ್ಳೆ ಮುತ್ಸದ್ದಿಯಾಗಿದ್ದರು. ಅವರಿಗೆ ಅಟಲ್ ಬಿಹಾರಿ ವಾಜಪೇಯಿಯಂಥವರು ಬಹಳ ದೊಡ್ಡ ಆದರ್ಶ. ನರೇಂದ್ರ ಮೋದಿಯವರಂತಹ ಪ್ರಧಾನಿಗೆ ಎಲ್ಲ ರೀತಿಯಲ್ಲಿ ನೆರವಾಗುವಂಥ ಕೈಂಕರ್ಯವನ್ನು ಅವರು ಕಲಿತಿದ್ದರು. ಬೆಂಗಳೂರು, ಕರ್ನಾಟಕ, ಏಕೆ ಇಡೀ ದಕ್ಷಿಣವಲಯವೇ ಅನಂತಕುಮಾರ್ ಅವರ ಒಳ್ಳೆಯ ಕಾರ್ಯಗಳನ್ನು ಪ್ರತಿ ಗಳಿಗೆಯೂ ನೆನೆಸುವ ಹಾಗೇ ಮಾಡಿದೆ. ಅಂಥವರ ಸಂಸ್ಕರಣೆ ಇದೆಯೆಲ್ಲ ಅದು ಶುಭದಾಯಕ ಚೇತನದಾಯಕ ಅದು ನಮ್ಮೆಲ್ಲರಿಗೆ ನಿತ್ಯ ಸ್ಫೂರ್ತಿ.

## ಡಾಕ್ಟರ್ ಶ್ರೀನಾಥ್, ಖ್ಯಾತ ವೈದ್ಯರು



ಈ ದಿನ ನಾವೆಲ್ಲರೂ ಶ್ರೀ.ಅನಂತಕುಮಾರ್ ಅವರ ೬೧ನೇ ಹುಟ್ಟುಹಬ್ಬದ ದಿನದ ನೆನಪನ್ನು ಮಾಡಿಕೊಳ್ಳುತ್ತ ಇದ್ದೇವೆ. ಅನಂತಕುಮಾರ್ ಅವರನ್ನು ನಾನು ೧೯೯೩ರಿಂದಲೂ ಬಲ್ಲೆ. ಆಗಿನ್ನೂ ಅವರು ಯುವಕರಾಗಿದ್ದರು. ಅವರ ತಂದೆಯವರ ಆರೋಗ್ಯದ ವಿಷಯಕ್ಕಾಗಿ ನನ್ನ ಹತ್ತಿರ ಬಂದಿದ್ದರು. ಆಗಿನಿಂದ ಅವರ ಅಂತ್ಯದವರೆಗೆ ನಾನು ಅವರನ್ನ ಹತ್ತಿರದಿಂದಲೇ ನೋಡಿದ್ದೇನೆ.

ಮುಖ್ಯವಾಗಿ ಅನಂತಕುಮಾರರಂತಹ ದಣಿವು ಕಾಣದ ಅವಿರತ ದುಡಿಮೆಗಾರ ಕಾಣಸಿಗುವುದು ದುರ್ಲಭ. ಎಂದೂ ಅವರು ಕೆಲಸದಲ್ಲಿ ನನಗೆ ಸುಸ್ತಾಗಿದೆ ಅಂತ ಹೇಳಿದ್ದ ದಿನವಿಲ್ಲ , ಸತತವಾಗಿ ದಿನವೆಲ್ಲ ಕೆಲಸ ಮಾಡಿದರೂ ಕೊನೆಯಲ್ಲಿ ನಗುನಗುತ್ತಲೇ ಇರುತ್ತಿದ್ದರು. ಅವರು ಬಹು ದೂರದೃಷ್ಟಿತ್ವವುಳ್ಳ ವ್ಯಕ್ತಿ. ತಮ್ಮ ಕಾರ್ಯವಲಯದಲ್ಲಿ ಅವರು ಆಯ್ಕೆ ಮಾಡಿಕೊಂಡ ಕಾರ್ಯಗಳೇ ಸಮಾಜಕ್ಕೆ ದೀರ್ಘಕಾಲೀನ ಪ್ರಯೋಜನಕ್ಕೆ ಒದಗುವಂಥವು. ಅನ್ನ ಅಕ್ಷರ ಆರೋಗ್ಯ ಎಂಬುದು ಅವರಿಗೆ ಪ್ರಿಯವಾದ ಸೂತ್ರ. ಪರಿಸರದ ಬಗ್ಗೆ ಅವರ ಕಾಳಜಿ ಎಲ್ಲರಿಗೂ ಗೊತ್ತಿರತಕ್ಕಂಥದ್ದು. ಕೃಷಿಕ್ಷೇತ್ರಕ್ಕೂ ಅವರ ಕೊಡುಗೆ ಅಪಾರ. ಕೊನೆಕೊನೆಯಲ್ಲಿ ದೇಶದ ಆರೋಗ್ಯಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆ ಗಮನಾರ್ಹ. ಔಷಧಗಳ ಬೆಲೆನಿಯಂತ್ರಣವಾಗಲಿ,ಚಿಕಿತ್ಸಾ ಉಪಕರಣಗಳ ಸೌಭ್ಯವಾಗಲಿ, ಆರೋಗ್ಯಕ್ಷೇತ್ರಕ್ಕೆ ಸಂಬಂಧಿಸಿದ ಹಲವು ನಿರ್ವಹಣಾವ್ಯವಸ್ಥೆಗಳನ್ನು ರಾಷ್ಟ್ರೀಯಮಟ್ಟದಲ್ಲೂ ವಿವಿಧ ಖಾಸಗಿ ಆಸ್ಪತ್ರೆಗಳ ಹಂತದಲ್ಲೂ ಅತ್ಯಂತ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳೊಡನೆ ಅನಂತಕುಮಾರ್ ರೂಪಿಸಿಕೊಟ್ಟಿದ್ದನ್ನು ಮರೆಯಲಾಗದು.

ಅವರ ಉಜ್ವಲ ಜೀವನವು ಹೀಗೆ ಕೊನೆಗೊಳ್ಳುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಅವರ ಚಿಂತನೆಗಳು, ಕಾರ್ಯೋಪಾಯಗಳು, ಅವರು ಪ್ರಾರಂಭಿಸಿದ್ದ ಕೆಲವು ಕೆಲಸಗಳು ಇನ್ನೂ ಕೈಗೂಡಬೇಕಾಗಿವೆ. ಅನಂತಕುಮಾರ್ ಪ್ರತಿಷ್ಠಾನದ ಮೂಲಕ ನಾವು ಅನಂತಕುಮಾರರ ಹಲವು ಆಶೋತ್ತರಗಳನ್ನು ಈಡೇರಿಸುವುದು ಸಾಧ್ಯವಾದರೆ ಅದು ಆ ಧೀಮಂತ ರಾಜಕಾರಣಿಗೂ ರಾಷ್ಟ್ರಪ್ರೇಮಿಗೂ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿಯೆನ್ನಿಸುತ್ತದೆ.

# ಅನಂತ ಸ್ಫೂರ್ತಿ ತುಂಬುತ್ತಿದ್ದ ಜನನಾಯಕ

ಕೇಂದ್ರದ ಮಾಜಿ ಸಚಿವ ದಿವಂಗತ ಅನಂತ ಕುಮಾರ್ ಅವರ ಜೀವನಾದರ್ಶಗಳು ಚಿರಸ್ಮರಣೀಯ. ವಿದ್ಯಾರ್ಥಿದೆಸೆಯಲ್ಲಿ ಎಲ್ಲರಿಗೂ ಮಾದರಿಯಾಗಿದ್ದ ಅವರು ಅನಂತ ಸ್ಫೂರ್ತಿಯನ್ನೇ ತುಂಬುತ್ತಿದ್ದರು. ಅನೇಕ ವಿದ್ಯಾರ್ಥಿಗಳ ಬದುಕಿಗೆ ಪ್ರೇರಣೆಯಾಗಿದ್ದ ಅವರು ನಮ್ಮ ವಿದ್ಯಾರ್ಥಿ ಬದುಕಿನಲ್ಲೂ ಪ್ರೇರಣಾದಾಯಿ ಆಗಿದ್ದರು. ಆ ನೆನಪುಗಳನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವೆನಿಸುತ್ತದೆ.

ಅನಂತ ಕುಮಾರ್ ಅವರ ರಾಜಕೀಯ ಬದುಕು ಗಮನಾರ್ಹ. ಕೇಂದ್ರ ಸಚಿವರಾಗಿ ಅವರ ಕಾರ್ಯಸಾಧನೆಯೂ ಆದರ್ಶವೇ ಸರಿ. ಬೆಂಗಳೂರು ದಕ್ಷಿಣ ಕ್ಷೇತ್ರವನ್ನು ಸಂಸತ್ತಿನಲ್ಲಿ ದಶಕಗಳ ಕಾಲ ಪ್ರತಿನಿಧಿಸಿದ ಅವರು ಆ ಕ್ಷೇತ್ರದಲ್ಲಿ ಪಕ್ಷವನ್ನು ಸಂಘಟಿಸಿದ ರೀತಿ ಅದ್ಭುತವಾದುದು. ಅದರ ಫಲವನ್ನು ಇಂದಿಗೂ ನಾವು ಕಾಣಬಹುದು. ಅವರು ಜನನಾಯಕರಾಗಿದ್ದರು ಎಂಬುದರ ಪ್ರತೀಕವೇ ಈ ಫಲ. ಅನಂತ ಕುಮಾರ್ ಅವರ ಬದುಕಿನ ಕಾಲಘಟ್ಟದಲ್ಲಿ ಕೆಲವು ದಶಕಗಳಷ್ಟು ಹಿಂದಕ್ಕೆ ಹೋದರೆ, ದೇಶದ ಅತಿದೊಡ್ಡ ವಿದ್ಯಾರ್ಥಿ ಸಂಘಟನೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ)ನ ನಾಯಕರಾಗಿ ಗಮನಸೆಳೆದವರು.

ಆ ಕಾಲ ನಮ್ಮ ವಿದ್ಯಾರ್ಥಿದೆಸೆಯೂ ಆಗಿತ್ತು. ಬಾಲ್ಯದಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್ ಎಸ್ ಎಸ್)ದ ಕಾರ್ಯಕರ್ತನಾಗಿದ್ದ ನನಗೆ ಕಾಲೇಜು ಜೀವನ ಸಂಘದ ಪರಿವಾರ ಸಂಘಟನೆಗಳ ಪರಿಚಯವೂ ಆಯಿತು. ಕಾಲೇಜು ವಿದ್ಯಾರ್ಥಿಗಳ ಮುಕ್ತ ವಿಶ್ವವಿದ್ಯಾಲಯ ಎಂದೇ ಗುರುತಿಸಿಕೊಂಡ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಕಾರ್ಯಕರ್ತನಾಗಿ ಅನೇಕ ಹೊಣೆಗಾರಿಕೆಗಳನ್ನೂ ನಿರ್ವಹಿಸಿದೆ. ಆ ಸಂದರ್ಭದಲ್ಲಿ ನಮಗೆಲ್ಲ ಅನಂತ ಕುಮಾರ್ ಅವರೇ ಪ್ರೇರಣೆ, ಆದರ್ಶ. ಕಾರಣ ಸಂಘಟನಾ ಕೌಶಲ, ಅದ್ಭುತ ನೆನಪಿನ ಶಕ್ತಿ, ಜ್ಞಾನ ಎಲ್ಲವೂ ಅವರಲ್ಲಿ ಮೇಳೈಸಿತ್ತು.

ಶಿವಮೊಗ್ಗದಲ್ಲಿ ನನ್ನ ಕಾಲೇಜು ಜೀವನ ನಡೆದಿತ್ತಾಗ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತನಾಗಿ ವಿದ್ಯಾರ್ಥಿ ಸಂಘಟನೆ, ಚಳವಳಿ, ಹೋರಾಟಗಳಲ್ಲೂ ಭಾಗಿಯಾದೆ. ಆ ಸಂದರ್ಭದಲ್ಲಿ ಪರಿಷತ್ತಿನ ಶಿವಮೊಗ್ಗದ ಹೊಣೆಗಾರಿಕೆ ಅನಂತ ಕುಮಾರ್ ಅವರ ಹೆಗಲೇರಿತ್ತು. ಅವರು ಶಿವಮೊಗ್ಗಕ್ಕೆ ಪದೇಪದೆ ಬರುತ್ತಿದ್ದರು. ಹಾಗೆ ಬಂದಾಗ ಕಾರ್ಯಕರ್ತರ ಮನೆ, ಉಪನ್ಯಾಸಕರ ಮನೆ, ಹಿತೈಷಿಗಳ ಮನೆಗೆ ಭೇಟಿ ನೀಡುತ್ತಿದ್ದರು. ಆಗೆಲ್ಲ ಅವರ ಜೊತೆಗೆ ಹೋಗುವ ಭಾಗ್ಯ ನಮ್ಮದಾಗಿರುತ್ತಿತ್ತು.

ನಮ್ಮೊಂದಿಗೆ ಶಿಕ್ಷಣ, ರಾಜಕೀಯ ಹೀಗೆ ಹಲವಾರು ವಿಷಯಗಳ ಬಗ್ಗೆ ಅವರು ಚರ್ಚಿಸುತ್ತಿದ್ದರು. ಅವರು ಜೊತೆಗಿದ್ದರೆ ನಮ್ಮ ಮಿದುಳಿಗೆ ಸುಗ್ರಾಸ ಭೋಜನ. ಚಿಂತನ-ಮಂಥನ ಜೋರಾಗಿಯೇ ನಡೆಯುತ್ತಿತ್ತು. ಜೊತೆಗೆ ಸಂಘಟನಾ ಕೌಶಲಗಳನ್ನು ಸೂಕ್ಷ್ಮವಾಗಿ ಅವರು ನಮಗೆ ಧಾರೆ ಎರೆದಿದ್ದರು. ವಿಶೇಷ ಏನೆಂದರೆ ಶಿವಮೊಗ್ಗದ ಪ್ರತಿಯೊಬ್ಬ ಕಾರ್ಯಕರ್ತನ ಹೆಸರು, ಅವರ ಮನೆ ಎಲ್ಲವೂ ಅವರಿಗೆ ಚಿರಪರಿಚಿತವಾಗಿತ್ತು. ಯಾರೊಬ್ಬರ ಹೆಸರನ್ನೂ ಅವರು ಕೇಂದ್ರ ಸಚಿವರಾದ ಮೇಲೂ ಮರೆತಿರಲಿಲ್ಲ.

ಶಿವಮೊಗ್ಗದಲ್ಲಿ ಎಬಿವಿಪಿ ನಗರ ಕಾರ್ಯದರ್ಶಿ ಹೊಣೆಗಾರಿಕೆಯನ್ನು ನನ್ನ ಹೆಗಲೇರಿಸಿದ ಆ ಕ್ಷಣ ಇಂದಿಗೂ ಕಣ್ಣಿಗೆ ಕಟ್ಟುವಂತಿದೆ. ಅಂದು ಪರಿಷತ್ತಿನ ಬೈಠಕ್ ನಡೆಯುತ್ತಿತ್ತು. ನಾವು ಹಲವು ಕಾರ್ಯಕರ್ತರು ಅಲ್ಲಿ ಸೇರಿದ್ದೆವು. ಆ ವರ್ಷ ನಗರ ಕಾರ್ಯದರ್ಶಿ ಯಾರಾಗಬೇಕು ಎಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಯಾರೂ ಆ ಹೊಣೆಗಾರಿಕೆ ಹೊರುವುದಕ್ಕೆ ಸಿದ್ಧರಿಲ್ಲದೇ ಇರುವಾಗ, ಬೈಠಕ್ಕಿನಲ್ಲಿ ಉಪಸ್ಥಿತರಿದ್ದ ಅನಂತ ಕುಮಾರ್ ಅವರು ಶಿವಾನಂದ್, ನೀನೇ ಏಕೆ ಈ ಬಾರಿ ನಗರ ಕಾರ್ಯದರ್ಶಿ ಆಗಬಾರದು? ಎಂದು ಕೇಳಿದರು.

ನಿರೀಕ್ಷಿಸಿಯೇ ಇರದಿದ್ದ ಹೊಣೆಗಾರಿಕೆ ಹೆಗಲೇರಿದಾಗ ದಿಗಿಲುಗೊಂಡು ಅವರ ಮುಖ ನೋಡಿದೆ. ಆಗ ಅವರು, ಸಂಘಟನೆಯ ಶಕ್ತಿ ಹೆಚ್ಚಿಸುವಲ್ಲಿ ನಿನ್ನ ಸಂಘಟನಾ ಸಾಮರ್ಥ್ಯ ಬೇಕು. ನೀನೂ ಅದನ್ನು ಬೆಳೆಸಿಕೊಳ್ಳಬೇಕು. ನೀನೊಬ್ಬನೇ ಅಲ್ಲ, ನಾವೆಲ್ಲ ಜತೆಗಿದ್ದು ಒಟ್ಟಿಗೆ ಕೆಲಸ ಮಾಡಿಕೊಂಡು ಹೋಗೋಣ. ನಿನ್ನ ಕೈಲಾಗುತ್ತದೆ. ಚಿಂತೆ ಬಿಟ್ಟು ಬಿಡು ಎಂದು ಧೈರ್ಯ ತುಂಬಿದರು.

ಹಾಗೆ ಅವರು ತುಂಬಿದ ಧೈರ್ಯದ ಫಲವಾಗಿ ಎಬಿವಿಪಿಯ ಶಿವಮೊಗ್ಗ ನಗರ ಕಾರ್ಯದರ್ಶಿಯಾಗಿ ಪ್ರತಿಯೊಂದು ಕಾಲೇಜಿಗೂ ಹೋಗಿ ಸಂಘಟನೆ ವಿಸ್ತರಿಸುವ ಕೆಲಸ ಮಾಡಿದ್ದೆ. ಹೋರಾಟಗಳನ್ನು ಸಂಘಟಿಸಿ, ಸಂಘಟನಾತ್ಮಕ ಕೌಶಲಗಳನ್ನು ಹೆಚ್ಚಿಸಿಕೊಂಡೆ. ಆ ಸಂದರ್ಭದಲ್ಲಿ ಅನಂತ್ ಕುಮಾರ್ ಅವರಂತೆಯೇ ಹಿರಿಯರಾದ ಡಾ. ಪಿ.ವಿ.ಕೃಷ್ಣಭಟ್, ಡಾ.ವಿಷ್ಣುಕಾಂತ ಚಟಪಲ್ಲಿ, ಮಾನನೀಯ ದತ್ತಾತ್ರೇಯ ಹೊಸಬಾಳೆ, ಶ್ರೀಯುತ ಮನೋಹರ ಮಸ್ಕಿ ಮುಂತಾದವರೆಲ್ಲ ಮಾರ್ಗದರ್ಶನ ಮಾಡಿದ್ದರು. ಈ ಹಿರಿಯರೊಂದಿಗೆ ಈಗಲೂ ಸಂಪರ್ಕ ಇರುವುದು ಸೌಭಾಗ್ಯವೇ ಸರಿ.

ಕೇಂದ್ರ ಸಚಿವರಾದ ಬಳಿಕವೂ ಅನಂತ ಕುಮಾರ್ ಶಿವಮೊಗ್ಗ ಬಂದಾಗೆಲ್ಲ ನನ್ನ ಸ್ನೇಹಿತ ವಿವೇಕ್ ಅವರನ್ನು ಭೇಟಿಯಾದಾಗ ನನ್ನ ಬಗ್ಗೆ ವಿಚಾರಿಸಿದ್ದರು. ಇಂಥ ಸರಳ, ಸಜ್ಜನಿಕೆಯ ವ್ಯಕ್ತಿಯಿಂದ ನಾನು ಸಂಸ್ಕಾರ ಪಡೆದಿದ್ದೇನೆಂದರೆ ನನ್ನ ಮಟ್ಟಿಗೆ ಅದೊಂದು ಹೆಮ್ಮೆಯ ವಿಚಾರವೇ ಸರಿ. ಈಗ ಅವರು ನಮ್ಮೊಂದಿಗೆ ಭೌತಿಕವಾಗಿ ಇಲ್ಲದೇ ಇರಬಹುದು. ಆದರೆ, ಅವರ ಜೀವನಾದರ್ಶಗಳು, ಕಾರ್ಯಕರ್ತರಿಗೆ ಅವರು ತೋರಿಸಿಕೊಟ್ಟ ಜೀವನಪಥ ಎಂದಿಗೂ ಮರೆಯಾಗದು.



**ಡಾ.ಶಿವಾನಂದ ನಾಯಕ್**
ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ, ಉಡುಪಿ

# ನಿಮ್ಮ ಪತ್ರಗಳು

ಮಾನ್ಯರೇ, ಕರ್ನಾಟಕ ರಾಜಕಾರಣಕ್ಕೆ ದೆಹಲಿಯಲ್ಲಿ ಹೊಸ ವ್ಯಾಖ್ಯಾನ ನೀಡಿದವರು, ಕರ್ನಾಟಕವನ್ನು ದೆಹಲಿ ಮಟ್ಟದಲ್ಲಿ ಯಶಸ್ವಿಯಾಗಿ ಪ್ರತಿನಿಧಿಸುತ್ತಿದ್ದವರು ದಿವಂಗತ ಅನಂತಕುಮಾರಜೀ ಅವರು. ಇಂದಿಗೂ ಸಹ ಅವರೇ ನನ್ನ ರಾಜಕೀಯ ಗುರುಗಳು ಎಂಬ ಧೃಢವಾದ ನಂಬಿಕೆ ಇದೆ. ಇಂದು ಅವರ ಹುಟ್ಟು ಹಬ್ಬ, ಅವರು ನಮ್ಮೊಂದಿಗಿಲ್ಲದಿದ್ದರೂ ಅವರ ನೆನಪು ಮಾತ್ರ ಅಜರಾಮರ.

ಅವರು ಕೇವಲ ರಾಜಕಾರಣಿಯಾಗಿರಲಿಲ್ಲ ಒಬ್ಬ ಉತ್ತಮ ಹಾಸ್ಯಗಾರ, ಸಹೃದಯಿಗಳಾಗಿದ್ದರು.

ಸಾಮಾಜಿಕ ಕಳಕಳಿ ಮತ್ತು ದೇಶದ ಅಭಿವೃದ್ಧಿಯೆಡೆಗಿನ ಅವರ ವಿಚಾರಗಳು ನಮಗೆ ಯಾವತ್ತೂ ಸ್ಪೂರ್ತಿದಾಯಕ.

ಶ್ರೀ ಅನಂತ ಕುಮಾರ್ ರವರ ಜನ್ಮ ದಿನದ ಈ ಸಂದರ್ಭದಲ್ಲಿ ಅವರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ. ಅನಂತಪಥ ಪತ್ರಿಕೆಗೆ ಹೃತ್ಪೂರ್ವಕ ಶುಭಾಶಯಗಳು.



**ವಿದ್ಯಾಸಾಗರ್ ಕುಲಕರ್ಣಿ**
ಮಾಜಿ ಅಧ್ಯಕ್ಷರು, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ

ಮಾನ್ಯರೇ,

ತಮ್ಮ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಅನಂತಪಥ ಪತ್ರಿಕೆ ಎಲ್ಲ ಬಗೆಯಲ್ಲಿ ಓರಣದಿಂದ ಕೂಡಿದೆ. ವೈವಿಧ್ಯಮಯ ಲೇಖನಗಳಿರುವುದೂ ಒಂದು ವಿಶೇಷ. ನನ್ನ ಸ್ನೇಹಿತರಾದ ಜನಾರ್ದನ ತುಂಗ ಅವರು ದೀನದಯಾಳರ ಬಗೆಗೆ ಬರೆದಿರುವ ಲೇಖನ, ನೀವು ನಿರೂಪಿಸಿರುವ ಅನಂತಕುಮಾರ್ ಅವರ ಕುರಿತಾದ ಲೇಖನ, ಹಿರಿಯ ವೈದ್ಯಕೀಯತಜ್ಞರಾದ ಸಿ ಎನ್ ಮಂಜುನಾಥ್ ಹಾಗೂ ದೇವಿ ಶೆಟ್ಟಿಯವರ ಅಭಿಪ್ರಾಯಗಳು ಮೌಲಿಕವಾಗಿವೆ. ಸಾರ್ವಜನಿಕವಾಗಿ ವೈದ್ಯಕೀಯ ಸೌಲಭ್ಯ ಪರಿಣಾಮಕಾರಿಯಾಗಿ ದೊರಕುವ ಹಾಗೆ ಮಾಡುವುದೇ ನಿಜವಾದ ಸವಾಲು ಎನ್ನುವುದು ವಾಸ್ತವವಾಗಿದೆ. ಕೋವಿಡ್ ಬಗೆಗಿನ ಲೇಖನಗಳು ವಿಷಯವನ್ನು ಮನದಟ್ಟುಮಾಡುವಂತಿವೆ.

**ಜಿ.ಎನ್. ನರಸಿಂಹಮೂರ್ತಿ**
ಕನ್ನಡ ಗಣಕ ಪರಿಷತ್ತು, ಬೆಂಗಳೂರು.

ಮಾನ್ಯರೇ,

ಒಬ್ಬ ಸಮಾಜಮುಖಿ ಚೇತನ ರಾಜಕಾರಣದ ಮೂಲಕವೇ ಮಾತೃಭೂಮಿಯ ಅಭಿವೃದ್ಧಿಗೆ ಹೇಗೆಲ್ಲಾ ಸ್ಪಂದಿಸಬಹುದು ಅನ್ನುವುದಕ್ಕೆ ಅನಂತ್ ಕುಮಾರ್ ಅವರ ಸಾಕ್ಷಿ ಭೂತವಾದ ಸಾಧನೆಗಳೇ ಸಾಕ್ಷಿ . ಸತತವಾಗಿ ಆರು ಬಾರಿ ಸಂಸತ್ತಿಗೆ ಆಯ್ಕೆಯಾದ ಶ್ರೀಯುತರ ಸಾಧನೆ ಕ್ರಿಯಾತ್ಮಕ ಚಟುವಟಿಕೆಯು ಅದಮ್ಯ ಚೇತನ ಹಾಗೂ ಅವರ ಟ್ರಸ್ಟ್ ಮೂಲಕ ಕ್ರಿಯಾತ್ಮಕವಾಗಿ ನಿರಂತರವಾಗಿ ನಡೆಯುತ್ತಿದೆ .ಅವರು ನಡೆದು ಬಂದ ದಾರಿಯ ಹೆಜ್ಜೆಯ ಗುರುತುಗಳನ್ನು ಅನಂತ ಪಥದ ಮೂಲಕ ಸಂಪಾದಕರು ಯಶಸ್ವಿಯಾಗಿ ದಾಖಲಿಸುವ ಪ್ರಯತ್ನ ಮಾಡಿದ್ದಾರೆ .

ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರ ಆಪ್ತ ಲೇಖನ ಅನಂತಕುಮಾರ್ ಅವರ ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆ ಡಾ ಉಲ್ಲಾಸ ಕಾರಂತರ ಸಂದರ್ಶನ, ಪ್ರಕೃತಿಯ ಬಗೆಗಿನ ಅವರ ಅಭಿಪ್ರಾಯಗಳು ಚೆನ್ನಾಗಿ ಮೂಡಿಬಂದಿವೆ .

ಸಂಪಾದಕರ ಕಾರ್ಯಕ್ಷಮತೆ ಪತ್ರಿಕೆಯ ಹೂರಣದ ಮೂಲಕ ಸಾಬೀತಾಗಿದ್ದು ಓದುಗರನ್ನು ಯಶಸ್ವಿಯಾಗಿ ತಲುಪುವಲ್ಲಿ ಗುರಿ ಮುಟ್ಟಿದೆ. ಧನ್ಯವಾದ ಗಳು.

**ಕೆ. ಎಲ್. ನಟರಾಜ್**
ಸಂಪಾದಕರು, ನಿಮ್ಮ ವೈಶ್ಯ ವಾರ್ತೆ, ಬೆಂಗಳೂರು -೩.

ಮಾನ್ಯರೇ, ಅಳಿದರೂ ಉಳಿವ ನೆನಪೇ ಅ ಬದುಕಿನ ಸಾರ್ಥಕತೆ ಎಂಬಂತೆ ' ಸಾರ್ಥಕ ಬದುಕಿಗೆ ಸಾಕ್ಷಿಯಾದ ಶ್ರೀಯುತ ಅನಂತ ಕುಮಾರ್ ರವರ ಮೇರು ವ್ಯಕ್ತಿತ್ವ ಅನುಕರಣೀಯ ಹಾಗೂ ಅವಿಸ್ಮರಣೀಯ. ರಾಜಕೀಯ ಕ್ಷೇತ್ರದಲ್ಲಿ ಸರಳತೆ ಸಜ್ಜನಿಕೆಗೆ ಪಾರದರ್ಶಕ ಜೀವನಕ್ಕೆ ಮಾದರಿಯಾಗಿದ್ದ ಮಹನೀಯರು ಅವರು.

ಶ್ರೀಯುತ ಅನಂತಕುಮಾರ ಅವರು ನಡೆದಂತೆ ನುಡಿದಂತೆ ಅವರ ಅಭಿಮಾನಿಗಳು ಅನುಯಾಯಿಗಳು ಸಾಗಿದಲ್ಲಿ ಅದೇ 'ಅನಂತ ಪಥ'ಅದೇ ಅವರಿಗೆ ಸಲ್ಲಿಸುವ ಅನಂತ ನಮನ.

**ಹರಿಶಂಕರ ತಾಳ್ಯ**
ಹೊಸಕೆರೆಹಳ್ಳಿ, ಬೆಂಗಳೂರು

ಮಾನ್ಯರೆ, ಕಳೆದ ಸಂಚಿಕೆಯಲ್ಲಿ ಶ್ರೀ ಜನಾರ್ದನ ತುಂಗ ಬರೆದಿರುವ ಶ್ರೀ ದೀನದಯಾಳ ಉಪಾಧ್ಯಾಯರ ಪರಿಚಯ ಲೇಖನ ಉತ್ತಮವಾಗಿದೆ.

ನಾನಂತೂ ವಿದ್ಯಾರ್ಥಿ ಜೀವನದಲ್ಲೇ ಅವರ ಜೀವನ ಮತ್ತು ಅವರ ವೈಚಾರಿಕ ಬರಹಗಳಿಂದ ಪ್ರಭಾವಿತನಾಗಿದ್ದೆ. ವಿಶೇಷವಾಗಿ ಅವರ ರಾಜನೀತಿ ಮತ್ತು ಆರ್ಥಿಕ ನೀತಿಯ ವಿವರಣೆ, ಅವರ ದೂರದರ್ಶಿ ಚಿಂತನೆಯನ್ನು ತಿಳಿಸುತ್ತದೆ.

ಅವರು ಪ್ರತಿಪಾದಿಸಿದ ಆರ್ಥಿಕ ನೀತಿಯನ್ನು ಜಾರಿಗೊಳಿಸಿದ್ದರೆ, ಈ ಹೊತ್ತಿಗೆ, ಭಾರತ ಒಂದು ಬಲಿಷ್ಠ, ಸ್ವಾವಲಂಬಿ, ಗ್ರಾಮಸ್ವರಾಜ್ಯ ದೇಶವಾಗಿ, ಈ ನಗರೀಕರಣ, ಬಹುರಾಷ್ಟ್ರೀಯ ಕಂಪನಿಗಳ ಹಾವಳಿ ಇಲ್ಲದೇ, ನೆಮ್ಮದಿಯ ಜನಜೀವನವಾಗುತ್ತಿತ್ತು.

ಅವರ ಪಕ್ಷದವರೇ ಅಧಿಕಾರದಲ್ಲಿದ್ದರೂ, ಅವರು ತೋರಿದ ದಾರಿಯನ್ನು ಮರೆತಿರುವುದು ಒಂದು ದುರಂತ.

೧೯೬೦ ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತೀಯ ಸಮ್ಮೇಳನದಲ್ಲಿ ೩ ದಿನ ಅವರೊಂದಿಗೆ ಇದ್ದದ್ದು ನನ್ನ ಸುಯೋಗ. ಉಡ್ ಲ್ಯಾಂಡ್ಸ್ ಹೋಟೆಲ್ ನ ಪತ್ತಿಕಾ ಗೋಷ್ಟಿ, ವಾಸವೀ ಮಹಲ್ ನಲ್ಲಿ ನಡೆದ ಪ್ರತಿನಿಧಿ ಸಭೆ ಮತ್ತು ಸಂಜೆ ಗಾಜಿನ ಮನೆಯಲ್ಲಿ ನಡೆದ ಸಾರ್ವಜನಿಕ ಸಭೆಯ ವಿವರಗಳನ್ನು ಅವರು ಬರೆದು ಕೊಡುತ್ತಿದ್ದರು. ಅದನ್ನು ಟೈಪಿಸುವುದು ನನ್ನ ಕೆಲಸವಾಗಿತ್ತು. ಅಸಾಧಾರಣ ವ್ಯಕ್ತಿತ್ವದ, ಸರಳ ಜೀವಿಯ ಸಹವಾಸ, ನನಗೆ ಅವಿಸ್ಮರಣೀಯ.

ಎಲ್ಲವನ್ನೂ ನೆನಪಿಗೆ ತಂದ ಶ್ರೀ ತುಂಗ ಅವರಿಗೆ ಅಭಿನಂದನೆಗಳು.

**ಬಿ.ಎನ್.ಎನ್. ಮೂರ್ತಿ**
ಬೆಂಗಳೂರು

ಮಾನ್ಯರೆ, ಅನಂತಪಥ ಕೈ ಸೇರಿತು. ಪುಟಗಳನ್ನು ನೋಡುತ್ತಿದ್ದಂತೆ ಖುಷಿ ಮತ್ತು ಗೊಂದಲ. ಯಾವುದನ್ನು ಮೊದಲು ಓದಲಿ ಅಂತ. ಒಂದಕ್ಕಿಂತ ಒಂದು ಚೆನ್ನಾಗಿರುವವೇ. ಆರೋಗ್ಯದ ದೃಷ್ಟಿಯಿಂದ ಕೋವಿಡ್ ಬಗ್ಗೆ ಜಾಗೃತಿ ಮೂಡಿಸುವ ಡಾ. ಹರ್ಷವರ್ಧನ್, ಅಶ್ವತ್ಥನಾರಾಯಣ ರವರು, ಡಾ. ಸಿ. ಎನ್ ಮಂಜುನಾಥ್, ಡಾ. ದೇವಿಶೆಟ್ಟಿ ಮೊದಲಾದವರ ಲೇಖನ ನಿಜಕ್ಕೂ ಅಗತ್ಯ ಮಾಹಿತಿಗಳನ್ನು ನೀಡುತ್ತವೆ. ನಾವು ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಜೊತೆಗೆ ಸರ್ಕಾರದ ಸೌಲಭ್ಯಗಳು, ತೆಗೆದುಕೊಂಡಿರುವ ಕ್ರಮಗಳ ಚಿತ್ರಣ ಇಲ್ಲಿದೆ. ಚರ್ಚೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪರಿಣಿತರು. ಅವರ ಬರಹಗಳೂ ಪರಿಪೂರ್ಣವಾಗಿವೆ.

ಮುಖ್ಯವಾಗಿ ನಮ್ಮ ರಾಜ್ಯ ಮತ್ತು ಒಟ್ಟಾರೆ ಭಾರತ ಕೋವಿಡ್ ವಿರುದ್ಧದ ಸಮರದಲ್ಲಿ ಹೆಚ್ಚಿನ ತಂತ್ರಜ್ಞಾನ ಸಾಧಿಸಿರುವ ವಿಷಯ ತಿಳಿದು ಸಂತಸವಾಯಿತು.

ಜೊತೆಗೆ ಅನಂತ್ ಕುಮಾರ್ ರವರ ಕಾರ್ಯದಕ್ಷತೆ ಬಗ್ಗೆ, ಲಘು ಹಾಸ್ಯದೊಂದಿಗೆ ಬಂದಿರುವ ಲೇಖನ, ಅವರು ಸೈಕಲ್ ಸ್ಟಾಂಡ್ ಹತ್ತಿ ಮಾಡಿದ ಭಾಷಣದ ಪ್ರಸಂಗ ಸೊಗಸಾಗಿದೆ..

ಪಂಡಿತ ದೀನ್ ದಯಾಳ್ ಉಪಾಧ್ಯಾಯ ಅವರ ಜೀವನಪರಿಚಯ, ಉಲ್ಲಾಸ ಕಾರಂತರ ಸಂಶೋಧನೆ ಬಗ್ಗೆ ಲೇಖನಗಳು ಆಸಕ್ತಿ ಮೂಡಿಸಿದವು. ರಘುಪತಿಯವರ ಚಿತ್ರಗಳು ಸಂಚಿಕೆಗೆ ಮೆರುಗು ನೀಡಿವೆ. ಸೆಪ್ಟೆಂಬರ್ ತಿಂಗಳು ಅನಂತ್ ರವರ ಜನ್ಮದಿನದ ಸ್ಮರಣೆಯಲ್ಲಿ ಗೌರವಪೂರ್ವಕ ನಮನಗಳು.

ಅನಂತ್ ಕುಮಾರ್ ರವರು ತಮ್ಮ ರಾಜಕೀಯ ಜೀವನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ದಕ್ಷತೆಯಿಂದ ಕರ್ತವ್ಯ ನಿರ್ವಹಿಸಿದ ರೀತಿ ಇಂದು ಗೊಣಗುವವರಿಗೆ ಒಂದು ಆದರ್ಶ. ಯಾವುದೇ ಇಲಾಖೆಯಿರಲಿ ಅದನ್ನು ತಳದಿಂದ ಶೋಧಿಸಿ ಹೊಸ ಜಾಗೃತಿ ಮೂಡಿಸುವ ಪ್ರಯತ್ನ ಅನಂತ್ ರವರದು. ಅವರ ಕಾರ್ಯಶೀಲತೆ, ವ್ಯಕ್ತಿತ್ವಗಳನ್ನು ನೆನಪಿಸುವ ಇಂತಹಾ ಅತ್ಯುತ್ತಮ ಪತ್ರಿಕೆ ಕೈ ಸೇರಲು ಕಾರಣರಾದವರೆಲ್ಲರಿಗೂ ನಮನಗಳು.

**ಸುಬ್ಬಲಕ್ಷ್ಮಿ. ಹೆಚ್. ಕೆ.**
ಕೋಲಾರ. ೯೪೪೯೯೭೪೦೨೩

ಮಾನ್ಯರೇ, ಅನಂತ ಪಥ ಸೆಪ್ಟೆಂಬರ್ ಸಂಚಿಕೆ ಬಹಳ ಚನ್ನಾಗಿ ಮೂಡಿಬಂದಿದೆ . ಪ್ರತಿಯೊಂದು ಲೇಖನವೂ ಅರ್ಥಪೂರ್ಣವಾಗಿದ್ದು ಸಂಗ್ರಹಯೋಗ್ಯವಾಗಿದೆ.

ಶ್ರೀ ಅನಂತಕುಮಾರ್ ಅವರನ್ನು ಕುರಿತು ಗಣ್ಯರು ಬರೆದ ಲೇಖನಗಳು ಶ್ರೀಯುತರ ಕಾರ್ಯತತ್ಪರತೆಗೆ ಸಾಕ್ಷಿಯಾಗಿವೆ . ಉಪರಾಷ್ಟ್ರಪತಿಗಳು ತಿಳಿಸಿದಂತೆ ಪ್ರತಿಯೊಂದು ವಿಷಯದ ಬಗ್ಗೆಯೂ ಆಳವಾಗಿ ಅಧ್ಯಯನ ಮಾಡಿ ಅದನ್ನು ಉತ್ತಮವಾಗಿ ಅನುಷ್ಠಾನಗೊಳಿಸಲು ಶ್ರಮಿಸುತ್ತಿದ್ದುದು ಅವರ ಸಮಾಜಮುಖಿ ಸೇವಾ ಕೈಂಕರ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಅನಂತ ಕುಮಾರ್ ರವರ ಉತ್ತಮ ನಾಯಕತ್ವದ ಲಕ್ಷಣಗಳನ್ನು ಬಿಂಬಿಸುವ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಲೇಖನ ಶ್ರೀಯುತರ ಬಗ್ಗೆ ಅಭಿಮಾನ ಮೂಡುತ್ತದೆ.

ಜನಸಂಘದ ಸಂಸ್ಥಾಪಕರೊಬ್ಬರಾದ ಶ್ರೀ ಪಂಡಿತ್ ದೀನದಯಾಳ ಉಪಾಧ್ಯಾಯರ ಬಗ್ಗೆ ಬರೆದ ಲೇಖನ ಹಾಗೂ ಹುಲಿಸಂರಕ್ಷಣೆಯಲ್ಲಿ ತೊಡಗಿರುವ ಶ್ರೀ ಉಲ್ಲಾಸ್ ಕಾರಂತರ ಸಂದರ್ಶನ ಚನ್ನಾಗಿ ಮೂಡಿಬಂದಿದೆ. ನೆನಪಿನ ಅಂಗಳದ ಬುತ್ತಿಯು ಅನಂತಕುಮಾರ್ ಅವರು ಕೈಗೊಂಡ ಸತ್ಕಾರ್ಯ ವನ್ನು ನೆನೆಯಲು ಸಹಕಾರಿಯಾಗಿದೆ.

ಅನಂತಪಥ ಪತ್ರಿಕೆಯ ಸಂಸ್ಥಾಪಕರಿಗೂ ಹಾಗೂ ಸಂಪಾದಕ ವರ್ಗಕ್ಕೂ ಅಭಿನಂದನೆಗಳು.

**ಕೆಂಗೇರಿ ಚಕ್ರಪಾಣಿ**
ನಿವೃತ್ತ ಸಹಾಯಕ ಅಭಿಯಂತರ, ಬಿ.ಎಸ್.ಎನ್.ಎಲ್ ಬೆಂಗಳೂರು

ಅನಂತಪಥ

Editor: **Gopal T.S** | Layout: **Abhishek Gubbi Creatives**

Sketches: **Raghupathi Sringeri** | Inputs: **Poornaprajna / Madhushree B A / Jayashree G V / Ashok Palande**

Photographs: **Ananth Kumar Pratishtana / Praveen Bhargav / Sreelakshmi/ HS Venkatesh Murthy**

Published by: **Dr. Tejaswini AnanthKumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

# ಮರೆಯಲಾಗದ ಆದರ್ಶಸೋದರ

**ಸುಮಿತ್ರಾ ಮಹಾಜನ್, ಲೋಕಸಭೆ ಮಾಜಿ ಸಭಾಪತಿ**



ಅನಂತ ಕುಮಾರ್ ಅವರೊಂದಿಗೆ ಕಾರ್ಯ ನಿರ್ವಹಿಸಿದ್ದೇನೆ ಎನ್ನುವುದೇ ಒಂದು ಹೆಮ್ಮೆಯ ವಿಷಯ. ಅವರು ಭಾರತೀಯ ಜನತಾ ಪಕ್ಷದ ಮಹಾಸಚಿವರಾಗುವುದಕ್ಕೆ ಮೊದಲಿನಿಂದಲೂ ನನಗೆ ಅವರ ಪರಿಚಯವಿತ್ತು. ಮಧ್ಯಪ್ರದೇಶದಲ್ಲಿ ಪ್ರಭಾರಿಯಾಗಿ ಸಂಘಟನೆಯ ಕಾರ್ಯನಿರ್ವಹಿಸಲು ಆರಂಭಿಸಿದ ಮೇಲೆ ನನಗೆ ಅವರ ಕಾರ್ಯಕ್ಷಮತೆಯ ಬಗ್ಗೆ ಹೆಚ್ಚುಹೆಚ್ಚು ಗೊತ್ತಾಯಿತು.

ಅವರು ರಾಷ್ಟ್ರೀಯ ಸ್ವಯಂಸೇವಾ ಸಂಘಟನೆಯ ಪ್ರಭಾವಕ್ಕೆ ಒಳಗಾಗಿದ್ದರು. ಸಾಮಾನ್ಯವಾಗಿ ಮೀಟಿಂಗ್ ಮಾಡುವಾಗ ಅವರ ಮನದಲ್ಲಿ ಏನಿರುತ್ತಿತ್ತೋ ಅದನ್ನು ಸ್ಪಷ್ಟವಾಗಿ ಹೇಳಿಬಿಡುತ್ತಿದ್ದರು. ಯಾವ ನಿರ್ಧಾರ ಕೈಗೊಳ್ಳಬೇಕು ಎನ್ನುವುದನ್ನು ನಿರ್ಧರಿಸಿರುತ್ತಿದ್ದರೋ ಅದಕ್ಕೆ ಬದ್ಧರಾಗಿರುತ್ತಿದ್ದರು. ವಿಶೇಷವೆಂದರೆ ತಾವು ತೆಗೆದುಕೊಂಡ ನಿರ್ಧಾರವನ್ನು ಎಲ್ಲರೂ ಸಮ್ಮತಿಸುವಂತೆ, ಅವರು ಬೇರೆಯವರ ಮನವನ್ನು ಪ್ರೀತಿಯಿಂದ ಒಲಿಸಿಕೊಂಡಿರುತ್ತಿದ್ದರು. ಎಲ್ಲರನ್ನೂ ಯಾವ ರೀತಿಯಲ್ಲಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕು ಎನ್ನುವುದನ್ನು ತಿಳಿದಿದ್ದರು. ಸಂಘಟನೆಯ ಜವಾಬ್ದಾರಿ ಹೊತ್ತಿದ್ದಾಗ ಅದನ್ನು ಅವರು ಮುನ್ನಡೆಸುತ್ತಿದ್ದ ರೀತಿ ಅನನ್ಯ. ಅವರಿಂದ ನಾನು ಸಂಘಟನಾ ಕಾರ್ಯದ ಬಗ್ಗೆ ಹೆಚ್ಚು ಅರಿತಂತಾಯಿತು. ಯಾವ ರೀತಿ ಕಾರ್ಯ ನಿರ್ವಹಿಸಬೇಕು. ಈಗಾಗಲೇ ನಿರ್ಧರಿಸಲ್ಪಟ್ಟ ವಿಷಯವನ್ನು ಯಾವ ರೀತಿ ಮುನ್ನಡೆಸಬೇಕು, ಇಂತಹದ್ದೇ ನಿರ್ಧರಿತ ವಿಧಾನದಲ್ಲಿ ಕಾರ್ಯ ನಿರ್ವಹಿಸಬೇಕು ಎನ್ನುವುದರ ಬಗ್ಗೆ ಎಲ್ಲರನ್ನೂ ಸಂಪರ್ಕಿಸಿ ಅದಕ್ಕೆ ಅವರಿಂದ ಸಮ್ಮತಿಮುದ್ರೆ ತೆಗೆದುಕೊಂಡು ನಂತರ ಮಂಡಿಸುತ್ತಿದ್ದರು.ಇದು ನಿಪುಣ ಸಂಘಟನಾಕಾರನ ಕುಶಲತೆಯಾಗಿದೆ. ಇವರು ತೆಗೆದುಕೊಂಡ ನಿರ್ಧಾರ, ವಿಧಾನ ಕೇಳಿಸಿಕೊಂಡ ಪ್ರತಿಯೊಬ್ಬರಿಗೂ ಇದು ತನ್ನದೇ ಮನದ ಮಾತು, ನಾನೂ ಇದೇ ಅಭಿಪ್ರಾಯ ಹೊಂದಿದ್ದೆ, ನನಗೆ ಹೀಗೆಯೇ ಅನ್ನಿಸಿತ್ತು ಎನ್ನುವ ಭಾವ ಮೂಡುವಂತೆ ವಾದ ಮಂಡಿಸುತ್ತಿದ್ದರು.

ತಮಗೆ ಯಾವುದೇ ಖಾತೆ ದೊರಕಲಿ ಅದನ್ನು ಸಮರ್ಥವಾಗಿ ನಿಭಾಯಿಸುವುದು ಅನಂತ್ ಗೆ ಗೊತ್ತಿತ್ತು. ಸಾಮಾನ್ಯವಾಗಿ ಬಹಳಷ್ಟು ಮಂತ್ರಿಗಳಿಗೆ ಅವರಿಗೆ ನೀಡಿದಂತಹ ಹುದ್ದೆಯ ಬಗ್ಗೆ ನೈಪುಣ್ಯತೆ ಇರುವುದಿಲ್ಲ. ಅಧಿಕಾರಿಗಳು ತಿಳಿಸಿರುವುದನ್ನು ಸಮ್ಮತಿಸುವಂತಹ ಪರಿಸ್ಥಿತಿ. ಇದಕ್ಕೆ ಯಾರೂ ಹೊರತಲ್ಲ.ಆದರೆ ಅನಂತಕುಮಾರ್ ಮಾತ್ರ ಹಾಗಲ್ಲ. ಅವರು ಯಾವುದೇ ಹೊಸ ವಿಷಯವಿದ್ದರೂ ಅದರ ಬಗ್ಗೆ ಅಧ್ಯಯನ ನಡೆಸುತ್ತಿದ್ದರು. ಹೆಚ್ಚುಹೆಚ್ಚು ಪುಸ್ತಕಗಳನ್ನು ಓದಿ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು. ಅವುಗಳ ಬಗ್ಗೆ ತಮಗೂ ತಿಳಿದಿದೆ ಎನ್ನುವ ಅಂಶವನ್ನು ಉಳಿದವರಿಗೆ, ಅಧಿಕಾರಿಗಳಿಗೆ ಮನದಟ್ಟು ಮಾಡುತ್ತಿದ್ದರು. ಇಂದಿನ ರಾಜಕೀಯದಲ್ಲಿ ಇದು ಅತ್ಯಗತ್ಯ.

ಎಲ್ಲರಿಗೂ ಗೊತ್ತಿರುವಂತೆ ಬೇವು ಲೇಪಿತ ಯೂರಿಯಾ ಬಳಕೆ ಬಗ್ಗೆ ನಮಗೆ ಬಹಳ ಹಿಂದೆಯೆ ತಿಳಿದಿದ್ದರೂ ಅದನ್ನು ಜಾರಿಗೊಳಿಸಲು ಅನಂತಕುಮಾರ್ ಅವರೇ ಬರಬೇಕಾಯಿತು. ಅವರು ರಸಗೊಬ್ಬರ ಖಾತೆಯನ್ನು ನಿರ್ವಹಿಸುವಾಗ ಇದರ ಕಾಳದಂಧೆಯನ್ನು ಯಾವರೀತಿ ತಡೆಗಟ್ಟುವುದು,ಬೇವು ಲೇಪಿತ ಯೂರಿಯಾ ಬಳಕೆಯ ಪ್ರಯೋಜನವನ್ನು ಯಾವ ರೀತಿ ತಿಳಿಸುವುದು ಹೀಗೆ ಹತ್ತು ಹಲವಾರು ವಿಷಯಗಳ ಬಗ್ಗೆ ಮಗ್ನರಾಗಿರುತ್ತಿದ್ದರು. ಅದರ ನಡುವೆಯೇ, ಇಂತಹ ದಿನ ನನ್ನ ಪತ್ನಿಯ ಜನ್ಮದಿನವೆಂದೋ, ನಮ್ಮ ವಿವಾಹ ವಾರ್ಷಿಕೋತ್ಸವದ ದಿನವೆಂದೋ ಹೇಳಿ, ಅಂದು ಈ ಸಂಗತಿಯನ್ನು ಜಾರಿಗೊಳಿಸುತ್ತೇನೆ, ಪ್ರಕಟಿಸುತ್ತೇನೆ ಎಂದು ಹೇಳುತ್ತಿದ್ದರು. ಹೀಗೆ ಅವರು ತಮ್ಮ ವೃತ್ತಿ ಮತ್ತು ವೈಯಕ್ತಿಕ ಅಂಶಗಳೆರಡನ್ನೂ ಮೇಳೈಸಿ ವಿಷಯವನ್ನು ಚಂದಗಾಣಿಸುತ್ತಿದ್ದರು. ಅದೇ ರೀತಿ ಮಕ್ಕಳ ಡೈಪರ್, ಹೆಣ್ಣುಮಕ್ಕಳ ಸ್ಯಾನಿಟರಿ ನ್ಯಾಪ್ಕಿನ್ ಇಂತಹವುಗಳ ಮೇಲೆ ರಿಯಾಯಿತಿ ಘೋಷಣೆಯಂತಹ ಅಂಶಗಳನ್ನು ತಮ್ಮ ಬದುಕಿನ ವಿಶೇಷದಿನಗಳೊಂದಿಗೆ ಜೋಡಿಸಿ ಅದಕ್ಕೊಂದು ವಿಭಿನ್ನತೆ ನೀಡುತ್ತಿದ್ದರು.ಅವರು ಕೇವಲ ಉತ್ತಮ ರಾಜಕೀಯ ವ್ಯಕ್ತಿಯಲ್ಲ, ಸಮರ್ಥ ಗೃಹಸ್ಥರೂ ಸಹ ಆಗಿದ್ದರು.ಪತ್ನಿಗೂ ಸಹ ಉತ್ತಮ ಕೆಲಸಗಳನ್ನು ಮಾಡುವುದಕ್ಕೆ ಅಗತ್ಯವಾದಂತಹ ಪ್ರೋತ್ಸಾಹ ನೀಡುತ್ತಿದ್ದರು, ಅದರ ಅಭಿವೃದ್ಧಿಗೆ ಬೆನ್ನೆಲುಬಾಗಿರುತ್ತಿದ್ದರು. ಇದು ಅತ್ಯಂತ ವಿಶೇಷವಾದ ಸಂಗತಿ. ಬಹಳಷ್ಟು ರಾಜಕೀಯ ನಾಯಕರು ಹೇಳುವುದನ್ನು ಕೇಳಿರುತ್ತೀರಿ - ಮನೆಯನ್ನು ಆಕೆ ನಿಭಾಯಿಸುತ್ತಾಳೆ ; ನನಗೆ ಅದರ ಬಗ್ಗೆ ಹೆಚ್ಚು ಗೊತ್ತಿಲ್ಲ ಎಂಬುದಾಗಿ ! ಆದರೆ ಇವರ ವಿಷಯ ಆ ರೀತಿಯದ್ದಲ್ಲ. ಪ್ರತಿಯೊಂದು ವಿಷಯಕ್ಕೂ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಪತ್ನಿಗೆ ಪತಿಯ ಇಷ್ಟಾನಿಷ್ಟಗಳು ತಿಳಿದಿರುವಂತೆ ಪತಿಗೂ ಪತ್ನಿಯ ಬಗ್ಗೆ ತಿಳಿದಿರಬೇಕಲ್ಲವೇ?

ನಾನು ಸ್ಪೀಕರ್ ಆಗಿದ್ದಾಗ ಅವರು ಪಾರ್ಲಿಮೆಂಟರಿ ವ್ಯವಹಾರಗಳ ಮಂತ್ರಿಯಾಗಿದ್ದರು. ಆಗಂತೂ ನನಗೆ ಬಹಳ ಸಹಾಯ ಮಾಡುತ್ತಿದ್ದರು. ಅಂದು ಎದುರಾಗಬಹುದಾದಂತಹ ವಿಷಯಗಳು, ಅದನ್ನು ಯಾವರೀತಿ ನಿಭಾಯಿಸಬಹುದು ಹೀಗೆ ಮೊದಲು ನನ್ನ ಜೊತೆ ಚರ್ಚಿಸುತ್ತಿದ್ದರು. ಕೆಲವೊಂದು ಬಾರಿ ನಮ್ಮಿಬ್ಬರ ನಡುವೆ ಪುಟ್ಟ ಮುನಿಸು, ಬಿಸಿಬಿಸಿ ಚರ್ಚೆಯೂ ಸಹ ಆಗುತ್ತಿತ್ತು.ನಾನು ಒಮ್ಮೊಮ್ಮೆ "ಅನಂತ್ ನಾನು ನಿಭಾಯಿಸುತ್ತೀನಿ, ಪದೇಪದೇ ನನಗೆ ಹೇಳುವ ಅಗತ್ಯವಿಲ್ಲ" ಎಂದಿದ್ದೂ ಉಂಟು! ನನ್ನ ಕಿರಿಯ ತಮ್ಮನ ಸ್ಥಾನದಲ್ಲಿದ್ದು ನನಗೆ ಪೂರ್ಣ ಪ್ರಮಾಣದಲ್ಲಿ ಸಹಾಯ ಮಾಡುತ್ತಾ ನನ್ನ ಕೆಲಸಕ್ಕೆ ಸಂಪೂರ್ಣ ಬೆಂಬಲ ನೀಡುತ್ತಿದ್ದರು. ನನ್ನ-ಅವರ ಈ ಬಾಂಧವ್ಯವನ್ನು ಎಂದಿಗೂ ಮರೆಯಲಾರೆ. ನನ್ನನ್ನು ಅವರು ತಮ್ಮ ಹಿರಿಯಕ್ಕನಂತೆ ಕಂಡು 'ತಾಯಿ' ಎಂದು ಕರೆಯುತ್ತಿದ್ದರು.ಆ ರೀತಿಯ ಮಧುರವಾದ ಬಾಂಧವ್ಯ ನಮ್ಮ ನಡುವೆ ಇತ್ತು.

ಅನಂತಕುಮಾರ್ ತೆಗೆದುಕೊಳ್ಳುತ್ತಿದ್ದ ಯಾವುದೇ ನಿರ್ಧಾರಗಳು ಅಷ್ಟೊಂದು ಅಚಲವಾಗಿರುತ್ತಿತ್ತು.ನಿರ್ಧಾರಗಳನ್ನು ತೆಗೆದುಕೊಳ್ಳುವಂತಹ ವಿಷಯದಲ್ಲಿ ಅವರ ದೃಢತೆ-ಬುದ್ಧಿಮತ್ತೆ ಪ್ರತಿಫಲಿಸುತ್ತಿತ್ತು. ನಿರ್ಣಯವನ್ನು ಕೈಗೊಂಡ ಬಳಿಕ ಅದರಿಂದ ಎದುರಾಗುವಂತಹ ಸಮಸ್ಯೆಗಳನ್ನು ಎದುರಿಸುವಂತಹ ದಿಟ್ಟ ಮನೋಭಾವವು ಅವರಲ್ಲಿತ್ತು.

ಇನ್ನೊಂದು ವಿಷಯ ಪ್ರಧಾನಮಂತ್ರಿ ಹಾಗೂ ನನ್ನ ನಡುವೆಯೂ ಅವರು ಕೊಂಡಿಯಾಗಿದ್ದರು.ನಾನು ಹೇಳುವೆ,ನಾನು ತಿಳಿಸುವೆ ಎನ್ನುವಂತಹ ಭರವಸೆ ಕೊಡುತ್ತಿದ್ದರು.ಪಾರ್ಲಿಮೆಂಟ್ ವಸ್ತುಸಂಗ್ರಹಾಲಯವನ್ನು ಯಾವರೀತಿ ಸರಿಪಡಿಸಬೇಕು, ಅದರ ವಿನ್ಯಾಸವನ್ನು ಹೇಗೆ ಬದಲಾಯಿಸಬೇಕು, ಪಾರ್ಲಿಮೆಂಟಿನ ಹೊಸ ಕಟ್ಟಡ ಯಾವರೀತಿ ಇರಬೇಕು ಎಲ್ಲದರ ಬಗ್ಗೆ ಅವರು ನನಗೆ ಸಲಹೆ ನೀಡುವುದರೊಂದಿಗೆ ಇದರ ಬಗ್ಗೆ ನಾನು ಪ್ರಧಾನಿಗಳ ಗಮನಕ್ಕೆ ತರುವೆ ಎಂದು ಹೇಳುತ್ತಿದ್ದರು. 'ತಾನು ದೊಡ್ಡ ನಾಯಕ, ಅಂದಮೇಲೆ, ನಾನ್ಯಾಕೆ ಬೇರೆಯವರಿಗೆ ಸಹಾಯ ಮಾಡಬೇಕು' ಎಂದು ಕೂರುವ ಸ್ವಭಾವ ಅವರದ್ದಾಗಿರಲಿಲ್ಲ.ಸದಾ ನನಗೆ ಅವರ ಸಹಾಯಹಸ್ತ ಇದ್ದೇ ಇರುತ್ತಿತ್ತು.

ಕರ್ನಾಟಕದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಸಂಘಟನಾ ಕಾರ್ಯ ನಿರ್ವಹಿಸಿದ್ದ ಅನಂತಕುಮಾರ್ ಅವರು ಮಧ್ಯಪ್ರದೇಶದಲ್ಲಿ ಸಂಘಟನಾ ಕಾರ್ಯದ ಮೇಲುಸ್ತುವಾರಿಯ ಹೊಣೆಹೊತ್ತಿದ್ದಾಗ ಕಾರ್ಯಕ್ರಮದಲ್ಲಿ ನಡೆಯುತ್ತಿದ್ದ ಚರ್ಚೆಗಳು ಕೆಲವೊಂದು ಬಾರಿ ತೀವ್ರಸ್ವರೂಪವನ್ನು ಪಡೆದುಕೊಳ್ಳುತ್ತಿತ್ತು. ಎಲ್ಲಾ ಆದ ಬಳಿಕ ನನಗೆ ಇಂದು ನಾನು ಮಾತಾಡಿದ್ದು ಹೆಚ್ಚು ಬಿರುಸಾಗಿತ್ತೇನೋ ಎನ್ನುವ ಮನೋಭಾವ ಉಂಟಾಗಿ ನಾನು ಈ ಬಗ್ಗೆ ಅವರ ಬಳಿ ಹೇಳಿದಾಗ ' ಅರೇ! ಇಲ್ಲಾ ತಾಯಿ, ಕರ್ನಾಟಕದಲ್ಲಿ ನಾವು ಇನ್ನೂ ಹೆಚ್ಚು ತೀವ್ರವಾಗಿ ಚರ್ಚಿಸುತ್ತೇವಿ. ನೀವು ಒಮ್ಮೆ ಬಂದು ಭಾಗವಹಿಸಿ' ಎಂದು ಸಮಾಧಾನ ಮಾಡುತ್ತಿದ್ದರು. ನನ್ನದು ನೇರವಾಗಿ ಹೇಳಿಬಿಡುವ ಸ್ವಭಾವ ಕೆಲವೊಮ್ಮೆ ಹೆಚ್ಚು ಖಾರವಾಗಿ ಮಾತನಾಡಿ ಬಿಟ್ಟೆನೇನೋ ಎನ್ನುವ ಮನೋಭಾವ ಉಂಟಾಗಿ ಅದನ್ನು ಅವರ ಬಳಿ ವ್ಯಕ್ತಪಡಿಸಿದಾಗ ಮಧ್ಯಪ್ರದೇಶದವರು ನೀವೇನು ಜಗಳಗಂಟರಲ್ಲ, ನಮ್ಮ ಕರ್ನಾಟಕದಲ್ಲಿ ಎಷ್ಟು ಜಗಳ ಆಡ್ತೇವಿ ಬನ್ನಿ ನೋಡುವಿರಂತೆ..! ಎನ್ನುತ್ತಿದ್ದರು.

ಅವರಿಗೆ ಅನಾರೋಗ್ಯ ಇದ್ದಾಗ ಅದರಲ್ಲೂ ಕೆಮ್ಮು ಇದ್ದಾಗ . ಇದನ್ನು ತಿನ್ನಬಾರದು, ಈ ಔಷಧಿ ಸೇವಿಸುವಂತೆ ಹೇಳುತ್ತಿದ್ದೆ. ಆದರೆ ನನಗೆ ಕೊನೆಯಲ್ಲಿ ಗೊತ್ತಾಯಿತು ಅವರದ್ದು ವಾಸಿಯಾಗದ ಆರೋಗ್ಯಸ್ಥಿತಿ ಎಂದು. ಇದರ ಬಗ್ಗೆ ನನಗೆ ಹೇಳಲಿಲ್ಲವಲ್ಲ ಎನ್ನುವ ಸಾತ್ವಿಕಸಿಟ್ಟು ಇನ್ನೂ ಅವರ ಮೇಲಿದೆ! ಕೊನೆಯಲ್ಲಿ ಅದೂ ಆರು ತಿಂಗಳಲ್ಲಿ ಅವಿರತವಾಗಿ ದುಡಿದರು. ಇರುವ ಸಮಯದಲ್ಲಿ ನನ್ನ ಕೈಲಿ ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ಮಾಡಬೇಕು ಎಂದು ತೋರಿಸಿಕೊಟ್ಟಂತಹ ಚೈತನ್ಯಶೀಲ. ಅವರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ. ಅವರು ಇಲ್ಲದೇ ಇರುವುದು ತೇಜಸ್ವಿನಿಯವರಿಗೆ ಮಾತ್ರವಲ್ಲ ಪಕ್ಷಕ್ಕೂ ತುಂಬಲಾರದ ನಷ್ಟ.ಅವರು ಸರ್ಕಾರಕ್ಕೆ ಮಹತ್ವದ ಸಂಪತ್ತಾಗಿದ್ದರು, ಸಂಘಟನೆಗೆ ಆಧಾರವಾಗಿದ್ದರು. ಅಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ.

ಅಚ್ಚುಕಟ್ಟಾದ ವಸ್ತ್ರಧಾರಣೆ ಅವರದ್ದು., ಸದಾ ಹಸನ್ಮುಖಿ.ಅವರ ಉಡುಪಿನ ಬಗ್ಗೆ ನಾನು ಪ್ರಶಂಸೆ ಮಾಡಿದಾಗ ಅದನ್ನು ಸಮಚಿತ್ತದಿಂದ ಸ್ವೀಕರಿಸುತ್ತಿದ್ದರು.ಇಂತಹ ವ್ಯಕ್ತಿ ತಮ್ಮ ಆರೋಗ್ಯ ಇಷ್ಟು ಹದಗೆಟ್ಟಿದೆ ಎಂದು ಹೇಳಲೇ ಇಲ್ಲ. ಈ ಬಗ್ಗೆ ಪ್ರಧಾನಿಯವರಿಗೂ ಸಹ ಸ್ಪಷ್ಟತೆ ಇರಲಿಲ್ಲ.ಮೊದಲೇ ತಿಳಿದಿದ್ದರೆ ನಾವು ಅವರ ರಕ್ಷಣೆಗೆ ಹೆಚ್ಚಿನ ಒತ್ತು ನೀಡುತ್ತಿದ್ದೆವು. ಕೊನೆಯ ದಿನಗಳಲ್ಲಂತೂ



ಯಾರನ್ನೂ ತಮ್ಮ ಬಳಿ ಬರಗೊಡುತ್ತಿರಲಿಲ್ಲ. ಆದರೇ ನಾನು ಮಾತ್ರ ಹಠದಿಂದ ಹೋಗಿ ಅವರನ್ನು ಭೇಟಿ ಮಾಡುತ್ತಿದ್ದೆ.. ನಿಮ್ಮನ್ನು ಏನೆಂದು ತಿಳಿದುಕೊಂಡಿದ್ದೀರಿ, ನನಗೆ ಹಿರಿಯಕ್ಕನ ಸ್ಥಾನವನ್ನು ನೀಡಿದ್ದೀರಿ ಎಂದು ಘಟ್ಟಿಸಿ ಹೇಳುತ್ತಿದೆ. ಮೊದಲೆಲ್ಲಾ ಅವರು ನೋಡಲು ಸಮ್ಮತಿಸಿರಲಿಲ್ಲ. ಆದರೆ ವೈದ್ಯರು ಅನುನಯಿಸಿದ ಬಳಿಕ ನನಗೆ ಅವರನ್ನು ನೋಡಲು ಸಾಧ್ಯವಾಯಿತು..ಎಲ್ಲರೂ ನನ್ನನ್ನು ನಗುಮುಖದಲ್ಲಿ ನೋಡಿದ್ದಾರೆ.ಅವರ ಮನದಲ್ಲಿ ಹಾಗೆಯೇ ಇರಲಿ ಎಂದು ಹೇಳಿದ್ದರು.

ಅಟಲ್ ಜೀ ಅವರ ಸಾವಿನ ಸಂದರ್ಭದಲ್ಲೂ ಅನಂತಕುಮಾರರ ಆರೋಗ್ಯ ಸ್ಥಿರವಾಗಿರಲಿಲ್ಲ. ಅಟಲ್ ಜೀಯವರ ಅಸ್ಥಿವಿಸರ್ಜನೆಗೆ ಹೋಗುವುದು ಬೇಡವೆಂದು ಎಲ್ಲರೂ ಹೇಳಿದರೂ ಸಹ ಅವರು ತಮ್ಮ ಕರ್ತವ್ಯ ವಿಮುಖರಾಗಲಿಲ್ಲ. ಅನಾರೋಗ್ಯವಿದ್ದರೂ ಸಹ ಅಟಲ್ ಜೀ ಅವರು ನನ್ನ ತಂದೆ ಸಮಾನರು. ಅವರ ಅಸ್ಥಿವಿಸರ್ಜನೆಯ ಕಾರ್ಯಕ್ರಮದಲ್ಲಿ ನಾನು ಇರಲೇಬೇಕು ಎಂದು ಹೇಳುತ್ತಿದ್ದರು.

ಇಂತಹ ಅತ್ಯುತ್ತಮ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. 59 ವರ್ಷ ಸಾಯುವ ವಯಸ್ಸಲ್ಲ. ತೇಜಸ್ವಿನಿ ಧೈರ್ಯಸ್ಥೆ.. ಅವರ ಈ ಗುಣ ಹೆಚ್ಚು ಗಟ್ಟಿಯಾಗಲು ಅನಂತಕುಮಾರರ ಸಹಕಾರ ಕಾರಣ. ಬಹಳಷ್ಟು ರಾಜಕಾರಣಿಗಳಿಗೆ ಅವರ ಪತ್ನಿಯರ ಆಸಕ್ತಿ-ಕೆಲಸಗಳ ಬಗ್ಗೆ ತಿಳಿದಿರುವುದಿಲ್ಲ.ಆದರೆ ಇವರ ವಿಷಯ ಹಾಗಲ್ಲ.ನಮ್ಮೊಂದಿಗೆ ಚರ್ಚಿಸಿ ಯಾವರೀತಿ ವಿಚಾರ ಮಂಥನ ಮಾಡಿಕೊಳ್ಳುತ್ತಿದ್ದರೋ ಅದೇ ರೀತಿ ಅವರೊಂದಿಗೂ ವಿಚಾರವಿನಿಮಯ ಮಾಡಿಕೊಳ್ಳುತ್ತಿದ್ದರು.ತೇಜಸ್ವಿನಿಯ ಕೆಲಸಗಳಿಗೂ ಅಷ್ಟೇ ಮಹತ್ವ ನೀಡಿದ್ದರು.ತಾಯಿ ನಾನು ಈಗ ತೇಜಸ್ವಿನಿಯ ಕೆಲಸ ಪೂರ್ಣ ಮಾಡಬೇಕಿದೆ ಎಂದು ಹೇಳುತ್ತಿದ್ದರು.ಕೆಲಸದ ಸಮರ್ಥತೆ, ಯೋಚನೆ-ಯೋಜನೆ ಯಾವುದೇ ಇರಲಿ ಎಲ್ಲಾ ಪ್ರಶಂಸೆಯನ್ನು ತೇಜಸ್ವಿನಿಗೆ ಸಲ್ಲಿಸುತ್ತಿದ್ದರು.ಇಬ್ಬರೂ ಸೇರಿ ಮಾಡಿದ ಕೆಲಸಗಳಾಗಿದ್ದರೂ, ಅವುಗಳಿಂದ ದೊರೆತ ಗೆಲುವಿನ ಗರಿಯನ್ನು ಅವರು ಪತ್ನಿಗೇ ನೀಡುವಂತಹ ಉತ್ತಮಿಕೆಯನ್ನು ಹೊಂದಿದ್ದರು. ನನ್ನ ಈ ಆದರ್ಶ ಸೋದರನನ್ನು ಎಂದಿಗೂ ಮರೆಯುವಂತೆಯೇ ಇಲ್ಲ.

## ನೆನಪಿನ ಅಂಗಳದಿಂದ

ಪಠ್ಯ-ಸಂಯೋಜನೆ: ತೇಜಸ್ವಿನಿ ಅನಂತಕುಮಾರ್
ಚಿತ್ರಗಳು: ವಿವಿಧ ಮೂಲಗಳಿಂದ



### ವಿಶ್ವಸಂಸ್ಥೆಯಲ್ಲಿ ಕನ್ನಡದ ಕಂಪು

೨೦೧೨ ಅಕ್ಟೋಬರ್. ನಾವು ನ್ಯೂಯಾರ್ಕ್‌ಗೆ ಹೋಗಿದ್ದೆವು. ಅಲ್ಲಿ ವಿಶ್ವ ಸಂಸ್ಥೆಯ ಶೃಂಗಸಭೆಯಲ್ಲಿ ಅನಂತಕುಮಾರ್ ಅವರು ಭಾರತದ ಪ್ರತಿನಿಧಿಯಾಗಿ ಭಾಷಣ ಮಾಡುವ ಕಾರ್ಯಕ್ರಮ ಏರ್ಪಾಡಾಗಿತ್ತು. ಅಮೆರಿಕಾಗೆ ಹೋಗಿ ತಲುಪಿದ ಮಾರನೇ ದಿನವೇ ಅನಂತಕುಮಾರ್ ಅವರ ಮೊದಲನೇ ಭಾಷಣ ಇತ್ತು. ವಿಶ್ವಸಂಸ್ಥೆಯ ಸಭಾಂಗಣ. ಭಾಷಣಕಾರ ನಿಲ್ಲುವ ವೇದಿಕೆಗೆ ಹಸಿರು ಬಣ್ಣದ ಗ್ರಾನೈಟ್ ಹೊದಿಸಿದ ಹಿನ್ನೆಲೆ. ಇಬ್ಬದಿಯಲ್ಲಿ ಭಾಷಣಕಾರರ ಚಿತ್ರ ಮೂಡಿಸುವ ಎರಡು ದೊಡ್ಡ ಪರದೆಗಳು. ಪ್ರತಿ ಸದಸ್ಯ ದೇಶಕ್ಕೆ ಪ್ರತ್ಯೇಕವಾಗಿ ಐದಾರು ಜನ ಕುಳಿತುಕೊಳ್ಳುವಂಥ ವ್ಯವಸ್ಥೆಯಿರುತ್ತದೆ. ಮುಂಚಿತವಾಗಿ ಕೇಳಿಕೊಂಡಿದ್ದರಿಂದ ನನಗೆ ಸೀಟಿನ ವ್ಯವಸ್ಥೆ ಮಾಡಿದ್ದರು. ನನ್ನೊಡನೆ ಬಂದಿದ್ದ ಬಂಧುಗಳು ಪ್ರೇಕ್ಷಕರ ಗ್ಯಾಲರಿಯಿಂದ ಕಾರ್ಯಕ್ರಮವನ್ನು ವೀಕ್ಷಿಸಿದರು. ಅನಂತಕುಮಾರರ ಭಾಷಣವನ್ನು ಸಿದ್ಧಪಡಿಸುವ ರಾಯಭಾರಿವರ್ಗದ ಅಧಿಕಾರಿಗಳು ಅನಂತಕುಮಾರ್ ಅವರೊಂದಿಗೂ ಅದರ ಬಗ್ಗೆ ಚರ್ಚಿಸಿ ತಯಾರಿ ಮಾಡಿರುತ್ತಾರೆ. ಅನಂತಕುಮಾರ್ ಒಳಗೆ ಹೋಗುವಾಗ ಹೇಳಿದರು ಇವತ್ತು ಭಾಷಣದಲ್ಲಿ ಒಂದು ಸ್ವಲ್ಪ ಏನಾದರೂ ವಿಶೇಷ ಸೇರಿಸುತ್ತೀನಿ ಅಷ್ಟಕ್ಕೆ ಅವಕಾಶ ಇದೆ ಅಂತ ಕೇಳಿದ್ದೀನಿ ಎಂದರು. ಸಾಮಾನ್ಯವಾಗಿ ಯಾವುದೇ ಸಂದರ್ಭದಲ್ಲಿ ಅನಂತಕುಮಾರ್ ಒಂದು ವಿಶಿಷ್ಟವಾದುದನ್ನು ಮಾಡಿದರೂ ಮೊದಲು ಹೇಳುತ್ತ ಇರಲಿಲ್ಲ. ಆಮೇಲೆ ನೋಡು ಗೊತ್ತಾಗುತ್ತದೆ ಅಂತಲೇ ಅನ್ನುವವರು.



ಹೀಗಾಗಿ ವಿಶೇಷ ಏನಿರಬಹುದು ಎಂದು ನಾನು ಯೋಚನೆ ಮಾಡುತ್ತ ಇದ್ದೆ. ನಾನು ಈಕಡೆಗೆ ಕುಳಿತೆ. ಅಧಿಕಾರಿಗಳು ಭಾಷಣಕ್ಕೆ ಅನಂತಕುಮಾರರನ್ನು ಆಹ್ವಾನಿಸಿದರು. ಅವರು ಹೋಗಿ ಅಲ್ಲಿ ನಿಂತು ಭಾಷಣ ಪ್ರಾರಂಭ ಮಾಡಿದ್ದು ಕನ್ನಡದಲ್ಲಿ ! ಸನ್ಮಾನ್ಯ ಅಧ್ಯಕ್ಷರೇ, ವಿಶ್ವದ ನನ್ನ ಪ್ರೀತಿಯ ಸೋದರ ಸೋದರಿಯರೇ, ನಿಮ್ಮೆಲ್ಲರಿಗೂ ನನ್ನ ಮುಂಜಾವಿನ ಶುಭಾಶಯಗಳು

ಯು.ಎನ್.ಓ.ದ ಶೃಂಗಸಭೆಯಲ್ಲಿ ಕನ್ನಡದ ಧ್ವನಿಯಲ್ಲಿ ಮಾತುಗಳು ಕೇಳಿಬಂದಿದ್ದು ಅದೇ ಮೊದಲ ಬಾರಿಗೆ. ಅನಂತಕುಮಾರ್ ಅವರ ನುಡಿಗಳಲ್ಲಿ. ಇವತ್ತಿಗೂ ಬಹುಶ: ಎರಡನೆಯವರು ಮತ್ತೆ ಯಾರು ಕನ್ನಡದಲ್ಲಿ ಮಾತನಾಡಿದ್ದು ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಮುಂದೆ ಏನು ಲಿಖಿತ ಭಾಷಣ ಇತ್ತೋ ಅದನ್ನು ಅನಂತಕುಮಾರ್ ಇಂಗ್ಲೀಶ್‌ನಲ್ಲಿ ಮುಂದುವರೆಸಿದರು. ಕನ್ನಡದ ಕಂಪು ಬೀರಿದ ವಿಶ್ವಸಂಸ್ಥೆಯ ಅಂದಿನ ಅನುಭವ ಅವಿಸ್ಮರಣೀಯವಾಗಿ ಉಳಿಯಿತು.

### ಕಣ್ಮರೆಯಾದ ಸನ್ಮಿತ್ರ

ಕಳೆದ ವರುಷ ೨೦೧೯ ಸೆಪ್ಟೆಂಬರ್ ೨೨ ರಂದು ಅನಂತಕುಮಾರ್ ಪ್ರತಿಷ್ಠಾನದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದ ಗಣ್ಯರಲ್ಲಿ ಅನಂತಕುಮಾರರ ನಿಡುಗಾಲದ ಮಿತ್ರರೂ ಕೇಂದ್ರ ರೈಲ್ವೆ ರಾಜ್ಯಸಚಿವರೂ ಆಗಿದ್ದ ಶ್ರೀ ಸುರೇಶ್ ಅಂಗಡಿಯವರು ಒಬ್ಬರು.



೧೯೯೬ ರಲ್ಲಿ ತಮ್ಮ ರಾಜಕೀಯ ಬದುಕನ್ನು ಆರಂಭಿಸಿದ್ದ ಇವರು ನಾಲ್ಕು ಬಾರಿ (೨೦೦೪, ೨೦೦೯, ೨೦೧೪ ಮತ್ತು ೨೦೧೯)ಲೋಕಸಭೆ ಸಂಸದರಾಗಿ ಆಯ್ಕೆಯಾಗಿ ಇದೇ ಮೊದಲಬಾರಿಗೆ ಕೇಂದ್ರ ಸಚಿವರಾಗಿದ್ದರು. ರೈಲ್ವೆ ಸಚಿವರಾಗಿ ಅಂಗಡಿಯವರು ರಾಜ್ಯಕ್ಕೆ ನೀಡಿದ ಕೊಡುಗೆಯೂ ಅಪಾರ. ದಕ್ಷಿಣದ ಮೊದಲ ಕಿಸಾನ್ ರೈಲುಸೇವೆ ಆರಂಭ, ಬೆಳಗಾವಿ-ಬೆಂಗಳೂರು ಸೂಪರ್ ಫಾಸ್ಟ್ ರೈಲು, ಬೆಳಗಾವಿ-ಕಿತ್ತೂರು-ಧಾರವಾಡ ರೈಲುಮಾರ್ಗ ಸಮೀಕ್ಷೆಗೆ ಸಮ್ಮತಿ, ವಿಜಯಪುರ-ಮಂಗಳೂರು ರೈಲು,ಬಾಗಲಕೋಟೆ-ಕುಡಚಿ ರೈಲು ಮಾರ್ಗ ಕಾಮಗಾರಿಗೆ ಹೆಚ್ಚಿನ ಆದ್ಯತೆ, ಬಾಗಲಕೋಟೆ-ರೈಲುಮಾರ್ಗ ಕಾಮಗಾರಿಗೆ ಹೆಚ್ಚಿನ ಪ್ರಾಧಾನ್ಯತೆ..ಮೊದಲಾದವು ಶ್ರೀಯುತರ ಪ್ರಯತ್ನದಿಂದ ಸಾಧ್ಯವಾದವು. ಬೆಳಗಾವಿ ಭಾಜಪದ ಉಪಾಧ್ಯಕ್ಷರು, ಬೆಳಗಾವಿ ವಾಣಿಜ್ಯ ಮಂಡಲಿ ಕಾರ್ಯನಿರ್ವಾಹಕರು, ಬಿಜೆಪಿ ಅಧ್ಯಕ್ಷರು ಹೀಗೆ ಅನೇಕ ಸ್ಥಾನಗಳನ್ನು ನಿಭಾಯಿಸಿದ್ದರು.

ಅನಂತಕುಮಾರ್ ಪ್ರತಿಷ್ಠಾನದ ಪ್ರಾರಂಭೋತ್ಸವದ ದಿನದಂದು ಪಾಲ್ಗೊಂಡಿದ್ದ ಸುರೇಶ್ ಅಂಗಡಿಯವರು ಅಂದು, ಪ್ಲಾಸ್ಟಿಕ್ ಬಳಕೆಯನ್ನು ತಡೆಗಟ್ಟುವ ಉದ್ದೇಶದಿಂದ ಅದಮ್ಯ ಚೇತನ ಕೈಗೊಂಡಿರುವ ಸ್ಟೀಲ್ ಬಾಟಲುಗಳ ವಿತರಣಾ ಕಾರ್ಯವನ್ನು ಮೆಚ್ಚಿ ಪ್ರೋತ್ಸಾಹಿಸಿದ್ದರು. ಈ ಕಾರ್ಯಕ್ರಮವಾದ ಒಂದುವರ್ಷದಲ್ಲೇ ಸನ್ಮಿತ್ರರಾದ ಸುರೇಶ್ ಅಂಗಡಿಯವರ ನಿಧನವಾರ್ತೆ ಕೇಳಬೇಕಾಗಿ ಬಂದುದು ದುರ್ದೈವವೇ ಸರಿ.

ಅನಾರೋಗ್ಯದ ದೆಸೆಯಿಂದ ನವದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶ್ರೀ ಸುರೇಶ್ ಅಂಗಡಿಯವರು ಇದೇ ಸೆಪ್ಟೆಂಬರ್ ೨೩ರಂದು ನಿಧನರಾಗಿದ್ದಾರೆ. ಅವರಿಗೆ ೬೫ ವರ್ಷ ವಯಸ್ಸಾಗಿತ್ತು. ಅಂಗಡಿಯವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿ ಅವರ ಕುಟುಂಬದ ಸದಸ್ಯರಿಗೆ ದೊರೆಯಲೆಂದು ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಪ್ರಾರ್ಥಿಸುತ್ತೇವೆ.

### ಅನಂತವನ

ಅಕ್ಟೋಬರ್ 11, 2020. ಅನಂತಕುಮಾರ್ ಪ್ರಾರಂಭಿಸಿದ ಸಸ್ಯಾಗ್ರಹ ಆಂದೋಲನದ 250 ನೆಯ ಕಾರ್ಯಕ್ರಮ ಅಂದು ಜರುಗಿತು. ಅಂದಿನ ಹಸಿರು ಭಾನುವಾರ ಕಾರ್ಯಕ್ರಮವನ್ನು ಬೆಂಗಳೂರಿನ ಭಾರತೀಯ ವಿಜ್ಞಾನಸಂಸ್ಥೆ ಐ.ಐ.ಎಸ್.ಸಿ ಆವರಣದಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಅನಂತಕುಮಾರ್ ಹಾಗೂ ಶ್ರೀ ಹರೀಶ್ ಭಟ್ ಅವರ ಕೊಡುಗೆಯನ್ನು ನೆನಪಿಸಿಕೊಂಡೆವು. ಕಾರ್ಯಕ್ರಮದ ಅಂಗವಾಗಿ 56 ಸಸಿಗಳನ್ನು ನೆಡಲಾಯಿತು.



